ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 45 | ನವೆಂಬರ್ 4-10, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

CITU 14 ರಾಜ್ಯ ಸಮ್ಮೇಳನ

8-10 ನವೆಂಬರ್ 2019 ತುಮಕೂರು

ಸಿಐಟಿಯು 14ನೇ ರಾಜ್ಯ ಸಮ್ಮೇಳನದತ್ತ...

ಸರ್ಕಾರಕ್ಕೆ ಕಾರ್ಮಿಕರು ಸವಾಲೆಸೆದ ಮೂರು ವರ್ಷಗಳು





ಯುರೋಪಿನ ಆಯ್ದ ಎಂ.ಪಿ.ಗಳ ಪ್ರಾಯೋಜಿತ ಕಾಶ್ಮೀರ ಪ್ರವಾಸ!!



ಸ್ವತಂತ್ರರಾಗಿ ಅತಂತ್ರರಾದ 'ಅನರ್ಹ' ಶಾಸಕರು





ಟಿಪ್ಪುಸುಲ್ತಾನ್ : ಚರಿತ್ರೆ ಮತ್ತು ವಾಸ್ತವ



ಹಿರಿಯ ಕಾರ್ಮಿಕ ಮುಂದಾಳು ಕಾಂ. ಗುರುದಾಸ್ ದಾಸ್‌ಗುಪ್ತ ಇನ್ನಿಲ್ಲ

ಮೋದಿ ಸರಕಾರದ ಸುಳ್ಳು ಪ್ರಚಾರವನ್ನು ತಿರಸ್ಕರಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸರ್ದಾರ್ ಪಟೇಲ್ ಜನ್ಮದಿನದಂದೇ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಕೆಳದರ್ಜೆ

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕೆಳದರ್ಜೆಗೆ ಇಳಿಸಿ, ವಿಭಜಿಸಿ, ಲಡಾಖನ್ನು ಜಮ್ಮು ಮತ್ತು ಕಾಶ್ಮೀರದಿಂದ ಪ್ರತ್ಯೇಕಿಸುವ ಔಪಚಾರಿಕ ಘೋಷಣೆಯನ್ನು ಮಾಡಲು ಕೇಂದ್ರ ಸರಕಾರ ವಲ್ಲಭಬಾಯಿ ಪಟೇಲರ ಜನ್ಮ ದಿನವನ್ನೇ ಆರಿಸಿಕೊಂಡಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಸಂದರ್ಭದಲ್ಲಿ ಕಲಮು 370ನ್ನು ರದ್ದು ಮಾಡಿರುವುದಕ್ಕೆ, ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಭಜನೆ ಮತ್ತು ಅದರ ಸ್ಥಾನಮಾನವನ್ನು ಇಳಿಸಿರುವುದಕ್ಕೆ ತನ್ನ ಬಲವಾದ ವಿರೋಧವನ್ನು ಪುನರುಚ್ಚರಿಸಿದೆ.

ಒಂದು ಪೂರ್ಣ ಪ್ರಮಾಣದ ರಾಜ್ಯವನ್ನು ಅಲ್ಲಿಯ ಜನಗಳ ಅಥವ ರಾಜ್ಯ ವಿಧಾನಸಭೆಯ ಅಭಿಪ್ರಾಯವನ್ನು ಕೇಳದೆಯೇ ಕೆಳದರ್ಜೆಗೆ ಇಳಿಸಿರುವುದು, ಮತ್ತು ಅದನ್ನು ವಿಭಜಿಸಿರುವುದು ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ನಾಚಿಕಗೇಡಿನ ದಿನ. ಇದು ಭಾರತದ ಸಂವಿಧಾನದ ಕಲಮು 3ರ ನಗ್ನ ಉಲ್ಲಂಘನೆಯಾಗಿದೆ. ದೇಶದ ಒಕ್ಕೂಟ ರಚನೆಯೂ ಸೇರಿದಂತೆ ಸಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವವರಿಗೆ ಈ ದಿನ ಆಚರಿಸಲು ಏನೂ ಇಲ್ಲ.

ಈ ದಿನವನ್ನು ಆರಿಸಿಕೊಳ್ಳುವ ಮೂಲಕ ಸರಕಾರ ಇತಿಹಾಸವನ್ನು ಉತ್ಪಾದಿಸುವ ಮತ್ತು ಸತ್ಯವನ್ನು ನಿರ್ಮೂಲಗೊಳಿಸುವ ಅಮಿತ್ ಷಾ ಸೂತ್ರವನ್ನು ಜಾರಿಗೆ ತಂದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವ್ಯಂಗ್ಯವಾಡಿದೆ. ವಲ್ಲಭಭಾಯಿ ಪಟೇಲ್ ಕಲಮು 370ರಲ್ಲಿ ಭಾಗೀದಾರರಾಗಿದ್ದರು, ಮಾತ್ರವಲ್ಲ ಅದರ ಕರಡನ್ನು ರೂಪಿಸುವಲ್ಲಿಯೂ ತೊಡಗಿಸಿ ಕೊಂಡವರಾಗಿದ್ದರು ಎಂಬುದು ದಾಖಲಾಗಿರುವ ಸಂಗತಿ. ಪಟೇಲರ ಸ್ಮರಣೆಗಳಲ್ಲೂ ಅದು ದಾಖಲಾಗಿದೆ. 1949ರ ಮೇ 15 ಮತ್ತು 16ರಂದು ವಿಶೇಷ ಸ್ಥಾನಮಾನದ ಬಗ್ಗೆ ಜವಹರಲಾಲ್ ನೆಹರೂ ಮತ್ತು ಶೇಖ್ ಅಬ್ದುಲ್ಲಾರ ಜೊತೆಗೆ ವಲಭಭಾಯಿ ಪಟೇಲರ ಚರ್ಚೆಗಳು ಪಟೇಲರ ನಿವಾಸದಲ್ಲಿಯೇ ನಡೆದವು. ನಂತರ, ಅಂತಿಮವಾಗಿ ಕಲಮು 370 ಎಂದಾದುದರ ಕರಡನ್ನು ಪಟೇಲ್ ಮತ್ತು ಗೋಪಾಲಸ್ವಾಮಿ ಅಯ್ಯಂಗಾರ್ ರೂಪೀಕರಿಸಿದರು. ಸಂವಿಧಾನ ಸಭೆಯಲ್ಲಿ ಇದನ್ನು ಮಂಡಿಸಿದವರು ಕೂಡ ಪಟೇಲ್ ಅವರೇ. ಏಕೆಂದರೆ ಅಂದು ನೆಹರು ಅಮೆರಿಕಾ ಭೇಟಿಯಲ್ಲಿದ್ದರು.

ಈಗ ಈ ಕುರಿತ ಶಾಸನಗಳನ್ನು ಸಂಸತ್ತಿನಲ್ಲಿ ಪಾಸು ಮಾಡಿಸಿಕೊಂಡ ಎರಡೂವರೆ ತಿಂಗಳುಗಳ ನಂತರವೂ ಜಮ್ಮು ಮತ್ತು ಕಾಶ್ಮೀರದ ಜನತೆಗೆ ಈ ದೇಶದ ನಾಗರಿಕರಾಗಿ ಇರುವ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಬಿಜೆಪಿ ಮತ್ತು ಅದರ ಸಂಘಟನೆಗಳಲ್ಲದೆ ಬೇರೆ ಯಾರೂ ರಾಜಕೀಯ ಚಟುವಟಿಕೆ ನಡೆಸುವಂತಿಲ್ಲ. ಕಾಶ್ಮೀರದ ದನಿಯನ್ನು ಸಂಪೂರ್ಣವಾಗಿ ದಮನ ಮಾಡಲಾಗಿದೆ. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರಧಾನ ಮುಖಂಡರುಗಳು ಮತ್ತು ಇನ್ನೂ ಹಲವರು ಇನ್ನೂ ಜೈಲಿನಲ್ಲಿದ್ದಾರೆ. ಬೀಗ ಜಡಿದಿರುವ ಮತ್ತು ಮುಚ್ಚಿ ಬಿಟ್ಟಿರುವ ಪರಿಸ್ಥಿತಿ ಮುಂದುವರೆಯುತ್ತಿದೆ.

ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖಿನ ಜನಗಳಿಗೆ ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ನಿರಾಕರಿಸಿರುವುದರ ವಿರುದ್ಧ ಅವರೊಡನೆ ಸೌಹಾರ್ದವನ್ನುವ್ಯಕ್ತಪಡಿಸಬೇಕು ಎಂದು ಮನವಿ ಮಾಡಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರದ ಸುಳ್ಳು ಪ್ರಚಾರವನ್ನು ತಿರಸ್ಕರಿಸಬೇಕು ಎಂದೂ ಕೇಳಿಕೊಂಡಿದೆ.

ವಿದೇಶಿ ಎಂಪಿಗಳಿಗೆ ಮಾತ್ರ ಕಾಶ್ಮೀರ ಭೇಟಿಗೆ ಅವಕಾಶ: ಭಾರತೀಯ ಸಂಸತ್ತಿನ ಸಾರ್ವಭೌಮತೆಯ ವಿರುದ್ಧ ಬುಡಮೇಲು ಕೃತ್ಯ – ಸಿಪಿಐ(ಎಂ) ಪೊಲಿಟ್‌ಬ್ಯುರೋದ ಬಲವಾದ ಪ್ರತಿಭಟನೆ

ಮೋದಿ ಸರಕಾರ ಸಂಯೋಜಿಸಿದ ವಿವಿಧ ಯುರೋಪಿನ ದೇಶಗಳ ಬಲಪಂಥೀಯ ಛಾಪಿನ ಪಾರ್ಲಿಮೆಂಟ್ ಸದಸ್ಯರುಗಳ ಕಾಶ್ಮೀರ ಕಣಿವೆಯ ಭೇಟಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ. ಭಾರತೀಯ ಸಂಸತ್ ಸದಸ್ಯರು ಮತ್ತು ರಾಷ್ಟ್ರೀಯ ಪಕ್ಷಗಳ ಮುಖಂಡರಿಗೆ ಕಾಶ್ಮೀರ ಕಣಿವೆಗೆ ಭೇಟಿ ನೀಡುವ ಸ್ವಾತಂತ್ರ್ಯವನ್ನು ನಿರಾಕರಿಸಿರುವಾಗ ಕೆಲವು ವಿದೇಶಿ ಪಾರ್ಲಿಮೆಂಟ್ ಸದಸ್ಯರ "ಖಾಸಗಿ" ಎನ್ನಲಾದ ಭೇಟಿಗೆ ಅವಕಾಶ ನೀಡಿರುವುದು ಭಾರತೀಯ ಸಂಸತ್ತಿಗೆ ಮತ್ತು ಸಾರ್ವಭೌಮತೆಗೆ ಆಗಿರುವ ಒಂದು ಮುಖಭಂಗ ಎಂದು ಖಂಡಿಸಿರುವ ಪೊಲಿಟ್‌ಬ್ಯುರೊ ಇದನ್ನು ಖಾಸಗಿ ಭೇಟಿ ಎನ್ನಲಾಗುತ್ತಿದ್ದರೂ, ಪ್ರಧಾನ ಮಂತ್ರಿಗಳು ಅವರನ್ನು ಭೇಟಿಯಾಗಿದ್ದಾರೆ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರು ಅವರಿಗೆ ಮಾಹಿತಿ ನೀಡುತ್ತಿದ್ದಾರೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಕಾಶ್ಮೀರ ಕಣಿವೆಗೆ ಭೇಟಿ ನೀಡಲು ಬೇರೆಯವರಿಗೆ, ಅದರಲ್ಲೂ ನಮ್ಮದೇ ಎಂ.ಪಿ. ಗಳಿಗೆ ಹಾಗೂ ರಾಷ್ಟ್ರೀಯ ರಾಜಕೀಯ ಮುಖಂಡರಿಗೆ ಅವಕಾಶವಿಲ್ಲದಿರುವಾಗ, ರಾಜ್ಯದ ಸುಪರಿಚಿತ ರಾಜಕೀಯ ಮುಖಂಡರಲ್ಲಿ ಹೆಚ್ಚಿನವರು ಇನ್ನೂ ಬಂಧನದಲ್ಲಿ, ಸ್ಥಾನಬದ್ಧತೆಯಲ್ಲಿ ಇರುವಾಗ ವಿದೇಶಿ ಪಾರ್ಲಿಮೆಂಟ್ ಸದಸ್ಯರ ಒಂದು ಗುಂಪಿಗೆ ಈ ವಿಷಯದಲ್ಲಿ ವಿಶೇಷ ಸೌಲಭ್ಯವೇನೂ ಇರಲು ಸಾಧ್ಯವಿಲ್ಲ.

ಕಾಶ್ಮೀರ ಬಹುಮಟ್ಟಿಗೆ ಇನ್ನೂ ಮುಚ್ಚಿ ಹಾಕಲ್ಪಟ್ಟಿರುವ ಪರಿಸ್ಥಿತಿಯಲ್ಲಿದ್ದು, ವ್ಯಾಪಾರಿಗಳ ಸಂಘಟನೆಗಳು ಕಳೆದ ಮೂರು ತಿಂಗಳಲ್ಲಿ ರಾಜ್ಯದ ಅರ್ಥವ್ಯವಸ್ಥೆಗೆ 10,000 ಕೋಟಿ ರೂ.ಗಳ ಹಾನಿ ತಟ್ಟಿದೆ ಎಂದು ಹೇಳಿರುವುದಾಗಿ ವರದಿಯಾಗಿರುವಾಗ ಭಾರತೀಯ ರಾಜಕೀಯ ಪಕ್ಷಗಳು ಮತ್ತು ಎಂಪಿಗಳಿಗೆ ಭೇಟಿ ನೀಡಲು ಅವಕಾಶ ನಿರಾಕರಿಸುವುದು ಮತ್ತು ವಿದೇಶಿ ಎಂಪಿಗಳಿಗೆ ಅವಕಾಶ ನೀಡಿರುವುದು ಸರಕಾರ ಹೇಳಿಕೊಳ್ಳುತ್ತಿರುವಂತೆ 'ಸಾಮಾನ್ಯ ಸ್ಥಿತಿ' ಏರ್ಪಟ್ಟಿದೆ ಎಂಬುದನ್ನೇನೂ ಸಾಬೀತು ಮಾಡುವುದಿಲ್ಲ, ಅದಕ್ಕೆ ಯಾವುದೇ ಭೌತಿಕ ಆಧಾರ ಇಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕಾಶ್ಮೀರದಲ್ಲಿ ಪ್ರವಾಸಕ್ಕೆ ಮತ್ತು ಓಡಾಟಕ್ಕೆ ಇರುವ ಎಲ್ಲ ಮಿತಿಗಳನ್ನು ತೆಗೆದು ಹಾಕಬೇಕು ಎಂದು ಆಗ್ರಹಿಸಿದೆ.

ಸರಕಾರ ಎಲ್ಲ ದಮನಕಾರೀ ಕ್ರಮಗಳನ್ನು ನಿಲ್ಲಿಸಲು ಮತ್ತು ಜನಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತೆ ಸ್ಥಾಪಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂಬ ತನ್ನ ಆಗ್ರಹವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ನವಂಬರ್ 4ರಂದು ಆರ್.ಸಿ.ಇ.ಪಿ. ವಿರುದ್ಧ ರೈತರ ಮತ್ತು ಕಾರ್ಮಿಕರ ದೇಶವ್ಯಾಪಿ ಪ್ರತಿಭಟನಾ ಆಂದೋಲನ–ಎಐಕೆಎಸ್ ಕರೆ

ನರೇಂದ್ರ ಮೋದಿ ಸರಕಾರ 'ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದ' ಅಥವ ಆರ್.ಸಿ.ಇ.ಪಿ. ಎಂಬ ಏಷ್ಯ–ಶಾಂತಸಾಗರ ಪ್ರದೇಶದ 16 ದೇಶಗಳ ನಡುವಿನ ಒಂದು 'ಮುಕ್ತ ಆರ್ಥಿಕ ಒಪ್ಪಂದ'ಕ್ಕೆ ಸಹಿ ಹಾಕುವ ಸನ್ನಾಹದಲ್ಲಿವೆ. ಈಗಿನ ಎಲ್ಲ 'ಮುಕ್ತ ವ್ಯಾಪಾರ ಒಪ್ಪಂದ'ಗಳಂತೆ ಇದೂ ಭಾರತದಂತಹ ದೇಶಗಳ ಹಿತಗಳಿಗೆ ಮಾರಕವಾಗಿರುವುದರಿಂದ ರೈತ ಮತ್ತು ಕಾರ್ಮಿಕ ಸಂಘಟನೆಗಳು ಸರಕಾರ ಇದಕ್ಕೆ ಸಹಿ ಹಾಕಬಾರದು ಎಂದು ಆಗ್ರಹಿಸುತ್ತಲೇ ಬಂದಿವೆ. ಆದರೂ ಈ ಒಪ್ಪಂದ ಈಗ ಅಂತಿಮ ಹಂತ ತಲುಪಿದ್ದು ನವಂಬರ್ 4ರಂದು ಮೋದಿ ಸರಕಾರ ಇದಕ್ಕೆ ಸಹಿ ಹಾಕಲು ಮುಂದಾಗಿದೆ. ಇದನ್ನು' ಅಖಿಲ ಭಾರತ ಕಿಸಾನ್‌ಸಭಾ(ಎಐಕೆಎಸ್) ಬಲವಾಗಿ ಖಂಡಿಸಿದೆ. ಇತರ ರೈತ ಮತ್ತು ಕಾರ್ಮಿಕ ಸಂಘಟನೆಗಳ ಜತೆಗೂಡಿ ಆ ದಿನ ರಾಷ್ಟ್ರವ್ಯಾಪಿ ಪ್ರತಿಭಟನೆಗಳಿಗೆ ಅದು ಕರೆ ನೀಡಿದೆ.

ಆರ್.ಸಿ.ಇ.ಪಿ.ಗೆ ಸಹಿ ಹಾಕಿದರೆ ಅದು ದೇಶದ ಕೃಷಿ ಮತ್ತು ಕೈಗಾರಿಕೆ ಎರಡರ ಮೇಲೂ ದುಷ್ಪರಿಣಾಮ ಬೀರಲಿದೆ. ಇದಕ್ಕೆ ಸಹಿ ಹಾಕುವುದು ಮೋದಿ ಸರಕಾರದ ರೈತ–ವಿರೋಧಿ, ಕಾರ್ಮಿಕ–ವಿರೋಧಿ ಧೋರಣೆಯ ಭಾಗವೇ ಆಗಿದೆ ಎಂದು ಎಐಕೆಎಸ್ ಹೇಳಿದೆ.

ಭಾರತದಲ್ಲಿನ ಹೈನುಗಾರಿಕೆ 10 ಕೋಟಿ ರೈತ ಕುಟುಂಬಗಳಿಗೆ ಜೀವನಾಧಾರ ಒದಗಿಸಿದೆ. ಹಲವಾರು ವರ್ಷಗಳ ಶ್ರಮದಿಂದ ಕಟ್ಟಿದ ಸಹಕಾರಿ ರಚನೆಯಿಂದಾಗಿ ಹಾಲಿನ ಬೆಲೆಯ 71% ರೈತ ಕುಟುಂಬಗಳಿಗೆ ಮರಳಿ ಬರುತ್ತಿದೆ. ಆದರೆ ಆರ್.ಸಿ.ಪಿ.ಇ. ಭಾರತ ಹಾಲು ಮತ್ತು ಹಾಲಿನ ಉತ್ಪನ್ನಗಳ ಆಮದಿಗೆ ಹಾಕಿರುವ 64% ತೆರಿಗೆಯನ್ನು ತೆಗೆಯಬೇಕು ಎನ್ನುತ್ತದೆ. ಹೀಗಾದರೆ ಆಂತರಿಕ ಮಾರುಕಟ್ಟೆ ಕುಸಿದು ಬೀಳುತ್ತದೆ, ನಮ್ಮ ಡೇರಿ ರೈತರ ಹಿತಗಳಿಗೆ ಭಾರಿ ಆಘಾತ ಉಂಟಾಗುತ್ತದೆ ಎಂದು ಎಐಕೆಎಸ್ ಹೇಳಿದೆ.

ಈ 'ಮುಕ್ತ ವ್ಯಾಪಾರ ಒಪ್ಪಂದ' ತರಕಾರಿಗಳು, ಮೀನು, ಧಾನ್ಯಗಳು ಮತ್ತು ಮಸಾಲೆ ಪದಾರ್ಥಗಳು ಸೇರಿದಂತೆ ಹಲವಾರು ಕೃಷಿ ಉತ್ತಪನ್ನಗಳನ್ನೂ ಆವರಿಸಿಕೊಂಡಿದೆ. ಆದ್ದರಿಂದ ಇದಕ್ಕೆ ಒಪ್ಪಿಕೊಂಡರೆ, ಕರ್ಷಕ ಸಮುದಾಯದ 85% ಮಂದಿಯ, ಅಂದರೆ ಸಣ್ಣ ಮತ್ತು ಅಂಚಿನ ರೈತರು ಹಾಗೂ ಕೃಷಿ ಕೂಲಿಕಾರರ ಬದುಕು ಮೂರಾಬಟ್ಟೆಯಾಗುತ್ತದೆ.

ದೇಶದ ಪ್ರತಿಯೊಂದು ಪ್ರಮುಖ ಕೈಗಾರಿಕಾ ವಲಯದಿಂದಲೂ, ವಾಹನೋದ್ಯಮ, ಉಕ್ಕು, ಅಲ್ಯುಮಿನಿಯಂ, ತಾಮ್ರ, ಜವಳಿ ಮುಂತಾದ ಹಲವು ವಲಯಗಳಿಂದ ಇದಕ್ಕೆ ಬಲವಾದ ಪ್ರತಿರೋಧ ವ್ಯಕ್ತವಾಗಿದೆ. ಏಕೆಂದರೆ ಈ ಒಪ್ಪಂದವಾದರೆ, ಬೇರೆ ದೇಶಗಳಿಂದ ಅಗ್ಗದ ಸರಕುಗಳು ಬಂದು ರಾಶಿ ಬೀಳುತ್ತವೆ, ನಮ್ಮ ಉದ್ದಿಮೆಗಳು ನಾಶವಾಗುತ್ತವೆ ಎಂಬ ಭೀತಿ ಈ ವಲಯಗಳನ್ನು ಕಾಡುತ್ತಿದೆ.

ಆದ್ದರಿಂದ ನವಂಬರ್ 4ರಂದು ರೈತಾಪಿ ಜನಗಳೂ, ಕಾರ್ಮಿಕರೂ ಜತೆಯಾಗಿ ದೇಶಾದ್ಯಂತ ವ್ಯಾಪಕ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ಬಾದಲ್ ಚೌಧುರಿಯವರನ್ನು ಪೀಡಿಸುವುದನ್ನು ನಿಲ್ಲಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ತ್ರಿಪುರಾದ ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಮಾಜಿ ಮಂತ್ರಿ ಬಾದಲ್ ಚೌಧುರಿಯವರನ್ನು ತ್ರಿಪುರಾದ ಪೋಲೀಸರು ನಡೆಸಿಕೊಂಡಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರ ಕ್ರೋಧವನ್ನು ಮತ್ತು ಖಂಡನೆಯನ್ನು ವ್ಯಕ್ತಪಡಿಸಿದೆ.

ಬಾದಲ್ ಚೌಧುರಿ ಒಂದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅಕ್ಟೋಬರ್ 30ರಂದು ಆಸ್ಪತ್ರೆಗೆ ಬಂದ ಪೋಲೀಸರು ಅವರನ್ನು ಅಲ್ಲಿಂದ ಬಲವಂತವಾಗಿ ಕರೆದೊಯ್ದು ಪೋಲೀಸ್ ಲಾಕಪ್‌ನಲ್ಲಿ ಹಾಕಿದರು. ಕೆಲವೇ ನಿಮಿಷಗಳಲ್ಲಿ ಬಾದಲ್ ಚೌಧುರಿ ಅಸ್ವಸ್ಥರಾದರು. ಎದೆನೋವು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಂಡಿತು. ಸರಕಾರೀ ಡಾಕ್ಟರು ಅವರನ್ನು ಆಸ್ಪತ್ರೆಗೆ ಸೇರಿಸಿ ಎಂದು ಸಲಹೆ ನೀಡಿದ್ದರಿಂದ ಒಂದು ಗಂಟೆಯೊಳಗೆ ಮತ್ತೆ ಅವರನ್ನು ಸರಕಾರೀ ಆಸ್ಪತ್ರೆಗೆ ಒಯ್ದು ತೀವ್ರ ನಿಗಾ ಘಟಕ(ಐಸಿಯು)ಗೆ ಸೇರಿಸಬೇಕಾಯಿತು. ಹೈಕೋರ್ಟ್ ಅವರ ಜಾಮೀನು ಅರ್ಜಿಯನ್ನು ವಿಚಾರಿಸುತ್ತಿದ್ದಾಗಲೇ ಈ ಪೋಲೀಸ್ ಕಾರ್ಯಾಚರಣೆ ನಡೆದಿದೆ ಎಂಬುದನ್ನು ಗಮನಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ನ್ಯಾಯಾಲಯ ತೀರ್ಪನ್ನು ಕಾದಿರಿಸಿದೆ.

ಕಾಯಿಲೆಯಲ್ಲಿರುವ ಒಬ್ಬ ಮುಖಂಡರು, ಎಂಟು ಅವಧಿಗಳಲ್ಲಿ ಶಾಸಕರಾಗಿ ಆಯ್ಕೆಯಾದವರು ಹಾಗೂ ಹಿಂದಿನ ಎಡರಂಗ ಸರಕಾರದಲ್ಲಿ ಮಂತ್ರಿಯಾಗಿದ್ದವರ ವಿರುದ್ಧ ಪೋಲೀಸರ ಇಂತಹ ಬರ್ಬರ ಕಾರ್ಯಾಚರಣೆ ತೀವ್ರ ಖಂಡನೆಗೆ ಅರ್ಹವಾಗಿರುವ ಕೃತ್ಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ವಿಷಯದಲ್ಲಿ ತ್ರಿಪುರಾದ ಬಿಜೆಪಿ ಸರಕಾರವೂ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ ಎಂದಿದೆ.





ಸಂಪಾದಕೀಯ

ಸ್ವತಂತ್ರವಾಗಿ ಅತಂತ್ರರಾದವರು

ಸ್ವತಂತ್ರವಾಗಿ ಅತಂತ್ರರಾದ ಕರ್ನಾಟಕದ 17 ಬಂಡುಕೋರ ಕಾಂಗ್ರೆಸ್ ಜೆಡಿಎಸ್ ಶಾಸಕರು ಪಕ್ಷಾಂತರ ನಿಷೇದ ಕಾಯ್ದೆಯಡಿ ತಮ್ಮ ಅನರ್ಹತೆಯನ್ನು ಪ್ರಶ್ನಿಸಿ ಸಲ್ಲಿಸಿರುವ ರಿಟ್ ಅರ್ಜಿಗಳಿಗೆ ಸಂಬಂಧಿಸಿ ಐದು ದಿನಗಳ ಕಾಲ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತೀರ್ಪನ್ನು ಕಾಯ್ದಿರಿಸಿದೆ. ನವಂಬರ್ 4 ರ ವ ರೆಗೆ ಸುಪ್ರೀಂ ಕೋರ್ಟ್‌ಗೆ ದೀಪಾವಳಿ ರಜೆ ಇರಲಿದ್ದು ಆ ಬಳಿಕವೇ ತೀರ್ಪು ಪ್ರಕಟಗೊಳ್ಳುವ ಸಾಧ್ಯತೆ ಇದೆ. ನ್ಯಾಯಮೂರ್ತಿ ಎನ್.ವಿ. ರಮಣ, ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯ ಮೂರ್ತಿ ಕೃಷ್ಣ ಮುರಾರಿ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠದ ಮುಂದೆ ಐದು ದಿನಗಳ ಕಾಲ ವಾದ ವಿವಾದ ನಡೆದ ಬಳಿಕ ಸುಪ್ರೀಂ ಕೋರ್ಟ್ ತೀರ್ಪನ್ನು ಕಾಯ್ದಿರಿಸಿದೆ.

ಅಂದಿನ ಸ್ಪೀಕರ್ ರಮೇಶ್ ಕುಮಾರ್ ಅವರು ಈ ಶಾಸಕರನ್ನು ಪಕ್ಷಾಂತರ ನಿಷೇದ ಕಾಯ್ದೆ ಅಡಿಯಲ್ಲಿ ಅನರ್ಹಗೊಳಿಸಿದ ಬಳಿಕ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳು ತೆರವಾಗಿವೆ. ಅಕ್ಟೋಬರ್ 21 ರಂದು ಉಪಚುನಾವಣೆಗಳನ್ನು ನಡೆಸುವುದಾಗಿ ಚುನಾವಣಾ ಆಯೋಗವು ಈ ಮೊದಲು ಪ್ರಕಟಿಸಿತ್ತಾದರೂ ಬಳಿಕ ಡಿಸೆಂಬರ್ 5 ಕ್ಕೆ ಮುಂದೂಡಿತು. ನವಂಬರ್ 11 ರಿಂದ ನಾಮಪತ್ರ ಸಲ್ಲಿಕೆ ಪ್ರಾರಂಭವಾಗಲಿದ್ದು ನವಂಬರ್ 18 ನಾಮಪತ್ರ ಸಲ್ಲಿಸಲು ಕೊನೆಯ ದಿನ. ನವೆಂಬರ್ 11 ರೊಳಗೆ ತೀರ್ಪು ಪ್ರಕಟವಾಗಬಹುದೆಂದು ಅನರ್ಹ ಶಾಸಕರ ನಿರೀಕ್ಷೆಯಾಗಿದೆ. ಪ್ರಕರಣದ ವಿಚಾರಣೆ ಮುಗಿದರೂ ಅನರ್ಹರು ತೀರ್ಪು ಪ್ರಕಟವಾಗುವವ ವರೆಗೆ ಆತಂಕದಲ್ಲೇ ಕಾಲ ಕಳೆಯುವುದು ಅನಿವಾರ್ಯವಾಗಿದೆ.

ಹಿರಿಯ ನ್ಯಾಯವಾದಿಗಳು ಅವರವರ ಕಕ್ಷಿದಾರರ ಪರವಾಗಿ ಗಂಭೀರವಾಗಿ ವಾದ ಪ್ರತಿವಾದ ಮಂಡಿಸಿದ್ದಾರೆ. ಈ ಪ್ರಕರಣದಲ್ಲಿ ಹೊರಬೀಳುವ ತೀರ್ಪು ಒಂದು ದಾಖಲೆಯಾಗುವುದರಲ್ಲಿ ಸಂಶಯವಿಲ್ಲ. ಶಾಸಕರೊಬ್ಬರ ರಾಜೀನಾಮೆ ಪತ್ರ ಮತ್ತು ಅನರ್ಹತೆಯ ದೂರು ಸ್ಪೀಕರ್ ಅವರ ಮುಂದೆ ಏಕಕಾಲದಲ್ಲಿ ಬಂದಾಗ ಸ್ಪೀಕರ್ ಯಾವುದನ್ನು ಮೊದಲು ಇತ್ಯರ್ಥಗೊಳಿಸಬೇಕು? ಸ್ಪೀಕರ್ ಅನರ್ಹತೆಯ ಅವಧಿಯನ್ನು ನಿರ್ಧರಿಸಬಹುದೆ? ಇಂತಹ ಕೆಲವು ಪ್ರಶ್ನೆಗಳ ಬಗ್ಗೆ ದೇಶದ ಸಂವಿಧಾನ ಪೀಠ ಇದುವರೆಗೆ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಿದ್ದು ಕಂಡು ಬರುವುದಿಲ್ಲ. ಆದ್ದರಿಂದ, ಕಾಂಗ್ರೆಸ್ ಪರವಾಗಿ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್, ಪ್ರಕರಣದ ವಿಚಾರಣೆಯನ್ನು ಸಂವಿಧಾನ ಪೀಠಕ್ಕೆ ವರ್ಗಾಯಿಸಬೇಕೆಂದು ವಾದಿಸಿದರು.

ಏನೇ ಆಗಲಿ, ಸುಪ್ರೀಂ ಕೋರ್ಟ್ ಒಂದು ಮಾದರೀಯ ತೀರ್ಪನ್ನೇ ಪ್ರಕಟಿಸಲಿದೆ ಎಂದು ನಿರೀಕ್ಷಿಸೋಣ. ಆದರೆ ಹಿಂದಕ್ಕೆ ತಿರುಗಿ ನೋಡುವಾಗ, ಕರ್ನಾಟಕದ ಈ 17 ಜನ ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿದ್ದು ಹಾಗೂ ರಾಜೀನಾಮೆ ಕೊಟ್ಟದ್ದು ಯಾವ ಪ್ರಯೋಜನಕ್ಕೂ ಬರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ತಮ್ಮನ್ನು ಗೆಲ್ಲಿಸಿದ ಪಕ್ಷವನ್ನು ತೊರೆದು, ತಮಗೆ ಮತ ನೀಡಿದ ಮತದಾರರಿಗೆ ದ್ರೋಹ ಮಾಡಿ ಬೇರೊಂದು ಪಕ್ಷಕ್ಕೆ ಹಾರಲು ಪ್ರಯತ್ನ ಪಟ್ಟದ್ದು ಅವರಿಗೆ ಶೋಭೆಯನ್ನಂತೂ ತರಲಿಲ್ಲ. ತಮ್ಮ ಸ್ವಂತ ಪಕ್ಷಗಳ ಸರ್ಕಾರವನ್ನು ಪದಚ್ಯುತಗೊಳಿಸಿ, ಬೇರೊಂದು ಪಕ್ಷಕ್ಕೆ ಬೆಂಬಲ ನೀಡಿ ಅದನ್ನು ಅಕ್ರಮವಾಗಿ ಅಧಿಕಾರಕ್ಕೆ ತರುವ ಪ್ರಯತ್ನ ಮತ್ತು ಆ ಮೂಲಕ ಪಟ್ಟ ಪದವಿ ಪಡೆಯುವ ದುರಾಸೆ ಅತ್ಯಂತ ಆಕ್ಷೇಪಾರ್ಹವಾಗಿದೆ.

ಪಕ್ಷಾಂತರ ನಿಷೇದ ಕಾಯ್ದೆ ರಾಜ್ಯದಲ್ಲಿ ಜಾರಿಯಲ್ಲಿದ್ದರೂ ಪಕ್ಷಾಂತರ ಪಿಡುಗು ಮಾತ್ರ ನಿಂತಿಲ್ಲ. ಹಣದ ಆಸೆಗೆ, ಅಧಿಕಾರದ ವ್ಯಾಮೋಹಕ್ಕೆ ಒಳಗಾಗುವ ಇಂತಹ ಚುನಾಯಿತ ಪ್ರತಿನಿಧಿಗಳನ್ನು 'ಆಪರೇಷನ್' ಎನ್ನುವ ಹೆಸರಿನಲ್ಲಿ ಪಕ್ಷಾಂತರ ಮಾಡಿಸುವ ವಿಧಾನಗಳನ್ನು ಹುಟ್ಟುಹಾಕಲಾಗುತ್ತಿದೆ. ಅಂತಹ ಶಾಸಕ, ಸಂಸತ್ ಸದಸ್ಯರಿಗೆ ಮಾನ, ಮರ್ಯಾದೆ ಎಂಬುದೇ ಇರುವುದಿಲ್ಲ. ಇಂತಹ ಸಮಯ ಸಾಧಕರಿಗೆ ಸರಿಯಾದ ಪಾಠ ಕಲಿಸುವುದು ಆಗಬೇಕಾಗಿದೆ. ಪಕ್ಷಾಂತರ ನಿಷೇದ ಕಾಯ್ದೆಯೊಳಗಿನ ಲೋಪದೋಷಗಳನ್ನು, ಸಡಿಲಿಕೆಗಳನ್ನು ಕಿತ್ತು ಹಾಕಬೇಕು. ಅಗತ್ಯ ವೆನಿಸಿದರೆ ಇನ್ನೂ ಹೆಚ್ಚು ಕಠಿಣವಾದ ಮಸೂದೆಯನ್ನು ರಚಿಸಿ ಅಂಗೀಕರಿಸಬೇಕು. ಆದರೆ ಕಾಯ್ದೆ ರಚಿಸುವವರೇ ಕಾಯ್ದೆಯನ್ನು ಉಲ್ಲಂಘನೆ ಮಾಡುವವರಾದರೆ ಈ ಕೋತಿ ಆಟವನ್ನು ಕೊನೆಗೊಳಿಸುವುದು ಹೇಗೆ?

ಕರ್ನಾಟಕದ ಪ್ರಸಕ್ತ ಪ್ರಕರಣದಲ್ಲಿ ಬಿಜೆಪಿಯಲ್ಲಿ ಸೇರಿಕೊಂಡು ಸ್ಥಾನಮಾನ ಪಡೆಯಲು ಬಯಸುತ್ತಿರುವ ಅನರ್ಹರಿಗೆ ಬಿಜೆಪಿಯಲ್ಲಿ ಪ್ರವೇಶ ಸಿಗುವುದು ಗ್ಯಾರಂಟಿ ಇಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ಅನರ್ಹರ ಪರವಾಗಿ ಬ್ಯಾಟಿಂಗ್ ಮಾಡುತ್ತಿರುವಂತೆ ಕಾಣುತ್ತದೆ. ಆದರೆ ಡಿಸಿಎಂ ಲಕ್ಷ್ಮಣ ಸವದಿ ಈ ಅನರ್ಹರಿಗೂ ಬಿಜೆಪಿಗೂ ಏನೂ ಸಂಬಂಧವಿಲ್ಲ ಎಂದು ಕಡ್ಡಿ ಮುರಿದಂತೆ ಹೇಳುತ್ತಿದ್ದಾರೆ. ಬಿಜೆಪಿ ಒಳಗಿನ ಈ ಗೊಂದಲದಿಂದ ಅನರ್ಹರಿಗೆ ಆತಂಕ ತೀವ್ರವಾಗಿ ಕಾಡತೊಡಗಿದೆ. ಕೆಲವರು ಪಶ್ಚಾತ್ತಾಪಪಡುತ್ತಿದ್ದು ತಮ್ಮ ಮೂಲ ಪಕ್ಷಕ್ಕೆ ಹಿಂತಿರುಗಲು ದಾರಿ ಹುಡುಕುತ್ತಿದ್ದಾರೆ. ಎಲ್ಲ ರಾಜಕಾರಣಿಗಳು ಇದರಿಂದ ಪಾಠ ಕಲಿಯುವಂತಾಗಲಿ ಎಂದು ಹಾರೈಸೋಣ.

ಉದ್ಯೋಗ ಮತ್ತು ಮನರೇಗದ ಬಗ್ಗೆ ಅಖಿಲ ಭಾರತ ಸಮಾವೇಶ-ನವಂಬರ್ 4

ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ(ಎಐಎಡಬ್ಲ್ಯುಯು) ನವಂಬರ್ 4ರಂದು ನವದೆಹಲಿಯಲ್ಲಿ ಉದ್ಯೋಗ ಮತ್ತು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ(ಮನರೇಗ) ಕುರಿತಂತೆ ಅಖಿಲ ಭಾರತ ಸಮಾವೇಶವನ್ನು ನಡೆಸಲು ನಿರ್ಧರಿಸಿದೆ.

ನಮ್ಮ ಸಮಾಜದಲ್ಲಿ ಉದ್ಯೋಗದ ಪ್ರಶ್ನೆ ಒಂದು ಗಂಬೀರ ತಿರುವನ್ನು ಪಡೆದಿದೆ. ನಿರುದ್ಯೋಗ ಕಳೆದ 50ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟವನ್ನು ತಲುಪಿದೆ. ಆದ್ದರಿಂದ ನಿರುದ್ಯೋಗಿಗಳಿಗೆ ಮತ್ತು ಅರೆ ಉದ್ಯೋಗಿಗಳಿಗೆ ಗರಿಷ್ಠ ಕೆಲಸದ ಅವಕಾಶಗಳನ್ನು ಕಲ್ಪಿಸುವುದಕ್ಕೆ ಆದ್ಯತೆ ಅಗತ್ಯವಾಗಿದೆ. ಈ ಪ್ರಕ್ರಿಯೆಯಲ್ಲಿ 2005ರಲ್ಲಿ ತಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ) ಒಂದು ಅತ್ಯಂತ ಪರಿಣಾಮಕಾರಿ ಸುರಕ್ಷತಾ ಜಾಲವನ್ನು ಒದಗಿಸುವಂತದ್ದಾಗಿದೆ. ಎಐಎಡಬ್ಲ್ಯುಯು ಸೇರಿದಂತೆ ವಿವಿಧ ಸಾಮೂಹಿಕ ಸಂಘಟನೆಗಳು ಮತ್ತು ಯೂನಿಯನ್‌ಗಳ ದೀರ್ಘ ಹೋರಾಟಗಳ ಒತ್ತಡದಿಂದ ಯುಪಿಎ-1 ಸರಕಾರದ ಅಡಿಯಲ್ಲಿ ಇದು ಜಾರಿಗೆ ಬಂತು.

ಇದರಲ್ಲಿ ಬಹಳ ಮಿತಿಗಳಿದ್ದರೂ ಉದ್ಯೋಗದ ಹಕ್ಕನ್ನು ಈಡೇರಿಸುವತ್ತ ಇದೊಂದು ಮಹತ್ವದ ಹೆಜ್ಜೆಯಾಗಿತ್ತು. ಆದರೆ ಕೇಂದ್ರ ಸರಕಾರ ಸಾಕಷ್ಟು ಕೂಲಿಯೊಂದಿಗೆ ಸಾಕಷ್ಟು ಕೆಲಸ ಕೊಡುವಲ್ಲಿ ವಿಫಲವಾಗಿದೆ-ಕೆಲಸಕ್ಕೆ ಅರ್ಜಿ ಹಾಕಿದ 13 ಕೋಟಿ ಕುಟುಂಬಗಳಲ್ಲಿ ಅರ್ಧದಷ್ಟು ಕುಟುಂಬಗಳಿಗೆ, ಅದೂ ಸುಮಾರು 50 ದಿನಗಳ ಕೆಲಸಷ್ಟೇ ಸಿಕ್ಕಿದೆ. ಮಾತ್ರವಲ್ಲ, ಹಸಿವಿನ ಅಂಚಿನಲ್ಲಿರುವವರಿಗೆ ಕೂಲಿಗಳನ್ನು ಸಮಯಕ್ಕೆ ಸರಿಯಾಗಿ ಕೊಡುವಲ್ಲಿಯೂ ವಿಫಲವಾಗಿದೆ.

ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರವಂತೂ ಈ ಕಾಯ್ದೆಯನ್ನು ಧ್ವಂಸ ಮಾಡಲು ಸರ್ವ ಪ್ರಯತ್ನ ನಡೆಸಿದೆ. ಸತತವಾಗಿ ಹಣ ನೀಡದಿರುವುದು, ಕೂಲಿ ಪಾವತಿಯಲ್ಲಿ ವಿಳಂಬ, ತಾಂತ್ರಿಕ ಅಸಂಗತತೆಗಳು ಮತ್ತು ದೂರುಗಳ ನಿವಾರಣೆಗೆ ಯಾವುದೇ ದಾರಿಯಿಲ್ಲದಂತಾಗಿದೆ. ಆದರೂ ಅದೇ ವೇಳೆಗೆ ಈ ಕಾಯ್ದೆ ಕೃಷಿ ಕೂಲಿಕಾರರಿಗೆ ಮತ್ತು ಗ್ರಾಮೀಣ ಕೆಲಸಗಾರರಿಗೆ ದೈನಂದಿನ ಕೆಲಸದಲ್ಲಿ ಮೊದಲಿಗಿಂತ ಹೆಚ್ಚಿನ ಕೂಲಿ ಪಡೆಯುವಲ್ಲಿ ನೆರವಾಗಿದೆ.

ಈ ಹಿನ್ನೆಲೆಯಲ್ಲಿ ಎಐಎಡಬ್ಲ್ಯುಯು ಈ ಸಮಾವೇಶವನ್ನು ನಡೆಸಲು ನಿರ್ಧರಿಸಿದೆ. ಇದು ಮನರೇಗವನ್ನು ಕುರಿತಂತೆ ಚರ್ಚಿಸುತ್ತದೆ, ಪ್ರಶ್ನೆಗಳನ್ನು ಗುರುತಿಸುತ್ತದೆ ಮತ್ತು ಮನರೇಗವನ್ನು ಉಳಿಸಲು ಒಮದು ಜಂಟಿ ಪ್ರತಿರೋಧವನ್ನು ವಿಕಾಸಗೊಳಿಸುತ್ತದೆ. ಇದರಲ್ಲಿ ಕೇರಳ , ಪಶ್ಚಿಮ ಬಂಗಾಲ, ಉತ್ತರ ಪ್ರದೇಶ, ಬಿಹಾರ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಿಂದ ಸುಮಾರು 600ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಎಐಎಡಬ್ಲ್ಯುಯು ಹೇಳಿದೆ. ಕಾರ್ಮಿಕ ಸಂಘಗಳು, ಕಿಸಾನ್ ಸಭಾ ಮತ್ತು ಮಹಿಳಾ ಸಂಘಟನೆಗಳ ಮುಖಂಡರು ಈ ಸಮಾವೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಹಿರಿಯ ಕಾರ್ಮಿಕ ಮುಂದಾಳು ಗುರುದಾಸ್ ದಾಸ್‌ಗುಪ್ತ ನಿಧನ



ದೇಶದ ಒಬ್ಬ ಹಿರಿಯ ಕಾರ್ಮಿಕ ಮುಂದಾಳು ಮತ್ತು ದಶಕಗಳ ಕಾಲ ಪ್ರಖ್ಯಾತ ಸಂಸದೀಯ ಪಟುವಾಗಿದ್ದ ಗುರುದಾಸ್ ದಾಸ್‌ಗುಪ್ತ ಅಕ್ಟೋಬರ್ 31ರಂದು ನಿಧನರಾಗಿದ್ದಾರೆ. ಅವರಿಗೆ 84 ವರ್ಷವಾಗಿತ್ತು.

ಒಂದು ದಶಕಕ್ಕೂ ಹೆಚ್ಚು ಸಮಯದ ವರೆಗೆ ಎಐಟಿಯುಸಿ ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಗುರುದಾಸ್ ಗುಪ್ತ ಸರಿಯಾಗಿ ನೂರು ವರ್ಷಗಳ ಹಿಂದೆ ಈ ಸಂಘಟನೆ ದೇಶದ ಕಾರ್ಮಿಕ ಆಂದೋಲನದ ಐಕ್ಯತೆ ಮತ್ತು ಹೋರಾಟದ ಮತ್ತು ಸ್ವಾತಂತ್ರ್ಯ ಆಂದೋಲನದಲ್ಲಿ ಕಾರ್ಮಿಕ ವರ್ಗದ ಪಾತ್ರದ ಸಂದೇಶ ಬೀರುತ್ತ ಸ್ಥಾಪನೆಗೊಂಡ ದಿನವೇ ಕೊನೆಯುಸಿರೆಳೆದಿದ್ದಾರೆ ಎಂದು ಈ ಹಿರಿಯ ಕಾರ್ಮಿಕ ನೇತಾರನಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ನೆನಪಿಸಿಕೊಂಡಿದೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಕಮ್ಯುನಿಸ್ಟ್ ಆಂದೋಲನವನ್ನು ಸೇರಿದ ದಾಸ್‌ಗುಪ್ತ ದೀರ್ಘಕಾಲ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟಕ್ಕೂ ನೇತೃತ್ವ ನೀಡಿದವರು. ನಂತರ ಐದು ದಶಕಗಳ ಕಾಲ ಕಾರ್ಮಿಕ ಆಂದೋಲನದಲ್ಲಿ ದುಡಿದ ಇವರು ನವ-ಉದಾರವಾದಿ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗದ ಹೋರಾಟಕ್ಕೆ ನೇತೃತ್ವ ನೀಡಲು ಕಾರ್ಮಿಕ ಸಂಘಗಳ ಒಂದು ಐಕ್ಯ ವೇದಿಕೆಯನ್ನು ವಿಸ್ತಾರಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಸುಮಾರು ಎರಡೂವರೆ ದಶಕಗಳ ಕಾಲ ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ಸದಸ್ಯರಾಗಿಯೂ ಅವರು ದೇಶದ ದುಡಿಯುವ ಮತ್ತು ವಂಚಿತ ಜನವಿಭಾಗಗಳ ಹಿತಗಳನ್ನು ಪ್ರತಿಪಾದಿಸಿದರು.

ವರದಿ: ವಾ.ಉ.

ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ
ಸಿಪಿಐ(ಎಂ)ನಿಂದ 7 ಅಭ್ಯರ್ಥಿಗಳು

ಮಂಗಳೂರು ಮಹಾನಗರ ಪಾಲಿಕೆಯ ಆಡಳಿತಕ್ಕಾಗಿ ಬರುವ 2019 ನವಂಬರ್ 12 ರಂದು ಚುನಾವಣೆ ನಡೆಯಲಿದ್ದು, ಸಿಪಿಐ(ಎಂ) ಪಕ್ಷದ ವತಿಯಿಂದ 7 ಮಂದಿ ಅಭ್ಯರ್ಥಿಗಳನ್ನು ನಿಲ್ಲಿಸಲಾಗಿದೆ. ನಾಮಪತ್ರ ಸಲ್ಲಿಕೆಯ ಅಂತಿಮ ದಿನಕ್ಕೆ ಮುಂಚಿತವಾಗಿ 7 ಅಭ್ಯರ್ಥಿಗಳೂ ನಾಮಪತ್ರ ಸಲ್ಲಿಸಿದ್ದಾರೆ.



ಕೋರ್ಟು ವಾರ್ಡಿನಿಂದ ಸುನಿಲ್ ಕುಮಾರ್ ಬಜಾಲ್, ಜಪ್ಪಿನಮೊಗರು ವಾರ್ಡಿನಿಂದ ಜಯಂತಿ ಬಿ.ಶೆಟ್ಟಿ, ಪಂಜಿಮೊಗರು ವಾರ್ಡಿನಿಂದ ಅಹ್ಮದ್ ಬಶೀರ್, ಬಜಾಲು ವಾರ್ಡಿನಿಂದ ಸುರೇಶ್ ಬಜಾಲ್, ದೇರೆಬೈಲ್ ಪಶ್ಚಿಮ ವಾರ್ಡಿನಿಂದ ಸುನಂದಾ ಕೊಂಚಾಡಿ, ಪಣಂಬೂರು ವಾರ್ಡಿನಿಂದ ಸುನೀತಾ ಕೃಷ್ಣ ಮತ್ತು ಕದ್ರಿ ಪದವು ವಾರ್ಡಿನಿಂದ ನವೀನ್ ಕೊಂಚಾಡಿ – ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಸಿಪಿಐ(ಎಂ) ಅಭ್ಯರ್ಥಿಗಳಾಗಿರುತ್ತಾರೆ.

ಕಳೆದ ಪಾಲಿಕೆ ಚುನಾವಣೆಯಲ್ಲಿ ಪಂಜಿಮೊಗರು ವಾರ್ಡಿನಿಂದ ಸ್ಪರ್ಧಿಸಿದ್ದ ಸಿಪಿಐ(ಎಂ) ಅಭ್ಯರ್ಥಿ ಆಯ್ಕೆಯಾಗಿದ್ದರು. ಅದಕ್ಕೂ ಹಿಂದಿನ ಚುನಾವಣೆಯಲ್ಲಿ ಬಜಾಲು ವಾರ್ಡಿನಿಂದ ಸ್ಪರ್ಧಿಸಿದ್ದ ಸಿಪಿಐ(ಎಂ) ಅಭ್ಯರ್ಥಿ ಆಯ್ಕೆಯಾಗಿದ್ದರು. ಜಪ್ಪಿನಮೊಗರು ವಾರ್ಡಿನಲ್ಲಿ ಅದಕ್ಕೂ ಹಿಂದೆ ಸಿಪಿಐ(ಎಂ) ಅಭ್ಯರ್ಥಿ ಸ್ಪರ್ಧಿಸಿ ಗೆದ್ದ ಇತಿಹಾಸವಿದೆ.



ಎಂಆರ್‌ಪಿಎಲ್‌ನಲ್ಲಿ ಸ್ಥಳೀಯರಿಗೆ ಉದ್ಯೋಗಕ್ಕಾಗಿ ಆಗ್ರಹ– ಎರಡು ಕಡೆ ಡಿವೈಎಫ್‌ಐ ಧರಣಿ:

ಸಾರ್ವಜನಿಕ ರಂಗದ ಎಂಆರ್‌ಪಿಎಲ್ ಕಂಪೆನಿಯು 233 ಹುದ್ದೆಗಳ ನೇಮಕಾತಿಗಾಗಿ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಯಲ್ಲಿ ಸ್ಥಳೀಯ ದ.ಕ.ಜಿಲ್ಲೆಯ ಯುವಕರಿಗೆ ಶೇ.80 ರಷ್ಟು ಮೀಸಲಾತಿ ನೀಡುವಂತೆ ಆಗ್ರಹಿಸಿ ಎಂಆರ್‌ಪಿಎಲ್ ವಿರುದ್ಧ ದ.ಕ.ಜಿಲ್ಲೆಯ 2 ಡಿವೈಎಫ್‌ಐ ವಲಯ ಸಮಿತಿಗಳ ನೇತೃತ್ವದಲ್ಲಿ ಅಕ್ಟೋಬರ್ 29 ರಂದು ಪ್ರತ್ಯಪ್ರತ್ಯೇಕ 2 ಪ್ರತಿಭಟನೆಗಳು ನಡೆದವು.

ಎಂಆರ್‌ಪಿಎಲ್ ಪ್ರಧಾನ ಕಚೇರಿಯ ಎದುರು ಡಿವೈಎಫ್‌ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ನಡೆದ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಅಶ್ರಫ್ ಕೆ.ಸಿರೋಡ್, ಸಾಮಾಜಿಕ ಕಾರ್ಯಕರ್ತ ನ್ಯಾಯವಾದಿ ದಿನೇಶ್ ಹೆಗ್ಡೆ ಉಳೆಪಾಡಿ ಮಾತನಾಡಿದರು. ಮುನೀರ್ ಕಾಟಿಪಳ್ಳ ಮಾತನಾಡಿ, ಮಂಗಳೂರು ಕೈಗಾರಿಕಾ ವಲಯದಲ್ಲಿ ಬೃಹತ್ ಉದ್ದಿಮೆಗಳಿಗೆ ಭೂಮಿ ನೀಡುವಾಗ ಉದ್ಯೋಗ ಸೃಷ್ಟಿ, ನಿರುದ್ಯೋಗ ನಿವಾರಣೆಯ ಭರವಸೆಯನ್ನು ನೀಡಲಾಗಿತ್ತು; ಆದರೆ ಇಂದು ಎಂಆರ್‌ಪಿಎಲ್ ಮಾತ್ರವಲ್ಲದೆ ನವಮಂಗಳೂರು ಬಂದರು, ಕುದುರೆಮುಖ, ಎಂಸಿಎಫ್, ಎನ್‌ಐಟಿಕೆ, ಯುಪಿಸಿಎಲ್‌ನಂಥ ಸಾರ್ವಜನಿಕ ಸಂಸ್ಥೆಗಳು ಉದ್ಯೋಗ ನೀಡಿಕೆಯಲ್ಲಿ ದಮನೀಯ ವೈಫಲ್ಯ ಕಂಡಿದೆ. ಇರುವ ಉದ್ಯೋಗಗಳೂ ಹೊರ ರಾಜ್ಯಗಳ ಪಾಲಾಗುತ್ತಿದೆ, ಇದರಿಂದ ಜಿಲ್ಲೆಯ ಯುವಜನರು ನಿರುದ್ಯೋಗದಿಂದ ಕಂಗೆಟ್ಟು ಹಾದಿ ತಪ್ಪುತ್ತಿದ್ದಾರೆ. ಇದಕ್ಕೆ ಜನಪ್ರತಿನಿಧಿಗಳ, ಕಂಪೆನಿ ಆಡಳಿತಗಳ ತಾತ್ಸಾರ ಮನೋಭಾವವೇ ಕಾರಣ ಎಂದು ಆರೋಪಿಸಿದರು.



ಡಿವೈಎಫ್‌ಐ ಮಂಗಳೂರು ನಗರ ಕಾರ್ಯದರ್ಶಿ ಸಾದಿಕ್ ಕಣ್ಣೂರು ಸ್ವಾಗತಿಸಿದರು. ನಗರ ಸಮಿತಿ ಅಧ್ಯಕ್ಷ ನವೀನ್ ಕೊಂಚಾಡಿ ಅಧ್ಯಕ್ಷತೆ ವಹಿಸಿದ್ದರು. ಶ್ರೀನಾಥ್ ವಂದಿಸಿದರು.

ತೊಕ್ಕೊಟು ಬಸ್ ನಿಲ್ದಾಣದ ಬಳಿ ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿ ನೇತೃತ್ವದಲ್ಲಿ ನಡೆದ ಧರಣಿ ಕಾರ್ಯಕ್ರಮವನ್ನು ಉದ್ದೇಶಿಸಿ ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಪ್ರತಿಭಟನೆಯಲ್ಲಿ ಡಿವೈಎಫ್‌ಐ ಉಳ್ಳಾಲ ವಲಯ ಅಧ್ಯಕ್ಷ ಅಶ್ರಫ್ ಕೆ.ಸಿ.ರೋಡ್, ಡಿವೈಎಫ್‌ಐ ಮುಖಂಡರಾದ ಜೀವನ್‌ರಾಜ್ ಕುತ್ತಾರ್, ರಜಾಕ್ ಮೊಂಟೆಪದವು ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಬಾಬು ಪಿಲಾರ್, ರಫೀಕ್ ಹರೇಕಳ, ನಾರಾಯಣ ತಲಪಾಡಿ ಭಾಗವಹಿಸಿದ್ದರು. ಡಿವೈಎಫ್‌ಐ ಉಳ್ಳಾಲ ವಲಯ ಕಾರ್ಯದರ್ಶಿ ಸುನೀಲ್ ತೇವುಲ ಸ್ವಾಗತಿಸಿದರು. ಸಹ ಕಾರ್ಯದರ್ಶಿ ನಿತಿನ್ ಕುತ್ತಾರ್ ವಂದಿಸಿದರು.



ಸ್ಥಳೀಯರಿಂದಲೇ ರಸ್ತೆ ದುರಸ್ಥಿ

ಉರ್ವಾಸ್ಟೋರ್ ಜಂಕ್ಷನ್ನಿಂದ ಸುಂಕದಕಟ್ಟೆ ಪ್ರದೇಶಕ್ಕೆ ಹೋಗುವ ರಸ್ತೆಯಲ್ಲಿ ತುಂಬಾ ಹೊಂಡಗಳಿದ್ದು ವಾಹನಗಳು ಸಂಚರಿಸಲು ತುಂಬಾ ಹರಸಾಹಸ ಪಡುತ್ತಿದ್ದವು. ಇದರ ಬಗ್ಗೆ ಸ್ಥಳೀಯ ನಾಗರಿಕರು, ನಗರ ಪಾಲಿಕೆಗೆ ಎಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಸ್ಪಂದಿಸದ ಕಾರಣ ಸುಂಕದಕಟ್ಟೆ ಪ್ರದೇಶದ ನಾಗರಿಕರು 27 ಅಕ್ಟೋಬರ್ 2019 ರಂದು ತಾವೇ ಕಾಮಗಾರಿ ಮಾಡಿ ರಸ್ತೆಯಲ್ಲಿನ ಹೊಂಡಗಳನ್ನು ಮುಚ್ಚಿದರು. ಈ ದುರಸ್ಥಿ ಕಾರ್ಯಕ್ರಮದಲ್ಲಿ ಸ್ಥಳೀಯರಾದ ಮನೋಜ್ ಕುಲಾಲ್, ಯೋಗೀಶ್ ಕುಲಾಲ್, ಕೇಶವ ಎಂ. ಎಚ್, ಕೃಷ್ಣ ಗಟ್ಟಿ, ಶಶಿ, ಪ್ರಶಾಂತ್ ಎಂ.ಬಿ, ನಾಗೇಂದ್ರ, ರಘುವೀರ, ಸನತ್, ಇಕ್ಬಾಲ್ ಮುಂತಾದವರು ಉಪಸ್ಥಿತರಿದ್ದರು.

ತೆಂಕನಿಡಿಯೂರು: ನಿವೇಶನ ರಹಿತರ ಸಮಾವೇಶ

ತೆಂಕನಿಡಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತ ಅರ್ಹ ಫಲಾನುಭವಿಗಳ ಸಮಾವೇಶ 26 ಅಕ್ಟೋಬರ್ 2019 ರಂದು ಸ್ಥಳೀಯ ಸಮುದಾಯ ಭವನದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ ಕೋಣಿ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ, ನಿವೇಶನ ರಹಿತರ ಭೂಮಿ ಹಕ್ಕಿನ ಬೃಹತ್ ಹೋರಾಟ ದಿನಾಂಕ 18 ನವೆಂಬರ್ 2019 ರಿಂದ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಮಣಿಪಾಲದಲ್ಲಿ ಧರಣಿ ಮುಷ್ಕರ ಹೋರಾಟ ಕಾರ್ಯಕ್ರಮ ಯಶಸ್ವಿ ಗೊಳಿಸಬೇಕು ಎಂದು ಕರೆ ಕೊಟ್ಟರು. ಸಿಐಟಿಯು ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ನಿವೇಶನ ರಹಿತರ ಹೋರಾಟಕ್ಕೆ ಬೆಂಬಲಿಸಿ ಮಾತನಾಡಿದರು. ಮುಖಂಡರಾದ ಕವಿರಾಜ್. ಎಸ್. ಮಾತನಾಡಿದರು. ಉಮೇಶ ಕುಂದರ್, ನಳಿನಿ. ಎಸ್ ವೇದಿಕೆಯಲ್ಲಿ ಇದ್ದರು.



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಮರ್ಪಕ ಜಾರಿಗಾಗಿ ಕೃಷಿ ಕೂಲಿಕಾರರ ಸಮ್ಮೇಳನದ ಆಗ್ರಹ





ಯಾದಗೀರಿ ಜಿಲ್ಲೆಯ ಶಹಾಪುರ ಮತ್ತು ವಡಗೇರಿ ತಾಲೂಕುಗಳ 5ನೇ ತಾಲೂಕ್ ಜಂಟಿ ಸಮ್ಮೇಳನವು ಎರಡೂ ತಾಲೂಕುಗಳಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಪಕವಾಗಿ ಜಾರಿ ಬಡಕೂಲಿಕಾರರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಬೇಕೆಂದು ವಡೆಗೇರಿಯ ರಾಚೋಚೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಎರಡೂ ತಾಲೂಕುಗಳ ಜಂಟಿ ಸಮ್ಮೇಳದಲ್ಲಿ ಸರ್ಕಾರವನ್ನು ಒತ್ತಾಯಿಸಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಮಾತನಾಡುತ್ತಾ ಕೃಷಿ ಕೂಲಿಕಾರರು ಸಂಘಟನೆಯನ್ನು ಬಲಪಡಿಸಿ ಉದ್ಯೋಗ, ಕೂಲಿ, ವಾಸಕ್ಕೆ ಮನೆ, ವ್ಯವಸಾಯಕ್ಕೆ ಭೂಮಿ ಮೊದಲಾದ ಬೇಡಿಕೆಗಳಿಗಾಗಿ ಹೋರಾಡುತ್ತಾ ಸಮ ಸಮಾಜದ ನಿರ್ಮಾಣಕ್ಕಾಗಿಯೂ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಂಘದ ಜಿಲ್ಲಾ ಅಧ್ಯಕ್ಷ ದಾವಲ್‌ಸಾಬ್ ನದಾಫ್ ಮಾತನಾಡಿ ದೇಶದಲ್ಲಿ ಇನ್ನೊಂದು ಸ್ವಾತಂತ್ರ್ಯ ಚಳುವಳಿ ನಡೆಯಬೇಕಾಗಿದ್ದು ಕೂಲಿಕಾರರ ಮಕ್ಕಳು ತ್ಯಾಗಮಯ ಹೋರಾಟಕ್ಕೆ ಮುಂದಾಗಬೇಕೆಂದು ಮನವಿ ಮಾಡಿದರು.

ಶಹಾಪುರ ತಾಲೂಕ ಅಧ್ಯಕ್ಷರಾದ ಸವಿತಾ ಪೂಜಾರಿ ಅವರು ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಹ ಕಾರ್ಯದರ್ಶಿಗಳಾದ ಮಲ್ಲಮ್ಮ ಕೋಡ್ಲಿ ಮಾತನಾಡಿದರು.

ಶುಭ ಕೋರಿ ಮಾತಾನಾಡಿ:

ಮಲ್ಲೇಶಿ ಬಿರದಾರ ಗ್ರಾಂ. ಪಂ. ನೌಕರರ ಸಂಘದ ಜಿಲ್ಲಾಧ್ಯಕ್ಷರು. ಮತ್ತು ಅಂಗನವಾಡಿ ನೌಕರರ ಸಂಘ ತಾಲೂಕ ಅಧ್ಯಕ್ಷರಾದ ಬಸಲಿಂಗಮ್ಮ ನಾಟೆಕಾರ ಮಾತನಾಡಿದರು. ಸುರುಪುರ ತಾಲೂಕ ಅಧ್ಯಕ್ಷರಾದ ನಬಿಂಸೂಲ್, ಕಾರ್ಯದರ್ಶಿ ರಾಜು ದೊಡ್ಮನಿ, ಹುಣಸಗಿ ತಾಲೂಕ ಸಂಚಾಲಕರಾದ ಬಸವರಾಜ ಕಟ್ಟಿಮನಿ, ನೂರಾರು ಜನ ಭಾಗವಹಿಸಿದ್ದರು.

ಚರಂಡಿ, ರಸ್ತೆ ಇಲ್ಲದ ಮಂಗಳೂರು ನಗರ – ಬಿ. ಕೆ. ಇಮ್ತಿಯಾಜ್

ಮಂಗಳೂರು ಮಹಾನಗರ ಪಾಲಿಕೆ ಚುನಾವಣೆ ಅಂಗವಾಗಿ 25ನೇ ದೇರೆಬೈಲ್ ಪಶ್ಚಿಮ ವಾರ್ಡಿನ ಚುನಾವಣಾ ಸಭೆಯನ್ನು ಸುಂಕದಕಟ್ಟೆ ಉರ್ವಸ್ಟೋರ್‌ನಲ್ಲಿ 01 ನವೆಂಬರ್ 2019 ರಂದು ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಬಿ.ಕೆ. ಇಮ್ತಿಯಾಜ್‌ರವರು ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಮಂಗಳೂರನ್ನು ಶಿಕ್ಷಣದ ರಾಜಧಾನಿ, ವಾಣಿಜ್ಯದ ರಾಜಧಾನಿ ಎಂದು ಹೇಳುತ್ತಾರೆ. ಆದರೆ ಮಂಗಳೂರು ನಗರ ಜಗತ್ ವಿಖ್ಯಾತ ಆಗುವ ಬದಲು ಜಗತ್ ಕುಖ್ಯಾತವಾಗಿ ಮುಂದುವರಿಯುತ್ತಿದೆ. ಉದ್ಯೋಗ ನೀಡಲು, ಶಿಕ್ಷಣ ನೀಡಲು, ನಗರಾಭಿವೃದ್ಧಿ ಮಾಡಬೇಕಾದ ಪಾಲಿಕೆ ಇದ್ಯಾವುದನ್ನೂ ಮಾಡುತ್ತಿಲ್ಲ. ಇದರ ಬದಲು ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳನ್ನು ಹೆಚ್ಚಿಸಿ ಜನರ ಪ್ರಾಣ ತೆಗೆಯುವಂತೆ ಮಂಗಳೂರು ನಗರ ಬೆಳೆಯುತ್ತಿದೆ. ಮಂಗಳೂರು ನಗರ ಎಂದರೆ ಚರಂಡಿಯಿಲ್ಲದೆ, ರಸ್ತೆಯಿಲ್ಲದೆ, ರೋಗಗಳನ್ನು ಹುಟ್ಟಿಸುವ ನಗರವಾಗಿದೆ. ಮೂಲಭೂತ ಸಮಸ್ಯೆಯಲ್ಲಿ ನೀರಿನ ಸಮಸ್ಯೆ ಗಂಭೀರವಾಗಿದೆ ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಸುನಂದ ಕೆ. ಮಾತನಾಡುತ್ತಾ, ನಳ್ಳಿ ನೀರು, ಬೀದಿದೀಪ ಮುಂತಾದ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಬೇಕಾದ ಮಂಗಳೂರು ನಗರ ಯಾವುದೂ ಮಾಡಲಿಲ್ಲ. ನೀರಿನ ಬಿಲ್ ದರ ಹೆಚ್ಚಿಸಿ ಜನರನ್ನು ಬಲಿಪಶು ಮಾಡುತ್ತಿದೆ. ನಗರದಲ್ಲಿ ತ್ಯಾಜ್ಯಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತಿದೆ. ಒಳಚರಂಡಿ ಸಮಸ್ಯೆ ಇನ್ನೂ ಕೂಡ ಬಗೆಹರಿಸಲಿಲ್ಲ. ಮಹಾನಗರ ಪಾಲಿಕೆಯಲ್ಲಿ ಸಾಂಕ್ರಾಮಿಕ ರೋಗಗಳಿಗೆ ಹಣಕಾಸಿನ ವ್ಯವಸ್ಥೆ ಮಾಡುತ್ತಿಲ್ಲ. ಡೆಂಗ್ಯೂ ರೋಗಕ್ಕೆ ಅಧಿಕ ಮಂದಿ ಬಲಿಯಾಗಿದ್ದಾರೆ. ಅದಕ್ಕೆ ಸರಿಯಾದ ಚಿಕಿತ್ಸೆಯ ವ್ಯವಸ್ಥೆಯನ್ನೂ ಪಾಲಿಕೆ ಮಾಡಲಿಲ್ಲ ಎಂದು ಹೇಳಿದರು.



ಸಭೆಯಲ್ಲಿ ಸಿಪಿಐ(ಎಂ) ಮುಖಂಡರಾದ ಅಶೋಕ್ ಶ್ರೀಯಾನ್, ನಾಗೇಂದ್ರ, ರಘುವೀರ, ಮನೋಜ್ ಕುಲಾಲ್, ದಿನೇಶ್ ಶ್ರೀಯಾನ್, ಧನರಾಜ್, ಸರೋಜ ಉರ್ವಸ್ಟೋರ್, ದುಗ್ಗಪ್ಪ, ಗಂಗಾಧರ್, ನಾರಾಯಣ ಪೂಜಾರಿ, ಇಕ್ಬಾಲ್, ಪ್ರಶಾಂತ್ ಎಂ.ಬಿ. ಉಪಸ್ಥಿತರಿದ್ದರು.

ಪ್ರಶಾಂತ್ ಎಂ.ಬಿ.



ತಲ್ಲೂರು: ನಿವೇಶನ ರಹಿತರ ಭೂಮಿ ಹಕ್ಕಿನ ಹೋರಾಟಕ್ಕೆ ಸಿಐಟಿಯು ಬೆಂಬಲ – ಎಚ್. ನರಸಿಂಹ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮನೆ, ನಿವೇಶನ ರಹಿತರಿಗೆ ಸರಕಾರಿ/ಖಾಸಗಿ ಜಾಗ ಖರೀದಿಸಿ ಹಕ್ಕು ಪತ್ರ ಮಂಜೂರು ಮಾಡಬೇಕೆಂದು ಒತ್ತಾಯಿಸಿ, ದಿನಾಂಕ 18 ನವಂಬರ್ 2019 ಸೋಮವಾರದಿಂದ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಜರಗುವ ನಿವೇಶನ ರಹಿತರ ಭೂಮಿ ಹಕ್ಕಿನ ಬೃಹತ್ ಹೋರಾಟ, ಧರಣಿ ಮುಷ್ಕರಕ್ಕೆ ಸಿಐಟಿಯು ಜಿಲ್ಲಾ ಸಮಿತಿಗೆ ಸಂಯೋಜಿಸಲ್ಪಟ್ಟ ಎಲ್ಲಾ ಕಾರ್ಮಿಕ ಸಂಘಗಳ ಸಂಪೂರ್ಣ ಬೆಂಬಲ ಕೊಡಲಾಗುವುದು ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎಚ್. ನರಸಿಂಹ ಹೇಳಿದರು. ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಸಮಾವೇಶವು ದಿನಾಂಕ 22 ಅಕ್ಟೋಬರ್ 2019 ರಂದು ತಲ್ಲೂರು ಮುರ್ತೆದಾರರ ಸಭಾ ಭವನದಲ್ಲಿ ಜರುಗಿದ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಸಿಐಟಿಯು ಜಿಲ್ಲಾಧ್ಯಕ್ಷ ಕೆ. ಶಂಕರ್ ನಿವೇಶನ ರಹಿತರ ಈ ನಿರ್ಣಾಯಕ ಹೋರಾಟದಲ್ಲಿ ಜಿಲ್ಲೆಯ ಎಲ್ಲಾ ನಿವೇಶನ ರಹಿತ ಫಲಾನುಭವಿಗಳಿಗಳು ಭಾಗವಹಿಸಬೇಕು ಎಂದು ಕರೆ ಕೊಟ್ಟರು. ಕೃಷಿಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡಿದರು. ಮುಖಂಡರಾದ ನಾಗರತ್ನ ನಾಡ, ಅಮ್ಮಯ್ಯ ಪೂಜಾರಿ, ರಾಘವೇಂದ್ರ ಉಪ್ಪುಂದ ವೇದಿಕೆಯಲ್ಲಿ ಇದ್ದರು.

ಬೈಂದೂರು: ಕಟ್ಟಡ ಕಾರ್ಮಿಕರ ಬೃಹತ್ ಸಮಾವೇಶ

ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಬೈಂದೂರು ಗ್ರಾಮ ಸಮಿತಿಯ ಸರ್ವ ಸದಸ್ಯರ ಸಭೆಯ ದಿನಾಂಕ 31 ಅಕ್ಟೋಬರ್ 2019 ರಂದು ಬೈಂದೂರು ಸಿಐಟಿಯು ಕಚೇರಿ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು. ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಬೈಂದೂರು ತಾಲೂಕು ಕೇಂದ್ರವಾದ ಬೈಂದೂರು ಪೇಟೆಯ ಪರಿಸರ ವ್ಯಾಪ್ತಿಯಲ್ಲಿ ಕಾರ್ಮಿಕ ಸಂಘದ ಚಟುವಟಿಕೆಗಳು ಕ್ರೀಯಾಶೀಲಗೊಳಿಸಿ ಜನಪರ ಹೋರಾಟ ಸಂಘಟಿಸಲು ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು. ಕಾರ್ಮಿಕ ಮುಖಂಡ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡಿ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ರದ್ದು ಮಾಡಲು ಹೊರಟಿರುವ ಹಾಗೂ ಸೆಸ್ 1996 ರ ಕಾನೂನನ್ನು ತೆಗೆದು ಹಾಕುವ ಕಾರ್ಮಿಕ ವಿರೋಧಿ ಕೇಂದ್ರ ಸರ್ಕಾರದ ವಿರುದ್ಧ "ಡೆಲ್ಲಿ ಚಲೋ" ಪಾರ್ಲಿಮೆಂಟ್ ಭವನದ ಎದುರು ಜರಗುವ ಹೋರಾಟ ಯಶಸ್ವಿ ಗೊಳಿಸಬೇಕು ಎಂದು ಕರೆ ನೀಡಿದರು. ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ, ಕೋಶಾಧಿಕಾರಿ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಗಣೇಶ ಮೊಗವೀರ ವಿದ್ಯಾನಗರ ಸಭೆಯಲ್ಲಿ ಮಾತನಾಡಿದರು. ಗ್ರಾಮ ಸಮಿತಿ ಅಧ್ಯಕ್ಷೆ ಸುಮತಿ ಬೈಂದೂರು, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ತಾಲೂಕು ಪದಾಧಿಕಾರಿ ಮಾಧವ ದೇವಾಡಿಗ, ಅಮ್ಮಯ್ಯ ಪೂಜಾರಿ ಬೀಜೂರು, ಶ್ರೀಧರ ಉಪ್ಪುಂದ, ಉದಯ ಗಾಣಿಗ ಮೊಗೇರಿ, ವಿಜಯ ಕೋಯಾನಗರ, ಮೊದಲಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಗಣೇಶ ಮೊಗವೀರ ವಂದಿಸಿದರು.

ವರದಿ: ವೆಂಕಟೇಶ್ ಕೋಣಿ



ಟಿಪ್ಪು ಕಾಲದ 'ನರಮೇಧ': ಚರಿತ್ರೆ ಮತ್ತು ವಾಸ್ತವ

* **ಪ್ರೊ. ತಂಬಂಡ ವಿಜಯ್ ಪೂಣಚ್ಚ**

(ಕೃಪೆ: ಡೆಕ್ಕನ್ ನ್ಯೂಸ್ ವೆಬ್ ಪತ್ರಿಕೆ, ಅಕ್ಟೋಬರ್ 31, 2019)

ಟಿಪ್ಪು ಸುಲ್ತಾನನನ್ನು ಚರಿತ್ರೆಯ ಶಾಲಾ ಪಠ್ಯ ಪುಸ್ತಕಗಳಿಂದ ಮತ್ತು ಚರಿತ್ರೆಯಿಂದಲೇ ಅಳಿಸಿ ಹಾಕಲು ಬಿಜೆಪಿ ರಾಜ್ಯ ಸರಕಾರ ಮುಂದಾಗಿದೆ. ಇದು ಒಂದೆಡೆ ಜನಮಾನಸವನ್ನು ಕೋಮುವಾದೀಕರಿಸುವ ಸಂಘ ಪರಿವಾರದ ಶಾಶ್ವತ ಅಜೆಂಡಾದ ಮುಂದುವರಿಕೆ. ಇನ್ನೊಂದೆಡೆ ತೀವ್ರ ಆರ್ಥಿಕ ಹಿಂಜರಿತವನ್ನು ತಡೆಯಲು ಬಿಜೆಪಿ ಕೇಂದ್ರ ಸರಕಾರದ ಮತ್ತು ಕನಿಷ್ಟ ನೆರೆ ಪರಿಹಾರ ಒದಗಿಸಲು ರಾಜ್ಯಸರಕಾರದ ವೈಫಲ್ಯಗಳನ್ನು ಮುಚ್ಚಿ ಜನರ ಗಮನ ಬೇರೆಡೆ ಸೆಳೆಯುವುದಾಗಿದೆ. ಹಿಂದೆ ಟಿಪ್ಪು ಕುರಿತು ಸಂಘ ಪರಿವಾರದ 'ರಾಷ್ಟ್ರೋತ್ಥಾನ'ದ 'ಭಾರತ ಭಾರತಿ' ಮಾಲಿಕೆಯಲ್ಲಿ ಪುಸ್ತಕ ಪ್ರಕಟವಾಗಿತ್ತು. ರಾಮಜನ್ಮಭೂಮಿ ಚಳುವಳಿಯ ನಂತರದ ವ್ಯಾಪಕ ಕೋಮುವಾದೀಕರಣದ ಯೋಜನೆಯ ಭಾಗವಾಗಿ ಟಿಪ್ಪುವನ್ನು 'ಮತಾಂಧ ಮುಸ್ಲಿಂ ಸುಲ್ತಾನ'ನಾಗಿ ಬಿಂಬಿಸುವ ಹುನ್ನಾರದಲ್ಲಿ ತೊಡಗಿತು.


ಟಿಪ್ಪು ಸುಲ್ತಾನನ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ದೃಢ ಪ್ರತಿರೋಧ, ಧರ್ಮಸ ಸಹಿಷ್ಣುತೆ, ಮೈಸೂರನ್ನು ಮುಂದೆ 'ಮಾದರಿ ರಾಜ್ಯ'ವಾಗಿಸಿದ ಕೃಷಿ ಸುಧಾರಣೆಗಳು ಮತ್ತು ಪ್ರಗತಿಪರ ಜನಪ್ರಿಯ ಆಡಳಿತ, ಲಾವಣಿ ನಾಟಕಗಳ ಮೂಲಕ ಜನಮಾನಸದಲ್ಲಿ 'ಹೀರೋ' ಆಗಿದ್ದು –ಇವುಗಳಿಂದಾಗಿ ಇದು ಸುಲಭವಾಗಿರಲಿಲ್ಲ. ಆದ್ದರಿಂದ ಟಿಪ್ಪುವಿನ (ಯಾವುದೇ ರಾಜ ಕೈಗೊಳ್ಳುವ))ಕೆಲವು ಕ್ರೂರ ಕ್ರಮಗಳಿಗೆ ಕೋಮು ಬಣ್ಣ ಹಚ್ಚಿ ಅತಿರಂಜಿತಗೊಳಿಸಿ 'ಮತಾಂಧ' ಎಂಬ'ಪಟ್ಟಕಟ್ಟುವ ಪ್ರಯತ್ನ ಮಾಡಲಾಯಿತು. ತನ್ನ ವಿರುದ್ಧ ಬಂಡೆದ್ದ ಅಥವಾ ಪಿತೂರಿ ಮಾಡಿದ ಕೆಲವು (ಮಲಬಾರಿನ ನಾಯರಿಗಳು,ಮಂಗಳೂರಿನ ಕ್ಯಾಥೊಲಿಕರು,ಕೊಡವರು) ವ್ಯಕ್ತಿಗಳ ವಿರುದ್ಧ ಟಿಪ್ಪು ತೆಗೆದುಕೊಂಡ ಕಟು ಕ್ರಮಗಳನ್ನು ಇದಕ್ಕಾಗಿ ಬಳಸಿಕೊಳ್ಳಲಾಯಿತು. ಇವುಗಳಲ್ಲಿ ಕೊಡವರ ವಿರುದ್ಧ ತೆಗೆದುಕೊಂಡ ಕ್ರಮಗಳ ಬಗ್ಗೆ ಸಂಘಪರಿವಾರದ ಕೋಮುವಾದಿ ಅಪಪ್ರಚಾರ ಬಹಳ ಮಟ್ಟಿಗೆ 'ಕ್ಲಿಕ್'' ಆಗಿದೆ.

ಸಂಘ ಪರಿವಾರದ ಇತಿಹಾಸ ತಿರಿಚುವ,ನಿಜವಾದ ಐತಿಹಾಸಿಕ ಸತ್ಯಗಳನ್ನು ಅಳಿಸಿ ಹಾಕುವ, ಸುಳ್ಳು ಇತಿಹಾಸವನ್ನು ಸೃಷ್ಟಿಸುವ ಹುನ್ನಾರವನ್ನು ಎದುರಿಸಲು ಅಷ್ಟೇ ವ್ಯಾಪಕವಾಗಿ ಐತಿಹಾಸಿಕ ಸತ್ಯಗಳನ್ನು ಹೇಳುವುದು, ಸುಳ್ಳುಗಳನ್ನು ಬಯಲು ಮಾಡುವುದು ಒಂದೇ ದಾರಿ. ಈ ಕೆಲಸದಲ್ಲಿ ಇತಿಹಾಸಕಾರರ ಪಾತ್ರ ಮಹತ್ವದ್ದು. ಕೊಡವರ ವಿರುದ್ಧ ಟಿಪ್ಪು ಮಾಡಿದನೆಲ್ಲಾದ 'ನರಮೇಧ', ಅತ್ಯಾಚಾರ'ಗಳಿಗೆ ಐತಿಹಾಸಿಕ ಆಧಾರ ಇದೆಯೇ ಎಂದು ಹಂಪಿ ವಿ.ವಿ.ಯ ಇತಿಹಾಸ ಪ್ರಾಧ್ಯಾಪಕ

ಪ್ರೊ. ವಿಜಯ್ ಪೂಣಚ್ಚ ಈ ಲೇಖನದಲ್ಲಿ ವಿಶ್ಲೇಷಿಸುತ್ತಾರೆ. ಐತಿಹಾಸಿಕ ಆಧಾರವಿಲ್ಲದ ಅಂತೆ ಕಂತೆಗಳನ್ನು ಜನ ನಂಬುವಂತೆ ಮಾಡಿದ ರಾಜಕೀಯ ಪ್ರಕ್ರಿಯೆಯನ್ನು ಅವರು ವಿವರಿಸುತ್ತಾರೆ. ಇದರಲ್ಲಿ ಸಂಘ ಪರಿವಾರವಲ್ಲದೆ ಕೆಲವು ಕಾಂಗ್ರೆಸಿಗರ, ಕೆಲವು ನಕ್ಸಲೈಟ್ ಗುಂಪುಗಳ ಮತ್ತು ಕೊಡವ ಪ್ರತ್ಯೇಕತಾವಾದಿ ಧಾರೆಗಳ ಪಾತ್ರವನ್ನು ಗುರುತಿಸುತ್ತಾರೆ. ಕೋಮುವಾದೀಕರಣ ಬರಿಯ ಸಂಘ ಪರಿವಾರದ ಅಪಪ್ರಚಾರದಿಂದಲೇ 'ಕ್ಲಿಕ್''ಆಗುವುದಿಲ್ಲ. ಸೆಕ್ಯುಲರ್ ವಾದದ ಬಗ್ಗೆ ರಾಜಕೀಯ ಅವಕಾಶವಾದ ತೋರಿಸುವ ಇತರ ರಾಜಕೀಯ ಶಕ್ತಿಗಳತ್ತವೂ ಆ ಮೂಲಕ ನಮ್ಮ ಗಮನ ಸೆಳೆಯುತ್ತಾರೆ. ಕೋಮುವಾದ ಮತ್ತು ಸೆಕ್ಯುಲರಿಸಂ ಎರಡೂ ಯುರೋಪು ಕೇಂದ್ರಿತ ಸಿದ್ಧಾಂತ ಎಂಬ ಅವರು ಸೂಚಿಸುವ ನಿಲುವು ಒಪ್ಪದೆಯೂ ಈ ಪ್ರಕ್ರಿಯೆಯನ್ನು ಅರ್ಥೈಸಬಹುದು.

ಕೋಮುವಾದೀಕರಣದ ಇಂತಹ ಪ್ರಕ್ರಿಯೆ ಗುರುತಿಸಿ ಅದಕ್ಕೆ ತಕ್ಕ ಸಮಯದಲ್ಲಿ ತಕ್ಕ ರೀತಿಯಲ್ಲಿ ಪ್ರತಿಕ್ರಿಯಿಸದ ನಿಜವಾದ ಎಡ ಪ್ರಜಾಸತ್ತಾತ್ಮಕ ಹಾಗೂ ಸೆಕ್ಯುಲರ್ ಶಕ್ತಿಗಳ ನ್ಯೂನತೆಯನ್ನು ಇಲ್ಲಿ ಗುರುತಿಸಬಹುದು.

ಟಿಪ್ಪುವು ಮಾಡಿದೆನ್ನಲ್ಲಾದ ನರಮೇಧ, ಅತ್ಯಾಚಾರ ಇತ್ಯಾದಿ ವಿಚಾರಗಳು ಪ್ರತಿನಿತ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವುದನ್ನು ಗಮನಿಸಿದಾಗ ಕಂಡುಬರುವ ಅಂಶಗಳು ಎರಡು. ಒಂದನೆಯದು, ಈ ಬಗೆಯ "ಘಟನೆಗಳು" ನಡೆದಿವೆ ಎಂದು ಬಿಂಬಿಸುತ್ತಿರುವವರು ಯಾರು ಎಂಬುದು. ಬಿಜೆಪಿ ಹೊರತಾದ ಶಕ್ತಿಗಳೂ ಇದರಲ್ಲಿ ಸಕ್ರಿಯವಾಗಿವೆ ಎಂಬ ವಿಷಯವನ್ನು ಇಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಎರಡನೆಯದಾಗಿ, ಇಂತಹ ಘಟನೆಗಳು ದಾಖಲಾಗಿದ್ದರೆ ಅವುಗಳನ್ನು ಪತ್ತೆ ಹಚ್ಚಿ ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ. 1990ರ ದಶಕದಲ್ಲಿ "ಕೊಡವ ರಾಷ್ಟ್ರೀಯತೆ'ಯ ಮೂಲಕ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆನ್ನುವ ಹೋರಾಟವನ್ನು ಹಮ್ಮಿಕೊಂಡಿದ್ದ ಲಿಬರೇಷನ್ ವಾರಿಯರ್ಸ್ ಆಫ್ ಕೊಡಗು ಎನ್ನುವ ಸಂಘಟನೆಯು ಮಾರ್ಕ್ಸಿಸ್ಟ್–ಲೆನಿನಿಸ್ಟ್ ಸಿದ್ಧಾಂತದ ಮೂಲಕ, ಮಾರ್ಕ್ಸ್, ಫಿಡೆಲ್, ಮಂಡೆಲಾರವರ ಆದರ್ಶಗಳೊಂದಿಗೆ ಆರಂಭವಾಗಿತ್ತು. ತನ್ನೊಳಗೆ ಅಂತರ್ಗತವಾಗಿದ್ದ ಹಿಂಸಾಪ್ರವೃತ್ತಿಗಳಿಂದಾದ ಕಾನೂನಿನ ತೊಡಕಿನಿಂದ ಪಾರಾಗಲು ಈ ಸಂಸ್ಥೆ ನೇಪಥ್ಯಕ್ಕೆ ಸರಿಯಿತು. ನಂತರದ ದಿನಗಳಲ್ಲಿ ದಲಿತರ, ಬುಡಕಟ್ಟುಗಳ, ಮೂಲನಿವಾಸಿಗಳ ಸಾಮಾಜಿಕ ನ್ಯಾಯಕ್ಕಾಗಿ "ಗಾಂಧಿ



ಮಾರ್ಗದ ಮೂಲಕ ಹೋರಾಡುತ್ತೇವೆಯೆಂದು ಈ ಸಂಘಟನೆ ಕೊಡಗು ರಾಜ್ಯ ಮುಕ್ತಿ ಮೋರ್ಚಾರ ಎಂಬ ಹೆಸರಿನಿಂದ ಕೆಲಸ ನಿರ್ವಹಿಸಲು ಆರಂಭಿಸಿತು. ಆದರೆ, ಕೊಡಗಿನ ಜನಸಂಖ್ಯೆಯಲ್ಲಿ ಸುಮಾರು ಶೇ. 15 ರಷ್ಟಿರುವ ಮೇಲ್ಜಾತಿಯ ಕೊಡವರ ಹಿತಾಸಕ್ತಿಗಳನ್ನು ಮಾತ್ರ ಈ ಸಂಘಟನೆ ಪ್ರತಿನಿಧಿಸುತ್ತದೆ ಎಂಬ ಕಾರಣಕ್ಕಾಗಿ ಉಳಿದ ಕೊಡಗು ಭಾಷಿಕ ಸಮುದಾಯಗಳು, ಹಿಂದುಳಿದ ಜಾತಿಗಳು, ದಲಿತರು, ಅಲ್ಪಸಂಖ್ಯಾತರು, ಕೊಡವರಲ್ಲಿನ ಸಂವೇದನಾಶೀಲರು ಈ ಸಂಘಟನೆಯನ್ನು ಉಗ್ರವಾಗಿ ವಿರೋಧಿಸಿದರು. ಪರಿಣಾಮವಾಗಿ ಈ ಮೋರ್ಛಾವೂ ಮುಚ್ಚಿ ಹೋಯಿತು. ಇಂತಹ ಸಂದರ್ಭದಲ್ಲಿ "ಕೊಡವರು" ಎನ್ನುವ ಜಾತಿಯ ಹಿತಾಸಕ್ತಿಗಾಗಿ ಮಾತ್ರ ಹುಟ್ಟಿಕೊಂಡ ಜಾತಿ ಸಂಘಟನೆಯೇ ಕೂರ್ಗ್ ನ್ಯಾಶನಲ್ ಕೌನ್ಸಿಲ್ (ಸಿಎನ್ ಸಿ). ಜಗತ್ತಿನಲ್ಲಿ 'ನಶಿಸಿಹೋಗುತ್ತಿರುವ ಕೊಡವ ಜನಾಂಗದವರಿಗೆ ಬುಡಕಟ್ಟು ಮೀಸಲಾತಿ, ಪಾರ್ಲಿಮೆಂಟ್ ನಲ್ಲಿ ಸದಸ್ಯತನ, ಕೊಡವ ವಿಶ್ವವಿದ್ಯಾಲಯ, ಕೊಡವರಿಗೆ ಸ್ವಾಯತ್ತೆ ರಾಜ್ಯ... ಇತ್ಯಾದಿಗಳನ್ನು ಕೊಡಿಸುವ ಕಾರ್ಯಕ್ರಮವಿರುವ ಸಂಘಟನೆ ಇದು. ತಾನು ಹಿಂದೆ ಹೇಳುತ್ತಿದ್ದ 'ಗಾಂಧಿ ಆದರ್ಶ'ಗಳನ್ನು ಕೈಬಿಟ್ಟು ಭಾವನಾತ್ಮಕ ವಿಚಾರಗಳನ್ನು ಪ್ರಚೋದಿಸಲು ಆರಂಭಿಸಿದೆ.

ದ್ವೇಷ, ಹಗೆತನದ ರಾಜಕಾರಣದಿಂದ ಜಾತಿ ಸಂಘಟನೆಯೊಂದು ಲಾಭಗಳಿಸಬಹುದೆಂಬ ಲೆಕ್ಕಾಚಾರದಿಂದ ಇಲ್ಲಿಯವರೆಗೂ ಪ್ರಸ್ತಾಪಿಸದೇ ಇದ್ದ ಟಿಪ್ಪು ಎಂಬ ಚಾರಿತ್ರಿಕ ವ್ಯಕ್ತಿಯನ್ನು ಖಳನಂತೆ ಬಿಂಬಿಸುತ್ತಾ ಆ ಮೂಲಕ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯನ್ನು ಓಲೈಸಲು ಆರಂಭಿಸಿದೆ. ಇದರ ಪ್ರತೀಕವೆಂಬಂತೆ ಬಿಜೆಪಿಯ ರಾಜ್ಯಸಭಾ ಸದಸ್ಯರಾದ ಡಾ. ಸುಬ್ರಮಣ್ಯಸ್ವಾಮಿ ಅವರು ಕೆಲವು ಸಮಯದ ಹಿಂದೆ ಮಡಿಕೇರಿಯಲ್ಲಿ ನಡೆದ ಸಿಎನ್ ಸಿಯ ಅಧಿವೇಶನದಲ್ಲಿ ಪಾಲ್ಗೊಂಡು ಆ ಸಂಘಟನೆಯ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರ್ಕಾರವನ್ನು ಕೋರುತ್ತೇನೆಂದರು. ಸಿಎನ್ ಸಿಯ ಮನವಿಗೆ ಸ್ಪಂದಿಸಿ, "ಕೊಡವರ ಜನಾಂಗೀಯ" ಬೇಡಿಕೆಗಳಿಗಾಗಿ ಕಾಂಗ್ರೆಸ್ ನ ರಾಜ್ಯಸಭಾ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಅವರು ಕೆಲವು ತಿಂಗಳ ಹಿಂದೆ ರಾಜ್ಯಸಭೆಯಲ್ಲಿ ಭಾಷಣ ಮಾಡಿದ್ದು, ಅದಕ್ಕೆ ಸಿಎನ್ ಸಿಯು ಕೃತಜ್ಞತೆ ಹೇಳಿದ್ದು ಪ್ರತ್ಯೇಕ ವಿಚಾರ. ನೂರಾರು ವರ್ಷಗಳಿಂದ ಕಾಫಿ ಪ್ಲಾಂಟೇಶನ್, ಅಧಿಕಾರಶಾಹಿಗಳಲ್ಲಿ ಕಾರ್ಪೊರೇಟ್ ಗಳಲ್ಲಿ ಪ್ರಬಲರಾಗಿರುವ ಕೊಡವ ಸಮುದಾಯದವರಿಗೆ ಬುಡಕಟ್ಟು ಮೀಸಲಾತಿ ನೀಡಬೇಕೆಂದು ಕೊಡಗಿನ ಬಿಜೆಪಿ ಶಾಸಕರೊಂದಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಕಾನೂನು ಸಲಹೆಗಾರರಾಗಿದ್ದವರೊಬ್ಬರು ಒತ್ತಾಯಿಸಿದ್ದರು.

ಕೊಡಗಿನ ಜನಸಂಖ್ಯೆಯ ಶೇ. 22 ರಷ್ಟಿರುವ ದಲಿತ–ಬುಡಕಟ್ಟುಗಳ ದಿಡ್ಡಳ್ಳಿ ರೀತಿ ಸಮಸ್ಯೆಗೆ ಪ್ರಜ್ಞಾವಂತರು ಸ್ಪಂದಿಸಿದರೆ ಅವರನ್ನು ಸಿಎನ್ ಸಿಯು ನಕ್ಸಲೈಟ್ ಎಂದು ಜರೆದಿದ್ದನ್ನು ನೋಡಬಹುದು. ಕಾಂಗ್ರೆಸ್ ಸರ್ಕಾರ ಕೊಡಗಿನ ಉಸ್ತುವಾರಿಗೆಂದು ನೇಮಿಸಿರುವ ಕಾಂಗ್ರೆಸ್ ಸರ್ಕಾರದ ಉಸ್ತುವಾರಿ ಮಂತ್ರಿ ಕೂಡ ದಿಡ್ಡಳ್ಳಿ ಗಿರಿಜನರ ಪರ ಧ್ವನಿ ಎತ್ತಿದವರು ನಕ್ಸಲೈಟರು ಎಂಬ ವಾದವನ್ನು ಸಮರ್ಥಿಸಿಕೊಂಡಿದ್ದಾರೆ.


ಈ ಬಗೆಯ ಪ್ರಭಾವವಿರುವ ಸಿಎನ್.ಸಿ ಸಂಘಟನೆ ಹೇಳುತ್ತಿರುವ ನರಮೇಧಕ್ಕೆ ಸಂಬಂಧಿಸಿದಂತೆ ಕುತೂಹಲಕ್ಕಾಗಿ ಚಾರಿತ್ರಿಕ ದಾಖಲೆಗಳನ್ನು, ಗ್ರಂಥಗಳನ್ನು ಗಮನಿಸಿದರೆ ಸಿಗುವಂತಹ ಅಂಶವೇ ಬೇರೆ. ಸಿದ್ದರಾಮಯ್ಯ ಸರ್ಕಾರವು ಟಿಪ್ಪು ಜನ್ಮಾಚರಣೆಯನ್ನು ಘೋಷಿಸುವವರೆಗೂ ಟಿಪ್ಪು "60,000 ಕೊಡವರನ್ನು ನರಮೇಧ ಮಾಡಿದ ವಿಚಾರವಾಗಲಿ, ಕೊಡವ ಹೆಂಗಸರ ಮೇಲೆ ಅತ್ಯಾಚಾರ ಮಾಡಿದ "ಘಟನೆಯಾಗಲಿ" ಯಾರಿಗೂ ಗೊತ್ತಿರಲಿಲ್ಲ. ಟಿಪ್ಪುವಿನ ಹೆಸರಿನಲ್ಲಿ ತನ್ನ ಉಜ್ವಲ ಭವಿಷ್ಯ ಕಂಡುಕೊಂಡ ಸಿಎನ್.ಸಿ ಯು ಅಪ್ರತಿಮ ಸುಳ್ಳುಗಳನ್ನು ವಾಚಾಮಗೋಚರವಾಗಿ ಮಾಧ್ಯಮಗಳ ಮೂಲಕ ಸತ್ಯ ಮಾಡಲು ಪ್ರಯತ್ನಿಸಿತು. ಟಿಪ್ಪುವಿನ ಆಜನ್ಮ ಶತ್ರುವಾಗಿದ್ದ ಕೊಡಗಿನ ಅರಸ ವೀರರಾಜೇಂದ್ರನು ರಚಿಸಿದ ರಾಜೇಂದ್ರನಾಮೆಯಲ್ಲಾಗಲಿ (1809), ಟಿಪ್ಪುವನ್ನು ಉಗ್ರವಾಗಿ ಗೇಲಿ ಮಾಡುತ್ತಿದ್ದ 18–19ನೆಯ ಶತಮಾನದ ಬ್ರಿಟಿಶ್ ಬರಹಗಾರರಾಗಲಿ, ಮಿಶನರಿಗಳಿಗಾಗಲಿ ಕಾಣದ, ವೃತ್ತಿಪರ ಚರಿತ್ರೆಕಾರರಿಗಾಗಲಿ ಕಾಣದ, ಅಷ್ಟೇಕೆ ಟಿಪ್ಪುವಿನ ಚಾರಿತ್ರ್ಯಹರಣವನ್ನು ಮಾಡುವ ಹಾಗೂ ಕೊಡಗಿನಲ್ಲಿ ಅವನು ಮಾಡಿದ ಮತಾಂತರ ಕಾರ್ಯವನ್ನು ವಿಜೃಂಭಿಸುವ ಉದ್ದೇಶದಿಂದ ಐ.ಎಂ. ಮುತ್ತಣ್ಣ ಅವರು ರಚಿಸಿದ 'ಟಿಪ್ಪು ಎಕ್ಸ್ ರೇಡ್' (1980) ಎನ್ನುವ ಕೃತಿಯಲ್ಲಾಗಲಿ (ಹಿಂದೂ ದೇವಾಲಯಗಳನ್ನು ಭಗ್ನಗೊಳಿಸಿ ಮುಸ್ಲಿಮರ ಬಹುತೇಕ ಮಸೀದಿಗಳನ್ನು ಕಟ್ಟಲಾಯಿತೆಂದು ತೀವ್ರವಾಗಿ ಪ್ರತಿಪಾದಿಸುತ್ತಿದ್ದ ಪಿ.ಎನ್. ಓಕ್ ಅವರು ಈ ಕೃತಿಗೆ ಮುನ್ನುಡಿ ಬರೆದಿದ್ದರು), ಎಂ. ಚಿದಾನಂದ ಮೂರ್ತಿಯಂತಹ ವಿದ್ವಾಂಸರಿಗಾಗಲಿ ಕಾಣದ ವಿಕೃತ ಸಂಶೋಧನೆಯನ್ನು ಸಿಎನ್ ಸಿ ಮಾಡಿದೆ. ಮೌಖಿಕ ಆಕರಗಳನ್ನೇ ಪ್ರಧಾನವಾಗಿಟ್ಟುಕೊಂಡು ಕೊಡಗು ಮತ್ತು ಕನ್ನಡ ಭಾಷೆಯಲ್ಲಿ ಚರಿತ್ರೆ, ಜನಪರರನ್ನು ದಾಖಲಿಸಲು ಯತ್ನಿಸಿದ, ಟಿಪ್ಪುವಿನ ಬಗ್ಗೆ ನೇತ್ಯಾತ್ಮಕವಾದ ಪೂರ್ವಗ್ರಹಗಳನ್ನಿಟ್ಟುಕೊಂಡಿದ್ದ ನಡಿಕೇರಿಯಂಡ ಚಿಣ್ಣಪ್ಪನವರ ಪಟ್ಟೋಲೆ ಪಳಮೆಯಲ್ಲಿ (1924) ಕೂಡ ನರಮೇಧ ಅತ್ಯಾಚಾರ ಘಟನೆಗಳು ದಾಖಲಾಗಿಲ್ಲ. ಭಾಗಮಂಡಲದ ಬಳಿಯಿರುವ ದೇವಟ್ಟಿಪರಂಬು ಎಂಬ ಪ್ರದೇಶದಲ್ಲಿ ಮತಾಂತರ ಮಾಡಲಾಗಿದೆ ಎಂದು ಚಾರಿತ್ರಿಕ ದಾಖಲೆಗಳು ತಿಳಿಸುತ್ತವೆ.

ವಸ್ತುಸ್ಥಿತಿ ಹೀಗಿದ್ದರೂ ಸಿಎನ್ ಸಿಯು ದೇವಟ್ಟಿ ಪರಂಬು ಎಂಬ ಪ್ರದೇಶವನ್ನು ಭಾಗಮಂಡಲದ ಬಳಿಯಿರುವ ಮೀಸಲು ಅರಣ್ಯದಲ್ಲಿ ತಪ್ಪಾಗಿ ಗುರುತಿಸಿ, ಟಿಪ್ಪುವಿನಿಂದ "ಹತರಾದ" "ಕೊಡವರ' ನೆನಪಿಗೆ "ವಾರ್ ಮೆಮೋರಿಯಲ್' ಒಂದನ್ನು ಅತಿಕ್ರಮವಾಗಿ ಸ್ಥಾಪಿಸಿತು. ಅಲ್ಲಿಯವರೆಗೆ "ಹಿಂದುಗಳನ್ನು ಮಾತ್ರ ಮತಾಂತರ ಮಾಡಲಾಯಿತು ಎನ್ನುವ ವಾದಕ್ಕಿಂತ ಭಿನ್ನವಾಗಿ "ಕೊಡವರನ್ನು ಮಾತ್ರ ಮತಾಂತರಿಸಲಾಯಿತು" ಎನ್ನುವ ವಾದ ಕೇಳಿ ಬಿಜೆಪಿ ಮುಂತಾದ ಬಲಪಂಥೀಯ ಸಂಘಟನೆಗಳು ಬೆರಗಾದವು; ಬೆದರಿದವು. ಕೊಡವರಿಗಿಂತ ಹೆಚ್ಚಿನ ಜನಸಂಖ್ಯೆಯಿರುವ ಕೊಡಗಿನ ಅರೆಭಾಷಿಕ ಗೌಡರು ತಮ್ಮ ತಮ್ಮ ಜಾತಿಗಳ ಜನರು ಮತಾಂತರಕ್ಕೊಳಗಾದದ್ದನ್ನು ಹೇಳಲಾರಂಭಿಸಿದರು. ಅವರ ಪ್ರಕಾರ, ಟಿಪ್ಪುವು ಕೇವಲ "ಕೊಡವರನ್ನು" ಮತಾಂತರಿಸಿದ್ದು ಎನ್ನುವ ವಿಚಾರ ಸತ್ಯಕ್ಕೆ ದೂರ, ನಂತರದ ಬೆಳವಣಿಗೆಯಲ್ಲಿ ಮೀಸಲು

ಪುಟ 14 ಕ್ಕೆ

ಕಾಶ್ಮೀರದಲ್ಲಿ ಕಣ್ಣಿಲ್ಲದಾಗಿರುವವರು





ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಮೋದಿ ಸರಕಾರ ಕಾಶ್ಮೀರವನ್ನು ಔಪಚಾರಿಕವಾಗಿ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಪುನರ್‍ರಚಿಸುವ ಮುನ್ನಾದಿನ ಯುರೋಪಿಯನ್ ಪಾರ್ಲಿಮೆಂಟಿನ ಸದಸ್ಯರು(ಎಂಇಪಿ)ಗಳ ಒಂದು ಗುಂಪನ್ನು ಅಲ್ಲಿಗೆ ಭೇಟಿಗೆಂದು ಕಳಿಸುವ ಆಕ್ರೋಶಕಾರಿ ಕ್ರಮವನ್ನು ಕೈಗೊಂಡಿದೆ.

ಈ ಭೇಟಿ ಸಂಪೂರ್ಣವಾಗಿ ಕ್ರಮಬಾಹಿರವಾಗಿದೆ. ಏಕೆಂದರೆ 27 ಎಂಇಪಿಗಳಲ್ಲಿ 22 ಮಂದಿ ಅತಿ ಬಲಪಂಥೀಯ ಪಕ್ಷಗಳಿಗೆ ಸೇರಿದವರು, ಉಗ್ರ ಬಲಪಂಥೀಯ ಅಭಿಪ್ರಾಯಗಳನ್ನು ಹೊಂದಿರುವವರು ಎಂದು ಎಲ್ಲರಿಗೂ ತಿಳಿದಿರುವ ವಿಚಾರ. ಫ್ರಾನ್ಸ್‌ನ ರಸೆಂಬ್ಲೆಮೆಂಟ್ ನ್ಯಾಶನಲ್. ಜರ್ಮನಿಯ ಆಲ್ಟರ್ನೆಟಿವ್ ಫಾರ್ ಡಾಯ್ಟ್ಸ್‌ಲ್ಯಾಂಡ್, ಪೋಲಂಡಿನ ಜಸ್ಟಿಸ್ ಅಂಡ್ ಲಾ ಪಾರ್ಟಿ, ಇಟೆಲಿಯ ಪೋರ್ರ್ಟ್ಸ್ ಇತಾಲಿಯ ಮತ್ತು ಲೆಗ ನೋರ್ಡ್, ಸ್ಪೇನಿನ ವೋಕ್ಸ್, ಬೆಲ್ಜಿಯಂನ ವ್ಲಾಮ್ಸ್ ಬೆಲಂಗ್ ಮತ್ತು ಬ್ರಿಟನ್ನಿನ ಬ್ರೆಕ್ಸಿಟ್ ಪಾರ್ಟಿಗೆ ಸೇರಿರುವವರು.

ಭಾರತೀಯ ಸಂಸತ್ತಿನ ಸದಸ್ಯರು ಮತ್ತು ಭಾರತದಲ್ಲಿನ ರಾಜಕೀಯ ಪಕ್ಷಗಳ ಮುಖಂಡರು ಶ್ರೀನಗರಕ್ಕೆ ಹೋಗದಂತೆ ತಡೆದಿರುವಾಗ ಕೆಲವು ಯುರೋಪಿಯನ್ ಪಾರ್ಲಿಮೆಂಟ್ ಸದಸ್ಯರು ಕಾಶ್ಮೀರಕ್ಕೆ ಭೇಟಿ ನೀಡಲು ಬಿಟ್ಟಿರುವುದು ಹೇಗೆ ಎಂದು ಪ್ರತಿಪಕ್ಷಗಳು ಪ್ರಶ್ನಿಸಿರುವುದು ಸಮಂಜಸವೇ ಇದೆ. ಇದು ಮೋದಿ ಸರಕಾರದ ಮೋಸದ ರಾಜಕೀಯ ಕಸರತ್ತನ್ನು ಬಯಲಿಗೆಳೆದಿದೆ. ಆದರೆ ಈ ಭೇಟಿಯಲ್ಲಿ ಇನ್ನೊಂದು ಮಹತ್ವದ ಆಯಾಮವಿದೆ. ಅದೆಂದರೆ, ಆಹ್ವಾನಿತರಾಗಿರುವ ಎಂಇಪಿಗಳ ಸೈದ್ಧಾಂತಿಕ ಮತ್ತು ರಾಜಕೀಯ ಚಾರಿತ್ರ್ಯ.

ಈ ಎಲ್ಲ ಪಕ್ಷಗಳಿಗೆ ಸಾಮಾನ್ಯವಾದ ಲಕ್ಷಣವೊಂದಿದೆ. ಇವೆಲ್ಲವೂ ಇಸ್ಲಾಮ್-ಭಯ ಹರಡುವಂತವುಗಳು. ಅವುಗಳ ಮುಖಂಡರು ಸಂಕುಚಿತ ಜನಾಂಗವಾದಿಗಳಷ್ಟೇ ಅಲ್ಲ, ನವ-ಫ್ಯಾಸಿಸ್ಟ್ ವಿಚಾರಗಳನ್ನೂ ವ್ಯಕ್ತಪಡಿಸುತ್ತಿರುವವರು ಎಂದೂ ಪರಿಚಿತರು. ಇಂತಹ ಎಂಇಪಿಗಳ ಗುಂಪೊಂದನ್ನು ಕಾಶ್ಮೀರಕ್ಕೆ ಒಯ್ಯುವುದು ಜಮ್ಮು ಮತ್ತು ಕಾಶ್ಮೀರದ ಮೇಲೆ ಪ್ರಹಾರ ನಡೆಸಲು ಹಿಂದುತ್ವಕ್ಕೆ ಇರುವ ದುರುದ್ದೇಶವನ್ನು ಸಾಕಷ್ಟು ಪ್ರಕಟಗೊಳಿಸುತ್ತದೆ. ಇದು ಕಾಶ್ಮೀರಿ ಜನಗಳಲ್ಲಿ, ತಮ್ಮನ್ನು ಭಾರತದ ಒಂದು ಮುಸ್ಲಿಂ ಬಹುಸಂಖ್ಯಾತ ರಾಜ್ಯದ ಭಾಗವಾಗಿರುವುದಕ್ಕಾಗಿಯೇ ಶಿಕ್ಷಿಸಲಾಗುತ್ತಿದೆ ಎಂದು ವ್ಯಾಪಕಗೊಂಡಿರುವ ಭಾವನೆಯನ್ನು ಗಟ್ಟಿಗೊಳಿಸುತ್ತದಷ್ಟೇ.

ಎಂಇಪಿಗಳ ಕಾಶ್ಮೀರ ಭೇಟಿ ಒಂದು ಅಧಿಕೃತವಾಗಿ ಪ್ರಾಯೋಜಿತವಾದ ಭೇಟಿಯ ಎಲ್ಲ ಮುಖ್ಯ ಲಕ್ಷಣಗಳನ್ನೂ ಹೊಂದಿದೆ. ಒಂದು ಗುರುತು ಪರಿಚಯವಿಲ್ಲದ ಸರ್ಕಾರೇತರ ಸಂಸ್ಥೆ(ಎನ್‌ಜಿಒ) ಈ ಎಂಇಪಿಗಳನ್ನು ವೈಯಕ್ತಿಕವಾಗಿ ಆರಿಸಿ ಆಹ್ವಾನಿಸಿದೆ. ಬ್ರಸೆಲ್ಸ್‌ನಲ್ಲಿರುವ ಈ ಎನ್‌ಜಿಒ ದ ಮುಖ್ಯಸ್ಥರು ಭಾರತೀಯ ಮೂಲದ ಒಬ್ಬರು ವ್ಯಕ್ತಿ. ದಿಲ್ಲಿಯಲ್ಲಿ ಈ ಗುಂಪನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಭೇಟಿಯಾದರು, ಅವರಿಗೆ ಸೂಚನೆಗಳನ್ನೂ ಕೊಟ್ಟರು. ಶ್ರೀನಗರದಲ್ಲಿ ಅವರನ್ನು ಭೇಟಿಯಾದದ್ದು ಮತ್ತು ಸೂಚನೆಗಳನ್ನು ಕೊಟ್ಟದ್ದು ಸೇನಾಧಿಕಾರಿ.

ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ಮಾನವ ಹಕ್ಕುಗಳ ದಮನ ಮಾಡಲಾಗಿದೆ ಎಂದು ಹೆಚ್ಚುಹೆಚ್ಚಾಗಿ ವ್ಯಕ್ತವಾಗುತ್ತಿರುವ ಅಂತರ್ರಾಷ್ಟ್ರೀಯ ಟೀಕೆಗಳನ್ನು, ವಿಶ್ವಸಂಸ್ಥೆಯ ಸಂಘಟನೆಗಳಿಂದ, ಅಮೆರಿಕನ್ ಸಂಸತ್ತಿನ ವಿಚಾರಣೆಗಳಲ್ಲಿ ವ್ಯಕ್ತಗೊಳ್ಳುತ್ತಿರುವ ಟೀಕೆಗಳನ್ನು ಬಿಜೆಪಿ ಸರಕಾರ ನಿಭಾಯಿಸಿರುವ ವಿಧಾನವೆಂದರೆ ಇಂತಹ ಒಂದು ಕೈಯಾರೆ ಆರಿಸಿದ ನಿಯೋಗವನ್ನು ಕಾಶ್ಮೀರ ಭೇಟಿಗೆಂದು ಸಂಘಟಿಸುವುದು. ವಾಸ್ತವವಾಗಿ ಇದು, ಜಮ್ಮು ಮತ್ತು ಕಾಶ್ಮೀರದ ಮೇಲೆ ಮೋದಿಯವರ ಪ್ರಜಾಪ್ರಭುತ್ವ-ವಿರೋಧಿ ಪ್ರಹಾರಗಳನ್ನು ಬೆಂಬಲಿಸಲು ಸಿದ್ಧವಿರುವ ಶಕ್ತಿಗಳೆಂದರೆ ಅತಿ ಬಲಪಂಥೀಯ ಇಸ್ಲಾಮ್-ಭಯ ಹರಡಿಸುವ ಶಕ್ತಿಗಳು ಮಾತ್ರ ಎಂಬುದನ್ನೇ ಬಯಲಿಗೆಳೆದಿದೆ. ಇವುಗಳಲ್ಲಿ ಹೆಚ್ಚಿನ ಪಕ್ಷಗಳು, ಉದಾ: ವೊಕ್ಸ್ ಮತ್ತು ಲೆಗ ನೋರ್ಡ್‌ನಂತವುಗಳು ಇಸ್ರೇಲಿನಿಂದ ಪ್ಯಾಲೆಸ್ತೀನಿಯನ್ನರ ದಮನವನ್ನು ಬೆಂಬಲಿಸುತ್ತಿರುವಂತವುಗಳು.

ಕಾಶ್ಮೀರದ ಜನತೆ ಮೋದಿ ಸರಕಾರದ ಈ ಹೊಚ್ಚಹೊಸ ಕ್ರಮವನ್ನು ಶ್ರೀನಗರ ಮತ್ತಿತರ ಸ್ಥಳಗಳಲ್ಲಿ ಸಾಮಾನ್ಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸುವ ಮೂಲಕ ಎದುರಿಸಿದ್ದಾರೆ. ಎಂಇಪಿಗಳ ಭೇಟಿಯ ವೇಳೆಯಲ್ಲಿ ಎಲ್ಲ ಅಂಗಡಿಗಳು ಮುಚ್ಚಿದ್ದವು, ರಸ್ತೆಗಳಲ್ಲಿ ಓಡಾಟವೇ ಇರಲಿಲ್ಲ.

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿ ಎರಡು ಕೇಂದ್ರಾಡಳಿತ ಪ್ರದೇಶಗಳನ್ನು ಅಧಿಕೃತವಾಗಿ ಸ್ಥಾಪಿಸಿರುವುದಕ್ಕೆ ಕಾಶ್ಮೀರಿ ಜನತೆಯ ಸ್ಪಂದನವೆಂದರೆ ನಾಗರಿಕ ಅವಿಧೇಯತೆ. ಸುಮಾರು ಮೂರು ತಿಂಗಳ ಮುಚ್ಚಿಕೆಯ ನಂತರ ಕಾಶ್ಮೀರ ಕಣಿವೆಯ ಜನಗಳು ಸವಾಲೊಡ್ಡುವ ಮನೋಭಾವದಲ್ಲಿದ್ದಾರೆ. ಆಡಳಿತ ಏರ್ಪಡಿಸಿದ್ದ ಬ್ಲಾಕ್ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರುಗಳ ಚುನಾವಣೆಗಳು ಪ್ರಹಸನವಾಗಿ ಬಿಟ್ಟಿವೆ.

ವಲಸೆ ಕಾರ್ಮಿಕರು ಮತ್ತು ಬೇರೆ ರಾಜ್ಯಗಳ ನಾಗರಿಕರ ಮೇಲೆ ದಾಳಿಗಳು ನಡೆಯುತ್ತಿರುವುದು ಇಂತಹ ಪ್ರಭುತ್ವದ ದಮನ, ಜನಗಳ ಪರಕೀಯ ಭಾವ ಮತ್ತು ಸವಾಲೊಡ್ಡುವ ಮನೋಭಾವದ ವಾತಾವರಣದಲ್ಲಿಯೇ. ಕುಲ್ಗಾಮ್‌ನಲ್ಲಿ ಪಶ್ಚಿಮ ಬಂಗಾಲದಿಂದ ಬಂದ ಐದು ವಲಸೆ ಕಾರ್ಮಿಕರ ಅಮಾನುಷ ಹತ್ಯೆ, ಅದಕ್ಕೆ ಮೊದಲು ಬೇರೆ ಆರು ವ್ಯಾಪಾರಿಗಳು ಮತ್ತು ಕಾರ್ಮಿಕರ ಹತ್ಯೆಗಳು ಕಾಶ್ಮೀರ ಹಿಂಸಾಚಾರ ಮತ್ತು ಪ್ರತಿ-ಹಿಂಸಾಚಾರದ ಇನ್ನೊಂದು ವಿಷವರ್ತುಲದತ್ತ ಸಾಗಿದೆ ಎಂಬುದರ ಗಂಭೀರ ಎಚ್ಚರಿಕೆಯಾಗಿದೆ.

ಇಂತಹ ಒಂದು ಕಷ್ಟಕರ ಸನ್ನಿವೇಶದಲ್ಲಿ, ಭಾರತದಲ್ಲಿನ ಜಾತ್ಯತೀತ ಶಕ್ತಿಗಳು ಜಮ್ಮು ಮತ್ತು ಕಾಶ್ಮೀರದ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಮರುಸ್ಥಾಪಿಸಬೇಕು, ಹೇರಿರುವ ಎಲ್ಲ ಅಡೆ-ತಡೆಗಳನ್ನು ತೆಗೆದು ಹಾಕಬೇಕು, ಎಲ್ಲ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಬೇಕು ಮತ್ತು ಪ್ರಭುತ್ವ-ಪ್ರಾಯೋಜಿತ ದಮನಚಕ್ರವನ್ನು ಕೊನೆಗೊಳಿಸಬೇಕು ಎಂದು ಪ್ರತಿಪಾದಿಸಬೇಕಾದ್ದು ಮತ್ತಷ್ಟು ಅಗತ್ಯವಾಗಿದೆ.

ಒಂದು ಅಧಿಕೃತವಾಗಿ ಪ್ರಾಯೋಜಿತವಾದ ಭೇಟಿಯ ಎಲ್ಲ ಮುಖ್ಯ ಲಕ್ಷಣಗಳನ್ನೂ ಹೊಂದಿರುವ ಯುರೋಪಿಯನ್ ಪಾರ್ಲಿಮೆಂಟ್ ಸದಸ್ಯರುಗಳ ಕಾಶ್ಮೀರ ಭೇಟಿ ಜಮ್ಮು ಮತ್ತು ಕಾಶ್ಮೀರದ ಮೇಲೆ ಪ್ರಹಾರ ನಡೆಸಲು ಹಿಂದುತ್ವಕ್ಕೆ ಇರುವ ದುರುದ್ದೇಶವನ್ನು ಸಾಕಷ್ಟು ಪ್ರಕಟಗೊಳಿಸುತ್ತದೆ. ವಾಸ್ತವವಾಗಿ ಇದು, ಜಮ್ಮು ಮತ್ತು ಕಾಶ್ಮೀರದ ಮೇಲೆ ಮೋದಿಯವರ ಪ್ರಜಾಪ್ರಭುತ್ವ-ವಿರೋಧಿ ಪ್ರಹಾರಗಳನ್ನು ಬೆಂಬಲಿಸಲು ಸಿದ್ಧವಿರುವ ಶಕ್ತಿಗಳೆಂದರೆ ಅತಿ ಬಲಪಂಥೀಯ ಇಸ್ಲಾಮ್-ಭಯ ಹರಡಿಸುವ ಶಕ್ತಿಗಳು ಮಾತ್ರ ಎಂಬುದನ್ನೇ ಬಯಲಿಗೆಳೆದಿದೆ.



ಪ್ರಕಾಶ ಕಾರಟ್



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ



ನಿರ್ಜನ ಶ್ರೀನಗರದ ಪ್ರಖ್ಯಾತ ದಲ್ ಸರೋವರರದಲ್ಲಿ 'ನಿಜ ತಿಳಿಯಲು ಬಂದ' ಯುರೋಪಿಯನ್‌ಪಾರ್ಲಿಮೆಂಟ್ ಸದಸ್ಯರ ಜಲವಿಹಾರ



ತಾಷ್ಕೆಂಟಿನಲ್ಲಿ ಅಕ್ಟೋಬರ್ 17, 1920ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯೊಂದಿಗೆ ಭಾರತದ ಕಮ್ಯುನಿಸ್ಟ್ ಚಳುವಳಿಯ ಭವ್ಯ ಇತಿಹಾಸವು ಪ್ರಾರಂಭವಾಯಿತು. ಪಕ್ಷದ ಕಳೆದ 100 ವರ್ಷಗಳ ಇತಿಹಾಸದಲ್ಲಿ ಜರುಗಿದ ಯುಗಪ್ರವರ್ತಕ ಘಟನೆಗಳ, ಹೋರಾಟಗಳ, ತ್ಯಾಗಬಲಿದಾನಗಳ ಮತ್ತು ಪ್ರಮುಖ ನೀತಿನಿರೂಪಕ ನಿರ್ಧಾರಗಳ ಗಾಥೆಯನ್ನು ಗುರುತಿಸಲೆಂದು ಸಂಚಿಕೆ 42ರಲ್ಲಿ ಆರಂಭವಾಗಿರುವ ಈ ಲೇಖನಮಾಲೆಯ ಎರಡನೆ ಲೇಖನದಲ್ಲಿ 1924ರಲ್ಲಿ ಬ್ರಿಟಿಷ್ ವಸಾಹತುಶಾಹೀ ಆಳ್ವಿಕೆ ಕಾನ್ಪುರ ಬೊಲ್ಶೆವಿಕ್ ಪಿತೂರಿ ಮೊಕದ್ದಮೆಯನ್ನು ಹಾಕುವ ವರೆಗಿನ ಆರಂಭದ ಪ್ರಸಾರವನ್ನು ಗುರುತಿಸಲಾಗಿದೆ.

ಶತಮಾನೋತ್ಸವ ಲೇಖನಮಾಲೆ-2

ಕಮ್ಯುನಿಸ್ಟ್ ವಿಚಾರಗಳ, ಚಳುವಳಿಯ ಪ್ರಸಾರ 1921–24

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯಿಂದ ಜನರು ಕಲಿತ ಪ್ರಧಾನವಾದ ಪಾಠವೆಂದರೆ ಸಾಮೂಹಿಕ ಕಾರ್ಯಾಚರಣೆಗಳ ಶಕ್ತಿ ಮತ್ತು ಅದು ಸಾಧಿಸಬಹುದಾದ ಫಲಿತಾಂಶಗಳು. ರಷ್ಯಾದ ಜನರು ಝಾರ್ ದೊರೆಯನ್ನು ಸೋಲಿಸಿ ಜನತಾ ರಾಜ್ಯವನ್ನು ಘೋಷಿಸಲು ಸಾಧ್ಯವಾದರೆ ಭಾರತದ ಜನ ಕೂಡ ಅದೇ ಅಸ್ತ್ರವನ್ನು ಬಳಸಿ ಬ್ರಿಟಿಷರ ವಸಾಹತುಶಾಹಿಯಿಂದ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯವಿದೆ ಎಂಬ ಸ್ಫೂರ್ತಿಯನ್ನು ಪಡೆದರು. ಬ್ರಿಟಿಷ್ ಆಳ್ವಿಕೆಯ ವಿರುದ್ಧ ಬೆಳೆಯುತ್ತಿರುವ ಅತೃಪ್ತಿ, ಅಸಹಕಾರ ಚಳುವಳಿಯ ಹಿಂತೆಗೆತ ಮತ್ತು ಆ ಅವಧಿಯಲ್ಲಿ ಭಾರತದಲ್ಲಿದ್ದ ಹಲವಾರು ಕ್ರಾಂತಿಕಾರಿ ಗುಂಪುಗಳ ಇತಿಮಿತಿಗಳು ಜನರನ್ನು ಪರ್ಯಾಯ ದಾರಿಗಳತ್ತ ನೋಡುವಂತೆ ಮಾಡಿದವು. ಈ ಸನ್ನಿವೇಶದಲ್ಲಿ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಚಿಂತನೆಗಳು ಅವರ ಮನಸ್ಸನ್ನು ಆಕರ್ಷಿಸಿದವು.

ಭಾರತದಲ್ಲಿನ ಕಮ್ಯುನಿಸ್ಟ್ ಚಿಂತನೆಗಳ ವ್ಯಾಪಕತೆ ಬ್ರಿಟಿಷರನ್ನು ಎಚ್ಚರಿಸಿತು ಮತ್ತು ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯ ಸುದ್ದಿ ಅವರನ್ನು ಇನ್ನೂ ಬೆಚ್ಚಿ ಬೀಳಿಸಿತು. ಅವರು ಸೋವಿಯತ್ ಒಕ್ಕೂಟದಿಂದ ಭಾರತಕ್ಕೆ ಪ್ರವೇಶಿಸುತ್ತಿದ್ದ ಕಮ್ಯುನಿಸ್ಟ್ ಕ್ರಾಂತಿಕಾರಿಗಳನ್ನು ಬಂಧಿಸಿ ಪೆಶಾವರ್ ಜೈಲಿನಲ್ಲಿ ಕೂಡಿಹಾಕುವ ಮೂಲಕ ತಮ್ಮ ಪ್ರತಿದಾಳಿ ನಡೆಸಿದರು. ಆ ಕ್ರಾಂತಿಕಾರಿಗಳ ಮೇಲೆ ದೇಶದ್ರೋಹದ ಆರೋಪ ಹೊರಿಸಲಾಗಿತ್ತು. 1923ರಲ್ಲಿ, ಅವರಿಗೆ ಒಂದರಿಂದ ಹತ್ತು ವರ್ಷಗಳ ಕಾಲದ ಕಠಿಣ ಶಿಕ್ಷೆ ವಿಧಿಸಲಾಯಿತು. ಹಾಗೆ ಶಿಕ್ಷೆಗೆ ಒಳಪಟ್ಟವರಲ್ಲಿ ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದ ಮಹಮದ್ ಷಫೀಕ್ ಒಬರು. ಆ ಪೆಶಾವರ್ ಪಿತೂರಿ ಪ್ರಕರಣಗಳಲ್ಲಿ ಒಟ್ಟು ಐದು ಜನ ಸಿಲುಕಿಕೊಂಡಿದ್ದರು. ವಾಸ್ತವದಲ್ಲಿ ಅದು ಭಾರತದಲ್ಲಿನ ಮೊದಲ ಕಮ್ಯುನಿಸ್ಟ್ ಪಿತೂರಿ ಪ್ರಕರಣ.

ಬ್ರಿಟಿಷ್ ಆಡಳಿತದ ಗೃಹ ಇಲಾಖೆ ಎಲ್ಲಾ ಸರ್ಕಾರಿ ಅಧಿಕಾರಿಗಳಿಗೆ ಮುನ್ಸೂಚನೆ ನೀಡಿ, ಕಮ್ಯುನಿಸಂನ ಅಪಾಯವನ್ನು ಸದೆಬಡಿಯಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಬಲವಂತ ಮಾಡಲಾಯಿತು: "ಎಲ್ಲೆಲ್ಲಿ ಕಮ್ಯುನಿಸಂ ತಲೆಎತ್ತಿದೆಯೋ, ಅಲ್ಲೆಲ್ಲಾ ಅದನ್ನು ಪ್ಲೇಗಿನ ರೀತಿಯಲ್ಲಿ ಎದುರಿಸಿ ನಿರ್ನಾಮ ಮಾಡಬೇಕು. ಭಾರತದಲ್ಲಿನ ಕಮ್ಯುನಿಸಂ ಪ್ರಸಾರ ಒಂದು ನಿರ್ದಿಷ್ಟ 'ದೃಷ್ಟಿಕೋನದಿಂದ' ನೋಡಬಹುದಾದ ಒಂದು ಸಮಸ್ಯೆ ಅಲ್ಲ; ಅದನ್ನು ಮುಖಾಮುಖಿಯಾಗಿ ನೋಡಬೇಕು ಮತ್ತು ಅದನ್ನು ಏನೇನೂ ದಯಾದಾಕ್ಷಿಣ್ಯವಿಲ್ಲದೇ ಬಗ್ಗುಬಡಿಯಬೇಕು."

ಬ್ರಿಟಿಷರು ತಮ್ಮ ಎಲ್ಲಾ ಯತ್ನಗಳ ಹೊರತಾಗಿಯೂ, ದೇಶದ ಉದ್ದಗಲಕ್ಕೂ ಕಮ್ಯುನಿಸ್ಟ್ ಚಿಂತನೆಗಳು ಹರಡುವುದನ್ನು ತಡೆಯುವಲ್ಲಿ ಸೋತರು. ನಗರಗಳಲ್ಲಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಸಮಾಜವಾದಿ ಚಿಂತನೆಗಳನ್ನು ಹರಡಲು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಅನೇಕ ಗುಂಪುಗಳು ಆರಂಭವಾದವು. ಅದೇ ತಾನೆ ಮಾಸ್ಕೋದಿಂದ ಹಿಂತಿರುಗಿದ್ದ ಶೌಕತ್ ಉಸ್ಮಾನಿ ಬನಾರಸ್‌ನಲ್ಲಿ ಒಂದು ಗುಂಪನ್ನು, ಕಲ್ಕತ್ತಾದಲ್ಲಿ ಮುಜಫರ್ ಅಹಮದ್, ಮುಂಬಯಿಯಲ್ಲಿ ಡಾಂಗೆ, ಮದ್ರಾಸಿನಲ್ಲಿ ಸಿಂಗಾರವೇಲು ಚೆಟ್ಟಿಯಾರ್ ಮತ್ತು ಲಾಹೋರಿನಲ್ಲಿ ಗುಲಾಮ್ ಹುಸೇನ್ ಆರಂಭಿಸಿದರು.

ಎಂ.ಎನ್.ರಾಯ್ ಹೊರ ತರುತ್ತಿದ್ದ **ವ್ಯಾನ್‌ಗಾರ್ಡ್** ಪತ್ರಿಕೆಯನ್ನು ಬ್ರಿಟಿಷರು ನಿಷೇಧಿಸಿದ್ದರೂ ಕೂಡ, ಅದನ್ನು ರಹಸ್ಯವಾಗಿ ಹಡಗಿನಲ್ಲಿ ತಂದು ಓದುಗರಿಗೆ ತಲುಪಿಸಲಾಗುತ್ತಿತ್ತು. ಈ ಪತ್ರಿಕೆಯಲ್ಲಿ ಬಂದ ಲೇಖನಗಳಲ್ಲದೇ, ಸೋವಿಯತ್ ಒಕ್ಕೂಟ ಮತ್ತು ಸಮಾಜವಾದದ ಬಗ್ಗೆ ಹಲವಾರು ಪುಸ್ತಕಗಳು ಹಾಗೂ ಪತ್ರಿಕಾವರದಿಗಳನ್ನು ಓದುವುದರ ಮೂಲಕ ಪಡೆದ ಅರಿವು ಅವುಗಳ ಚಿಂತನೆಯನ್ನು ಇನ್ನಷ್ಟು ಜನಪ್ರಿಯಗೊಳಿಸಲು ಕಮ್ಯುನಿಸ್ಟ್ ಚಳುವಳಿಯ ಪ್ರವರ್ತಕರಿಗೆ ಸಹಾಯ ಮಾಡಿತು.


ಮುಜಫರ್ ಅಹಮದ್ ಮತ್ತು ಅವರೊಂದಿಗೆ ವಿಖ್ಯಾತ ಬಂಗಾಳಿ ಕವಿ ಕಾಜಿ ನಸ್ರುಲ್ ಇಸ್ಲಾಂ ಅವರು **ನವ್‌ಯುಗ್**(ನ್ಯೂ ಏಜ್) ಎಂಬ ಸಂಜೆ ಪತ್ರಿಕೆಯನ್ನು ನಡೆಸುತ್ತಿದ್ದರು. ಈ ಪತ್ರಿಕೆಯ ವಿಶಿಷ್ಟತೆಯೇನೆಂದರೆ ಅದು ಕಾರ್ಮಿಕರ ಮತ್ತು ರೈತರ ಪರಿಸ್ಥಿತಿಗಳ ಬಗ್ಗೆ ಅನೇಕ ಪತ್ರಿಕಾ ವರದಿಗಳನ್ನು ಮತ್ತು ಸುದ್ದಿಗಳನ್ನು ಒಳಗೊಂಡಿರುತ್ತಿತ್ತು. ಈ ಪತ್ರಿಕೆಯನ್ನು ಹೊರತರುವ ಮತ್ತು ಸಂಪಾದಕೀಯ ಬರೆಯುವ ಪ್ರಕ್ರಿಯೆಯಲ್ಲಿ ಮುಜಫರ್ ಅಹಮದ್ ಮೂರನೇ (ಕಮ್ಯುನಿಸ್ಟ್) ಅಂತರ್ರಾಷ್ಟ್ರೀಯದತ್ತ ಆಕರ್ಷಿತರಾದರು. ಅಬ್ದುಲ್ ರಜಾಕ್ ಖಾನ್, ಅಬ್ದುಲ್ ಹಲೀಮ್ ಅವರ ಜತೆಗೂಡಿದರು ಮತ್ತು ಈ ಗುಂಪು ಕಲ್ಕತ್ತಾದಲ್ಲಿ ಕಮ್ಯುನಿಸ್ಟ್ ಚಿಂತನೆಗಳನ್ನು ಹರಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿತು.

ವಿದ್ಯಾರ್ಥಿ ಚಳುವಳಿಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ಶ್ರೀಪಾದ ಅಮೃತ್ ಡಾಂಗೆಯವರನ್ನು ಕಾಲೇಜಿನಿಂದ ಉಚ್ಚಾಟಿಸಲಾಗಿತ್ತು ಮತ್ತು ಅವರು ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರು ಗಾಂಧಿಯ ವಿಚಾರಗಳನ್ನು ಒಪ್ಪಲು ಅವರಿಗೆ ಸಾಧ್ಯವಾಗಿರಲಿಲ್ಲ. 1921ರಲ್ಲಿ ಅವರು 'ಗಾಂಧಿ ಎದುರು ಲೆನಿನ್' ಎಂಬ ಪುಸ್ತಕ ಬರೆದರು. 'ಸೋಶಿಯಲಿಸ್ಟ್' ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ಹೊರತರಲು ಆರಂಭಿಸಿದರು; ನಮ್ಮ ದೇಶದ ಇತಿಹಾಸದಲ್ಲೇ ಆ ಹೆಸರಿನಲ್ಲಿ ಹೊರತಂದ ಮೊದಲ ಪತ್ರಿಕೆ ಅದಾಗಿತ್ತು. ಡಾಂಗೆ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿದ್ದರು ಮತ್ತು ಅವರನ್ನು ಸಂಘಟಿಸಲು ಆರಂಭಿಸಿದರು.

ಅದೇ ರೀತಿಯಲ್ಲಿ, ಪೆಶಾವರ್‌ನ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಗುಲಾಮ್ ಹುಸೇನ್, ಮಾಸ್ಕೋದಿಂದ ಹಿಂತಿರುಗಿದ್ದ ಕೆಲವು ಕ್ರಾಂತಿಕಾರಿಗಳನ್ನು ಭೇಟಿ ಮಾಡಿದರು ಮತ್ತು ಅವರ ಜತೆ ಚರ್ಚೆಯ ನಂತರ ತಮ್ಮ ಉದ್ಯೋಗವನ್ನು ತೊರೆದು ಲಾಹೋರಿನಲ್ಲಿ ಜನರನ್ನು ಸಂಘಟಿಸಲು ಆರಂಭಿಸಿದರು. ಅವರು ಶಂಸುದ್ದೀನ್ ಹಸನ್ ಎಂಬುವವರ ಜತೆಗೂಡಿ 'ಇಂಕ್ವಿಲಾಬ್' ಎಂಬ ಉರ್ದು ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು ಮತ್ತು ವಾಯುವ್ಯ ರೈಲ್ವೇ ಕಾರ್ಮಿಕರ ಸಂಘ(ನಾರ್ತ್–ವೆಸ್ಟರ್ನ್ ರೈಲ್ವೇ ವರ್ಕರ್ಸ್ ಯೂನಿಯನ್)ದ ಕಾರ್ಯದರ್ಶಿಯಾದರು. ಲಾಹೋರ್ ನ್ಯಾಷನಲ್ ಕಾಲೇಜನ್ನು ತಮ್ಮ ಕಾರ್ಯಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಪಂಜಾಬಿನ ಇತರೆಡೆಗಳಲ್ಲಿ, ಘದರ್ ಚಳುವಳಿಯ ನಂಟು ಹೊಂದಿದ್ದ ಅನೇಕ ಸಂಗಾತಿಗಳು ಅಂತಹ ಗುಂಪುಗಳನ್ನು ರಚಿಸಿಕೊಂಡರು. ಅದೇ ತಾನೆ ಮಾಸ್ಕೋದಿಂದ ವಾಪಸ್ಸಾಗಿದ್ದ ಶೌಕತ್ ಉಸ್ಮಾನಿ ಬನಾರಸಿನಲ್ಲಿ ನೆಲೆನಿಂತಿದ್ದರು ಮತ್ತು ವಿದ್ಯಾರ್ಥಿಗಳ ನಡುವೆ ಕೆಲಸ ಆರಂಭಿಸಿದ್ದರು. ಅವರು ಕಾನ್ಪುರ ಮತ್ತದರ ಸುತ್ತಮುತ್ತಲಿನಲ್ಲಿಯೂ ಸಕ್ರಿಯರಾಗಿದ್ದರು.

ಮದ್ರಾಸಿನಲ್ಲಿ, ವಕೀಲರಾಗಿದ್ದು ಕಾರ್ಯಕರ್ತರಾಗಿ ಬದಲಾಗಿದ್ದ ಸಿಂಗಾರವೇಲು ಚೆಟ್ಟಿಯಾರ್ ಅವರು ಕಾರ್ಮಿಕರು ಹಾಗೂ ರೈತರನ್ನು ಸಂಘಟಿಸುವಲ್ಲಿ ನಿರತರಾಗಿದ್ದರು. ಅವರು ಇಂಗ್ಲಿಷ್‌ನಲ್ಲಿ **ಲೇಬರ್ ಕಿಸಾನ್ ಗೆಜೆಟ್** ಎಂಬ ಪಾಕ್ಷಿಕವನ್ನು ಮತ್ತು **ತೊಳಿಲಾಳನ್** ಎಂಬ ತಮಿಳು ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಸಿಂಗಾರವೇಲು ತಮ್ಮ 'ಮಹಾತ್ಮಾ ಗಾಂಧಿಗೊಂದು

ಪುಟ 12 ಕ್ಕೆ



ನಳಿನಿ ಗುಪ್ತಾ, ಶೌಕತ್ ಉಸ್ಮಾನಿ, ಎಸ್.ಎ.ಡಾಂಗೆ ಮತ್ತು ಮುಜಫರ್ ಅಹಮದ್
ಕಾನ್ಪುರ ಬೊಲ್ಶೆವಿಕ್ ಪಿತೂರಿ ಮೊಕದ್ದಮೆಯಲ್ಲಿ ಬಂಧಿತರು



THE VANGUARD
OF INDIAN INDEPENDENCE



THE SOCIALIST

In the Indian Labour World

Socialism Abroad



THE LABOUR KISHAN GAZETTE



16th ALL INDIA CITU CONFERENCE
2020 January 23 -27- Chennai



14 CITU ರಾಜ್ಯ ಸಮ್ಮೇಳನ
8-10 ನವೆಂಬರ್ 2019 ತುಮಕೂರು

ಸರಕಾರಗಳಿಗೆ ಸವಾಲೆಸೆದ ಕಾರ್ಮಿಕ ವರ್ಗದ ಮೂರು ವರ್ಷಗಳ ಚಳವಳಿಗಳು...

ಕೆ. ಮಹಾಂತೇಶ್

ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯು ಕರ್ನಾಟಕ ರಾಜ್ಯದ ಕಾರ್ಮಿಕ ಆಂದೋಲನದಲ್ಲೂ ಒಂದು ಸಮರಧೀರ ಕಾರ್ಮಿಕ ಸಂಘಟನೆಯಾಗಿ ಒಂದು ಮಹತ್ವದ ಸ್ಥಾನವನ್ನು ಪಡೆದಿದೆ. ಇದೀಗ ನವಂಬರ್ 8 ರಿಂದ 10ರ ವರೆಗೆ ತುಮಕೂರಿನಲ್ಲಿ ಇದರ 14ನೇ ರಾಜ್ಯ ಸಮ್ಮೇಳನಕ್ಕೆ ಸಿದ್ಧತೆಗಳು ನಡೆಯುತ್ತಿವೆ.
13ನೇ ರಾಜ್ಯ ಸಮ್ಮೇಳನ ಕೂಡಲ ಸಂಗಮದಲ್ಲಿ 2016ರ ಸಪ್ಟಂಬರ್ 17 ರಿಂದ 19 ರವರೆಗೆ ನಡೆದಿತ್ತು. ನಂತರದ ಈ ಮೂರು ವರ್ಷಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ರಾಜ್ಯದಲ್ಲಿ ನಡೆದಿರುವ ಕಾರ್ಮಿಕರ ಹೋರಾಟಗಳ ಒಂದು ಪಕ್ಷಿನೋಟ ಇಲ್ಲಿದೆ.

ಕನಿಷ್ಟ ವೇತನ, ಖಾಯಂ ಕೆಲಸ ಹಾಗು ಸಾಮಾಜಿಕ ಭದ್ರತೆಗಾಗಿ ರಾತ್ರಿ ಹಗಲು ಸಾಮೂಹಿಕ ಧರಣಿ –ಜನವರಿ 31, 2017ರಿಂದ:

ರೂ. 18000/– ಕನಿಷ್ಟ ವೇತನ ನಿಗದಿ ಪಡಿಸಲು ಒತ್ತಾಯಿಸಿ, ಸ್ಕೀಂ ವರ್ಕರ್ಸ್ ಒಳಗೊಂಡಂತೆ ತೀವ್ರ ಹೋರಾಟ ಮಾಡುವುದು ಅಗತ್ಯವಿದೆ. ಖಾಯಂ ಕೆಲಸ, ಸಮಾಜಿಕ ಭದ್ರತಾ ಯೋಜನೆಗಳ ಜಾರಿಗಾಗಿ ತೀವ್ರ ಪ್ರಚಾರ ಹಾಗು ಹೋರಾಟವನ್ನು ನಡೆಸಲು ಸಿದ್ದತೆಗಳನ್ನು ಮಾಡಬೇಕು ಎಂದು ಬಾಗಲಕೋಟೆ ಕೂಡಲ ಸಂಗಮದಲ್ಲಿ ನಡೆದ 13 ನೇ ರಾಜ್ಯ ಸಮ್ಮೇಳನ ಕರೆ ನೀಡಿತ್ತು.

ಈ ಕರೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರದ ಬಜೆಟ್ ಅಧಿವೇಶನಕ್ಕೆ ಮೊದಲು ಅಂದರೆ ಜನವರಿ 31, 2017ರಿಂದ ರಾತ್ರಿ ಹಗಲು ಸಾಮೂಹಿಕ ನಿರಂತರ ಧರಣಿ ಸತ್ಯಾಗ್ರಹ/ಮುತ್ತಿಗೆ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಯಿತು. ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಸಂಯೋಜಿತ ರಾಜ್ಯ ಸಂಘಗಳು ಒಳಗೊಂಡಂತೆ ಸುಮಾರು 5 ಲಕ್ಷ ಕರಪತ್ರಗಳನ್ನು ಮುದ್ರಿಸಿ ಪ್ರಚಾರ ನಡೆಸಲಾಯಿತು. ಜನವರಿ 31 ರಿಂದ ರಾಜ್ಯ ಸಮಿತಿಯ ನೇತೃತ್ವದಲ್ಲಿ ಮೊದಲ ಬಾರಿಗೆ ಎಲ್ಲಾ ವಿಭಾಗದ ಕಾರ್ಮಿಕರನ್ನು ಒಳಗೊಂಡ ಬೃಹತ್ ಹಗಲು ರಾತ್ರಿ ಧರಣಿಯನ್ನು ಯಶಸ್ವಿಯಾಗಿ ನಡೆಸಲಾಯಿತು. ಪ್ರತಿಭಟನೆಯಲ್ಲಿ ಸುಮಾರು 34,000 ಜನ ಕಾರ್ಮಿಕರು ಭಾಗವಹಿಸಿದ್ದರು. ಈ ಹೋರಾಟ ಸರ್ಕಾರದ ಮೇಲೆ ಒತ್ತಡ ಹೇರುವುದರಲ್ಲಿ ಇದೊಂದು ಯಶಸ್ವಿ ಪ್ರಯೋಗವಾಗಿತ್ತು.

ಹೋರಾಟದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪರವಾಗಿ ಹೋರಾಟಗಾರರನ್ನು ಭೇಟಿಯಾದ ಸಚಿವರುಗಳು ನೀಡಿದ ಹಲವು ಇತರೆ ಭರವಸೆಗಳು ಬಜೆಟ್‌ನಲ್ಲಿ ಅಳವಡಿಕೆಯಾಗದಿದ್ದರೂ, ಈ ಹೊರಾಟದ ಫಲವಾಗಿ ಕೈಗಾರಿಕಾ ಕಾರ್ಮಿಕರ ನಿವೃತಿ ವಯಸ್ಸು 60ಕ್ಕೆ ಏರಿಕೆ, ಅಂಗನವಾಡಿ ಕಾರ್ಯಕರ್ತರಿಗೆ ರೂ.1000/– ಹಾಗು ಸಹಾಯಕರಿಯರಿಗೆ ರೂ. 500/– ಮಾಸಿಕ ವೇತನದಲ್ಲಿ ಹೆಚ್ಚಳ, 5 ವಿಭಾಗಗಳ ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ ಒಳಗೊಂಡಪಿಂಚಣಿ, ಸ್ಮಾರ್ಟ ಕಾರ್ಡ ಯೋಜನೆ, ಆಶಾ ಕಾರ್ಯಕರ್ತರಿಗೆ ವೇತನ ಹೆಚ್ಚಳ ಮುಂತಾದ ಕೆಲವು ಅಂಶಗಳೂ ರಾಜ್ಯದ ಬಜೆಟ್ ನಲ್ಲಿ ಪ್ರಕಟಣೆಯಾದವು.

ಸೆಪ್ಟೆಂಬರ್ 14, 2017ರ ಮಹಾ ಪ್ರದರ್ಶನ:

ಇವೇ ಬೇಡಿಕೆಗಳ ಮೇಲಿನ ಹೋರಾಟದ ಮುಂದುವರಿಕೆಯಾಗಿ ಸೆಪ್ಟೆಂಬರ್ 14 ಮಹಾಪ್ರದರ್ಶನವು ರಾಜ್ಯದಲ್ಲಿ ಕಾರ್ಮಿಕ ಚಳುವಳಿಗೆ ಸ್ಪೂರ್ತಿ ನೀಡುವಂತದ್ದಾಗಿತ್ತು. ಸುಮಾರು 35,000ಕ್ಕು ಹೆಚ್ಚು ಜನ ಭಾಗವಹಿಸಿದ್ದರು. ಈ ಚಳುವಳಿಯನ್ನು ಆತ್ಯಂತ ಯಶಸ್ವಿಗೊಳಿಸಲು ಕೆಲಸ ಮಾಡಿದ ರಾಜ್ಯ ಸಮಿತಿ ಹಾಗು ರಾಜ್ಯ ಪದಾಧಿಕಾರಿಗಳು ಐಕ್ಯ ಕಾರ್ಯಾಚರಣೆಯನ್ನು ಸಿಐಟಿಯು ಅಖಿಲ ಭಾರತ ನಾಯಕತ್ವ ವಿಶೇಷವಾಗಿ ಅಭಿನಂದಿಸಿತ್ತು. ಈ ಹೋರಾಟದಲ್ಲಿ ಸಿಐಟಿಯುವಿಗೆ ಸಂಯೋಜಿತವಾಗಿರುವ ಎಲ್ಲಾ ಕಾರ್ಮಿಕ ಸಂಘಟನೆಗಳು ಜನರನ್ನು ಅಣಿನೆರೆಸಲು ಸಕ್ರಿಯವಾಗಿ ಕೆಲಸ ಮಾಡಿದವು. ಹಲವು ಜಿಲ್ಲಾ ಸಮಿತಿಗಳು ಪೂರ್ವ ಯೋಜನೆಯನ್ನು ಮಾಡಿಕೊಂಡು ವಾಹನಗಳಲ್ಲಿ ಜನರನ್ನು ಕರೆತಂದಿದ್ದವು. ಅದಕ್ಕಾಗಿಯೇ ಜಿಲ್ಲಾ ಸಮಿತಿಗಳು ಮಾಡಿದ ಶ್ರಮ ಹಾಗು ಕಾರ್ಮಿಕರು ಹೊತ್ತುಕೊಂಡಿದ್ದ ಆರ್ಥಿಕ ಹೊರೆಯ ಪ್ರಮಾಣವು ಚಳುವಳಿಯ ಮೇಲೆ ಕಾರ್ಮಿಕರು ಹೊಂದಿರುವ ವಿಶ್ವಾಸದ ಪ್ರದರ್ಶನವಾಗಿತ್ತು. ರಂಗವಾರಾಗಿ ನಾವು ಮಾಡುತ್ತಿರುವ ಚಳುವಳಿಗಳು ಹಾಗು ಸಂಘಟನೆಗಳು ನಡೆಸುತ್ತಿರುವ ಹೋರಾಟಗಳ ಪ್ರಭಾವ ಈ ವಿಶ್ವಾಸವೇ ಇಂತಹ ಚಳವಳಿ ಮೂಡಿಬರಲು

ಪುಟ 10 ಕ್ಕೆ







ಸರಕಾರಗಳಿಗೆ ಸವಾಲೆಸೆದ ಕಾರ್ಮಿಕ ವರ್ಗದ ಮೂರು....

ಪುಟ 9 ರಿಂದ

ಕಾರಣವಾಗಿತ್ತು.

ಈ ಚಳುವಳಿಯ ಪೂರ್ವಭಾಗಿ ತಯಾರಿಗಾಗಿ ಹಲವು ಹಂತಗಳ ಕಾರ್ಯಕ್ರಮಗಳನ್ನು ನಡೆಸಲಾಯಿತು.

2017ರ ಮೇ ದಿನಾಚರಣೆಯನ್ನು "ಕಾರ್ಮಿಕ ಹಕ್ಕುಗಳ ರಕ್ಷಣೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ ಹಾಗು ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ" ಒತ್ತಾಯಿಸುವ ಪ್ರತಿಭಟನಾ ದಿನವಾಗಿ 117 ಥಳಗಳಲ್ಲಿ ಮೇ ದಿನಾಚರಣಾ ಮೆರವಣಿಗೆಗಳು ಹಾಗು ಬಹಿರಂಗ ಸಭೆಗಳನ್ನು ಆಯೋಜಿಸಿ ಕೇಂದ್ರ ಸರ್ಕಾರವು ಹಲವು ಮಾರಕವಾದ ಕಾರ್ಮಿಕ ತಿದ್ದುಪಡಿ ಕಾನೂನುಗಳ ವಿರುದ್ಧ, ಜತೆಯಲ್ಲಿ ಲಾಭದಾಯಕವಾಗಿ ಕಾರ್ಯನಿರ್ವಹಿಸುವ ಹಾಗು ಕೆಲಸದ ಅವಕಾಶಗಳಲ್ಲಿ ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸುತ್ತಿರುವ, ಜನರ ಆಸ್ತಿಯಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ಅಗ್ಗದ ದರದಲ್ಲಿ ಮಾರಾಟ ಮಾಡಲು ಹೊರಟ ಕೇಂದ್ರ ಸರ್ಕಾರದ ಈ ದೇಶದ್ರೋಹಿ ತೀರ್ಮಾನವನ್ನು ಜನರ ಮಧ್ಯೆ ಬಯಲುಗೊಳಿಸುವ ಪ್ರಯತ್ನಗಳನ್ನು ನಡೆಸಲಾಯಿತು.

5, 6 & 7 ಮೇ 2017 ರಲ್ಲಿ ಮೂರು ದಿನಗಳ ಕಾರ್ಯಾಗಾರವನ್ನು ಸೆಪ್ಟೆಂಬರ್ ಹೋರಾಟಕ್ಕೆ ಪೂರ್ವಭಾವಿಯಾಗಿ ನಡೆಸಲಾಯಿತು. 5 ವಲಯ ಮಟ್ಟದ ಜಿಲ್ಲಾ ಪದಾಧಿಕಾರಿಗಳ ಸಭೆ ನಡೆಸಲಾಯಿತು. 28 ಕೇಂದ್ರಗಳಲ್ಲಿ ಜಿಲ್ಲಾ ಕಾರ್ಯಾಗಾರಗಳು ನಡೆದವು. ಜುಲೈ 29,2017 ರಂದು ರಾಜ್ಯ ಮಟ್ಟದ ಜಾಥವನ್ನು ರಾಜ್ಯ ಉಪಾಧ್ಯಕ್ಷರಾದ ಕಾಂ. ವಿಜೆಕೆ ನಾಯರ್ ರವರು ಚಿಕ್ಕಬಳ್ಳಾಪುರದಲ್ಲಿರುವ ಕರ್ನಾಟಕದ ಜಲಿಯನ್‌ವಾಲಾಬಾಗ್ ಎಂದೇ ಪ್ರಸಿದ್ಧವಾಗಿರುವ ವಿದುರಾಶ್ವತದಲ್ಲಿ ಉಧ್ಘಾಟನೆ ಮಾಡಿದರು. ಈ ಜಾಥವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯು ಸಂಚರಿಸಿತು. ಸುಮಾರು 39 ಬಹಿರಂಗ ಸಭೆಗಳನ್ನು ನಡೆಸಿತು. ಅತಿ ಅಲ್ಪಾವಧಿಯಲ್ಲಿ ಸಮುದಾಯ ಸಂಘಟನೆಯ ನೆರವಿನೊಂದಿಗೆ, ವಿದ್ಯಾರ್ಥಿ ಯುವಜನ ಸಂಘಟನೆಗಳ ಕಾರ್ಯಕರ್ತರು ತಯಾರಿಸಿದ ಬೀದಿ ನಾಟಕ ತಂಡವು ಇಡೀ ಜಾಥದ ಯಶಸ್ವಿಗೆ ಸಹಾಯಕವಾಗಿತ್ತು.

ಜುಲೈ 29ರಂದು ವಿದುರಾಶ್ವತದಲ್ಲಿ ನಡೆದ ಉಧ್ಘಾಟನಾ ಸಭೆಯಿಂದ ದಿನಾಂಕ 13 ಆಗಸ್ಟ್ 2017ರಂದು ಕುಂದಾಪುರದಲ್ಲಿ ನಡೆದ ಸಮಾರೋಪ ಸಭೆಯವರೆಗಿನ ಎಲ್ಲಾ ಸಭೆಗಳಲ್ಲಿ ಹಾಗು ಹಾದಿಯುದ್ದಕ್ಕೂ ಆಯೋಜಿಸಲಾದ ಸ್ವಾಗತ ಕಾರ್ಯಕ್ರಮಗಳಲ್ಲಿ ಸುಮಾರು 12,500 ಜನ ಕಾರ್ಮಿಕರು ಪಾಲ್ಗೊಂಡಿದ್ದರು.

2019 ಜನವರಿ 8 ಮತ್ತು 9 ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ:

ಸೆಪ್ಟೆಂಬರ್ 28 ರಂದು ನವದೆಹಲಿಯಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಸಂಘಟಿಸಿದ್ದ 'ರಾಷ್ಟ್ರೀಯ ಕಾರ್ಮಿಕ ಸಮಾವೇಶ'ವು ಎನ್‌ಡಿಎ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ.. ಕಾರ್ಮಿಕ ಹಾಗೂ ದೇಶ ವಿರೋಧಿ ನೀತಿಗಳ ವಿರುದ್ಧ 2019 ಜನವರಿ 8 ಮತ್ತು 9 ರಂದು ಎರಡು ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತ್ತು. ರಾಜ್ಯದಲ್ಲಿ ಇದು ಅತ್ಯಂತ ಯಶಸ್ವಿಯಾಯಿತು. ಇದನ್ನು ಯಶಸ್ವಿಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಮಟ್ಟದ ಜೆಸಿಟಿಯು ಸಮಾವೇಶವೊಂದನ್ನು ದಿನಾಂಕ 30.10.2018ರಂದು ಬೆಂಗಳೂರಿನಲ್ಲಿ ನಡೆಸಲಾಯಿತು. ಸಿಐಟಿಯು ಅಖಿಲ ಭಾರತ ಪ್ರಧಾನಕಾರ್ಯದರ್ಶಿಗಳಾದ ಕಾಂ.ತಪನ್ ಸೇನ್ ಹಾಗು ಏಐಟಿಯುಸಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಅಮರ್ಜಿತ್ ಕೌರ್ ಹಾಗು ಐಎನ್‌ಟಿಯುಸಿ ಅಧ್ಯಕ್ಷರಾದ ಶ್ರೀ.ಸಂಜೀವ ರೆಡ್ಡಿಯವರು ಹಾಗು ಇತರೆ ಸಂಘಟನೆಗಳ ರಾಷ್ಟ್ರ ಮುಖಂಡರುಗಳು ಭಾಗವಹಿಸಿದ್ದರು.

ರಾಜ್ಯದಲ್ಲಿ ಮುಷ್ಕರವು ಹಲವು ಜಿಲ್ಲೆಗಳಲ್ಲಿ ಬಂದ್ ಸ್ವರೂಪದಲ್ಲಿ ನಡೆಯಿತು. ಭಾರತ್ ಬಂದ್ ವಿಫಲ ಎಂದು ಪ್ರಕಟಿಸಲು ನಡೆದ ಹಲವು ಪ್ರಯತ್ನಗಳ ನಡುವೆಯೂ ಕೈಗಾರಿಕೆಗಳ ಮುಷ್ಕರವು, ಸಾರಿಗೆ ಮುಷ್ಕರವು ಯಶಸ್ವಿಯಾಗಿ ನಡೆದಿದೆ. ಪ್ರತಿಬಿಂಬಿಸಿದವು.

ನವದೆಹಲಿಯಲ್ಲಿ ನಡೆದ ಯಶಸ್ವಿ ಮಹಾಪಡಾವ್ ಚಳುವಳಿ:

ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ 12 ಬೇಡಿಕೆಗಳ ಆಧಾರದಲ್ಲಿ ನವೆಂಬರ್ 9,10 & 11–2017ರಂದು ನವದೆಹಲಿಯಲ್ಲಿ ನಡೆಸಿದ ಮಹಾಪಡಾವ್ ಹೋರಾಟದಲ್ಲಿ ನಮ್ಮ ರಾಜ್ಯದಿಂದ ಸಾರ್ವಜನಿಕ ಉದ್ಯಮಗಳ ನೌಕರರು, ಸಂಘಟಿತ ವಲಯದ ಕಾರ್ಮಿಕರು ಅಸಂಘಟಿತ ವಲಯ ಹಾಗೂ ಹೆಚ್ಚಿನ ಸಂಖ್ಯೆಯ ಸ್ಕೀಂ ನೌಕರರು ಸೇರಿ 3247 ಜನ ವಿವಿಧ ಕ್ಷೇತ್ರದ ಕಾರ್ಮಿಕರು ಭಾಗವಹಿಸಿದ್ದರು..



ಅಸಂಘಟಿತ ಕಾರ್ಮಿಕರು, ಸ್ಕೀಂ ನೌಕರರು, ಗ್ರಾಮ ಪಂಚಾಯತ್ ನೌಕರರು ಹಾಗು ಕೆಲವು ಜಿಲ್ಲೆಗಳಲ್ಲಿ ರೈತ–ಕೃಷಿಕೂಲಿಗಾರರ ಸಂಘಟನೆಗಳು ಮತ್ತು ವಿಧ್ಯಾರ್ಥಿ–ಯುವಜನ–ಮಹಿಳಾ ಸಂಘಟನೆಗಳು ಹೋರಾಟದಲ್ಲಿ ಸಕ್ರಿಯ ಭಾಗವಹಿಸಿದ್ದನ್ನು ಗಮನಿಸಬಹುದಾಗಿದೆ. ರಾಜ್ಯದಲ್ಲಿ ಬೆಂಗಳೂರು ಒಳಗೊಂಡಂತೆ ಹಲವು ಜಿಲ್ಲೆ ಗಳಲ್ಲಿ ಯುವ ಕಾರ್ಮಿಕರು ಉತ್ಸಾಹ ಭರಿತರಾಗಿ ಮುಷ್ಕರದ ಪ್ರಚಾರ ಪ್ರಕ್ಷೋಬೆ ಕೆಲಸಗಳಲ್ಲಿ ತೊಡಗಿದ್ದರು. ಈ ಕುರಿತು ನಡೆಸಲಾದ ವಿಮರ್ಶೆಯಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ, ಜನ ವಿರೋಧಿ ಹಾಗು ಬಂಡವಾಳಿಗರ ಪರವಾದ ಆಕ್ರಮಣಕಾರಿ ನವ ಉದಾರೀಕರಣದ ಆರ್ಥಿಕ ನೀತಿಗಳ ವಿರುದ್ಧ ಜನರ ವ್ಯಾಪಕ ಪ್ರತಿಕ್ರಿಯೆ ಈ ಮುಷ್ಕರದಲ್ಲಿ

ಸೆಪ್ಟೆಂಬರ್ 5 2018 ರ "ಮಜ್ದೂರ್ ಕಿಸಾನ್ ಸಂಘರ್ಷ ರ‍್ಯಾಲಿ" ಮಹತ್ವದ ಪ್ರಯತ್ನವಾಗಿದೆ. ಸಿಐಟಿಯು ಜನರಲ್ ಕೌನ್ಸಿಲ್ ಎರಡು ಪ್ರಮುಖ ಗುರಿಗಳನ್ನು ಅಧರಿಸಿ ಸೆಪ್ಟೆಂಬರ್ 5ರ ಹೋರಾಟದ ಸಿದ್ದತೆಗಳನ್ನು ಮಾಡಲು ಕರೆ ನೀಡಿತ್ತು. **ತಲುಪದಿರುವವರನ್ನು ತಲುಪುವುದು ಹಾಗು ಸಮಸ್ಯೆಗಳನ್ನು ನೀತಿಗಳೊಂದಿಗೆ ಹೊಂದಿಸುವುದು ಮತ್ತು ಈ ಜನವಿರೋಧಿ ನೀತಿಗಳ ಹಿಂದಿನ ರಾಜಕೀಯವನ್ನು ಬಯಲುಗೊಳಿಸುವುದು** ಎಂಬ ಈ ಎರಡು ವಿಚಾರಗಳನ್ನು ಆಧರಿಸಿ ನಮ್ಮ ಪ್ರಚಾರ ಪ್ರಕ್ರಿಯೆಗಳನ್ನು ಮಾಡಲು ರಾಜ್ಯ ಸಮಿತಿಯು ಯೋಜನೆಯನ್ನು ರೂಪಿಸಿತು. ದೆಹಲಿಯಲ್ಲಿ ನಡೆದ ಪ್ರತಿಭಟನೆ ಚಾರಿತ್ರಿಕವಾಗಿತ್ತು. ಕಾರ್ಮಿಕ–ರೈತ–ಕೃಷಿ ಕೂಲಿಕಾರರು ಸಖ್ಯತೆಯನ್ನು ಮೆರೆದ ಈ ಪ್ರಯತ್ನ ಹಲವು ಜನ ವಿಭಾಗಗಳ ಮೆಚ್ಚಿಗೆ ಹಾಗು ಬೆಂಬಲವನ್ನು ಪಡೆದಿದೆ. ದೆಹಲಿಗೆ ರಾಜ್ಯದಿಂದ ಸುಮಾರು 3000 ಜನ ಕಾರ್ಮಿಕರು ಹಾಗೂ ರೈತರು ಸುರಿಯುವ ಮಳೆಯಲ್ಲೂ ಭಾಗವಹಿಸಿದ್ದರು.

ಸಿಐಟಿಯು ಸಂಯೋಜಿತ ಸಂಘಗಳು ನಡೆಸಿದ ಪ್ರಮುಖ ಹೋರಾಟಗಳು:

ಅಂಗನವಾಡಿ ನೌಕರರ ಹೋರಾಟ: ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ವೇತನ ರೂ.10,000/– ಹಾಗು ಸಹಾಯಕಿಯರಿಗೆ ರೂ. 7,500/– ವೇತನವನ್ನು ನಿಗದಿ ಪಡಿಸದೇ ಇದ್ದಲ್ಲಿ ದಿನಾಂಕ 20.03.2017 ರಿಂದ ಬೆಂಗಳೂರಿನಲ್ಲಿ ಸಾಮೂಹಿಕ ಪ್ರತಿಭಟನೆ ನಡೆಸಲು ಅಂಗನವಾಡಿ ನೌಕರರ ಸಂಘವು ತೀರ್ಮಾನಿಸಲಾಗಿತ್ತು. ಈ ಹೋರಾಟವು ಆರಂಭದಲ್ಲಿ ನಮ್ಮ ನೇತೃತ್ವದಲ್ಲೇ ಆರಂಭಗೊಂಡರೂ ನಂತರದಲ್ಲಿ ಇತರೆ ಸಂಘಟನೆಗಳು ಇದರಲ್ಲಿ ಭಾಗವಹಿಸಿದವು. ಈ ಹೋರಾಟವನ್ನು ಮುನ್ನಡೆಸಿದ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ಬಗ್ಗೆ ಕಾರ್ಮಿಕರ ಮಧ್ಯೆ ಗೌರವ ಹೆಚ್ಚಿಸಿದೆ. ನಾಲ್ಕು ದಿನಗಳು ನಡೆದ ಈ ಚಾರಿತ್ರಿಕ ಹೋರಾಟದ ಫಲವಾಗಿ ದಿನಾಂಕ 10.04.2017ರಂದು ಮುಖ್ಯಮಂತ್ರಿಗಳ ಜತೆ ಸಭೆ ನಿಗದಿಯಾಯಿತು. ಸರ್ಕಾರ ಜತೆ ನಡೆದ ಸಭೆಯಲ್ಲಿ ಅಂತಿಮವಾಗಿ ಕಾರ್ಯಕರ್ತೆಯರಿಗೆ ರೂ. 2000/–, ಸಹಾಯಕಿಯರಿಗೆ ರೂ. 1000/– ಹಾಗು ಮಿನಿ ಅಂಗನವಾಡಿಯ ಕಾರ್ಯಕರ್ತರಿಗೆ ರೂ. 1,500/– ವೇತನ ಹೆಚ್ಚಳವನ್ನು ಮಾಡಲು ಸರ್ಕಾರವು ಒಪ್ಪಿಗೆ ನೀಡಿತು ಇದರೊಂದಿಗೆ ಅಂಗನವಾಡಿ ನೌಕರರಿಗೆ ಸೇವಾ ನಿಯಮಗಳನ್ನು ರೂಪಿಸಲು ಸಹ ಒಪ್ಪಿಗೆ ನೀಡಿತು.

ಕಟ್ಟಡ ನಿರ್ಮಾಣ ಕಾರ್ಮಿಕರ ಮೂರು ದಿನಗಳ ಸತ್ಯಾಗ್ರಹ :

ಕೈಗೊಂಡಿರುವ ಕಟ್ಟಡ ಕಾರ್ಮಿಕರಿಗೆ ಪ್ರಯೋಜನಕಾರಿಯಾಗದ ಯೋಜನೆಗಳನ್ನು ವಿರೋಧಿಸಿ ಹಾಗೂ ಮಂಡಳಿಯಲ್ಲಿ ಸಂಗ್ರಹವಾಗಿರುವ 5950 ಕೋಟಿ ಹಣವನ್ನು ಕಾರ್ಮಿಕ ಕಲ್ಯಾಣಗಳಿಗಾಗಿ ಮಾತ್ರ ವಿನಿಯೋಗಿಸಲು ಆಗ್ರಹಿಸಿ, ಹಾಲಿ ಇರುವ 12 ಕಲ್ಯಾಣ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಫಲಾನುಭವಿಗಳಿಗೆ ವಿತರಿಸಲು ಮತ್ತು ಆ ಎಲ್ಲಾ ಸೌಲಭ್ಯಗಳಿಗೆ ನೀಡುವ ಧನ ಸಹಾಯವನ್ನು ಹೆಚ್ಚಿಸಲು ಒತ್ತಾಯಿಸಿ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಗೆ ಸ್ವತಂತ್ರ ಅಧಿಕಾರ ಹೊಂದಿರುವ ಸಿಇಒ ಹಾಗೂ ಸಿಬ್ಬಂದಿ ನೇಮಿಸಿ ಮಂಡಳಿ ಕೆಲಸವನ್ನು ➚

ಸ್ವಾತಂತ್ರ್ಯೋತ್ಸವ ಜಾಗರಣೆ

ಮೇಲೆ ಹೇಳಿದ ಸಪ್ಟಂಬರ್ 14, 2017ರ ಮಹಾಪ್ರದರ್ಶನದ ಭಾಗವಾಗಿ ರಾಜ್ಯಾದ್ಯಂತ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ಅಗಸ್ಟ್ 14 ರ ಅಹೋರಾತ್ರಿ ಧರಣಿಗಳನ್ನು ಸಂಗಟಿಸಲಾಯಿತು. ಇದೊಂದು ಹೊಸ ಪ್ರಯತ್ನವಾಗಿದ್ದು, 83 ಕೇಂದ್ರಗಳಲ್ಲಿ ಒಟ್ಟು 19130 ಜನರು ಭಾಗವಹಿಸಿದರು. ವಿವಿಧ ಜಿಲ್ಲೆಗಳಲ್ಲಿ ಬುದ್ದಿಜೀವಿಗಳು ಪ್ರಗತಿಪರರನ್ನು ಒಳಗೊಳಿಸುವ ಪ್ರಯತ್ನವಾಗಿದೆ. ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿರುವುದು ಉತ್ತಮ ಬೆಳವಣಿಗೆಯಾಗಿರುತ್ತದೆ. ಬೆಂಗಳೂರು, ದೊಡ್ಡಬಳ್ಳಾಪುರ ಹಾಗು ತುಮಕೂರು ಕೇಂದ್ರಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ತಪನ್ ಸೇನ್ ರವರು ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ಮಾಡಿದರು. ಇಡೀರಾತ್ರಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಕಾರ್ಮಿಕರ ಗಮನ ಸೆಳೆಯುವ ವಿಷಯವಾಗಿತ್ತು. ನಿವೃತ್ತ ಸುಪ್ರೀಕೋರ್ಟ ನ್ಯಾಯಾಧೀಶರಾದ ಶ್ರೀ. ವಿ. ಗೋಪಾಲಗೌಡರು ಹಾಗು ಹಲವು ವಿಚಾರವಾದಿಗಳು ಬೆಂಗಳೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

2018ರಲ್ಲಿ ರಾಜ್ಯದಲ್ಲಿ 60 ಕೇಂದ್ರಗಳಲ್ಲಿ ಈ ಕಾರ್ಯಕ್ರಮಗಳನ್ನು ಸಂಘಟಿಸಲಾಯಿತು. ಸುಮಾರು ಹತ್ತು ಸಾವಿರ 'ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಿಗ್ಗೆ 5.00 ಗಂಟೆಯ ವರೆಗೆ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ. ಹೇಮಲತ ರವರು ಭಾಗವಹಿಸಿದರು. ನಿವೃತ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ವಿ. ಗೋಪಾಲಗೌಡ, ಖ್ಯಾತ ಚಿಂತಕರಾದ ಕಾಂ. ಜಿ. ರಾಮಕೃಷ್ಣ, ಖ್ಯಾತ ರಂಗಕರ್ಮಿ ಪ್ರಸನ್ನ, ಹಿರಿಯ ಸ್ವಾತಂತ್ರ ಹೋರಾಟಗಾರರು, ಸಿಐಟಿಯು ರಾಜ್ಯ ಪದಾಧಿಕಾರಿಗಳು ಭಾಗವಹಿಸಿದರು. ಸುರಿಯುವ ಮಳೆಯ ನಡುವೆಯು ಸ್ಪೂರ್ತಿದಾಯಕವಾಗಿ ಹೋರಾಟ ನಡೆದಿದೆ.

2019ರಲ್ಲಿ ರಾಷ್ಟ್ರ ವ್ಯಾಪಿಯಾಗಿ ಆಗಸ್ಟ್ 14ರ ರಾತ್ರಿ "ಸಾಮೂಹಿಕ ಜಾಗರಣೆ" ಆಚರಣೆಮಾಡಲು ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆ ಕರೆ ನೀಡಿತು. ಕರ್ನಾಟಕದಲ್ಲಿ ನಡೆಯುತ್ತಿದ್ದ ಈ ಹೋರಾಟದ ಅನುಭವ ನೀಡಿದ ಸ್ಪೂರ್ತಿಯನ್ನಯ ಅಖಿಲ ಭಾರತ ಮಟ್ಟದ ಕಾರ್ಯಕ್ರಮವಾಗಿ ಇದನ್ನು ರೂಪಿಸಲಾಗಿತ್ತು.



ಚುರುಕುಗೊಳಿಸಬೇಕೆಂದು ಹಾಗೂ ಇನ್ನಿತರೆ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ 2017, ನವೆಂಬರ್ 27 ರಿಂದ ರಾಜ್ಯದ ಕಟ್ಟಡ ನಿರ್ಮಾಣ ಕ್ಷೇತ್ರದ ಸಾವಿರಾರು ಕಾರ್ಮಿಕರು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ (INTUC-AITUC-CITU-NCL-TUCC-HMKP- BMS-AICCTU-HMS) ಸತತ ಮೂರು ದಿನಗಳ ಕಾಲ ಹಗಲು ರಾತ್ರಿ ಕಲ್ಯಾಣ ಮಂಡಳಿ ಕಛೇರಿ ಎದುರು ಸತ್ಯಾಗ್ರಹ ನಡೆಸಿದರು. ಮತ್ತು ಹಲವಾರು ಬೇಡಿಕೆಗಳ ಕುರಿತಾಗಿ ಒಂದು ಇತ್ಯರ್ಥಕ್ಕೆ ಬರಲಾಯಿತು. ಪ್ರಥಮ ಬಾರಿಯಾಗಿ ನಡೆಸಲಾದ ಈ ಹೋರಾಟ ಕಾರ್ಮಿಕರ ವರ್ಗದಲ್ಲಿ ಹಾಗೂ ಕಾರ್ಮಿಕ ಸಂಘಟನೆಗಳಲ್ಲಿ ಒಂದು ಐಕ್ಯತೆ ತರುವಲ್ಲಿ ಯಶಸ್ವಿಯಾಯಿತು.

ಕಟ್ಟಡ ಕಾರ್ಮಿಕ ಕಾನೂನು–1996 ಹಾಗೂ ಸೆಸ್ ಕಾನೂನು ಉಳಿವಿಗಾಗಿ ರ್‍ಯಾಲಿ :

ಕಟ್ಟಡ ಕಾರ್ಮಿಕರು ಹಲವು ವರ್ಷಗಳ ಕಾಲ ಹೋರಾಟ ನಡೆಸಿ ಗಳಿಸಿದ ಕಾನೂನುಗಳನ್ನು ಮತ್ತು ಅದರಡಿ ದೊರಕುತ್ತಿದ್ದ ಸೌಲಭ್ಯಗಳನ್ನು ಇಲ್ಲದಂತೆ ಮಾಡುವ ಕ್ರಮದ ವಿರುದ್ದ **"ಕಟ್ಟಡ ಕಾರ್ಮಿಕ ಕಾನೂನು–1996 ಉಳಿಸಿ–ಕಟ್ಟಡ ಕಾರ್ಮಿಕ ಮಂಡಳಿ ಹಾಗೂ ಕಾರ್ಮಿಕರ ಬದುಕನ್ನು ರಕ್ಷಿಸಿ"** ಎನ್ನುವ ವಿಶಾಲ ಆಂದೋಲನ ವನಡೆದಿದೆ. ಕೇಂದ್ರ ಸರಕಾರ ಅಂಗೀಕರಿಸಿದ ಸಾರ್ವತ್ರಿಕ ಸಾಮಾಜಿಕ ಭದ್ರತಾ ಸಂಹಿತೆ ಹಾಗೂ ವೃತ್ತಿ ಆಧಾರಿತ ಸುರಕ್ಷಾ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಕುರಿತಾದ ಎರಡು ಕೋಡ್‌ಗಳು ಜಾರಿಯಾದರೆ ಈಗಿರುವ ನಮ್ಮ ಎರಡು ಕಟ್ಟಡ ಕಾರ್ಮಿಕ ಕಾನೂನುಗಳು ಸೇರಿ ರದ್ದಾಗುವುದರ ವಿರುದ್ದ ಕಾರ್ಮಿಕ ವಿರೋಧಿ ಮಸೂದೆಗಳನ್ನು ಕೂಡಲೇ ಕೈ ಬಿಡಬೇಕೆಂದು ಕರ್ನಾಟಕದಲ್ಲಿ ಕಾನೂನು ತಜ್ಞರನ್ನೊಳಗೊಂಡು ಬೆಂಗಳೂರಿನಲ್ಲಿ ನಡೆದ **'ದುಂಡು ಮೇಜಿ ಸಭೆ'** ಯನ್ನು ಜಂಟಿಯಾಗಿ ನಡೆಸಲಾಯಿತು. ಅಲ್ಲದೆ ಅಲ್ಲದೆ ಆಗಸ್ಟ 9 ರಂದು ಜಿಲ್ಲಾ ಕೇಂದ್ರಗಳಲ್ಲಿ ಜಂಟಿ ಧರಣಿ ಸತ್ಯಾಗ್ರಹಗಳನ್ನು ಕಾರ್ಮಿಕರು ನಡೆಸಿದರು. ಮತ್ತು ಪ್ರಧಾನ ಮಂತ್ರಿಗಳಿಗೆ, ಹಾಗೂ ಮುಖ್ಯಮಂತ್ರಿ ಕಚೇರಿಗೂ ಸಾವಿರಾರು ಕಾರ್ಮಿಕರು **'ಪೋಸ್ಟ್ ಕಾರ್ಡ ಚಳವಳಿ'** ನಡೆಸಿ ಕಟ್ಟಡ ಕಾರ್ಮಿಕರ ಹಿತವನ್ನು ರಕ್ಷಿಸಬೇಕೆಂದು ಆಗ್ರಹಿಸಿದರು ಅಲ್ಲದೆ ಹೋರಾಟದ ಮುಂದುವರೆದ ಸೆಪ್ಟೆಂಬರ್ 19 ರಂದು ಐದು ಸಾವಿರಕ್ಕೂ ಅಧಿಕ ಕಾರ್ಮಿಕರು ಬೆಂಗಳೂರಿನಲ್ಲಿ INTUC- AITUC CITU--NCL-HMS ನೇತೃತ್ವದಲ್ಲಿ ಬೃಹತ್ ಮೆರವಣಿಗೆ ಹಾಗೂ ಬಹಿರಂಗ ಸಭೆ ಆಯೋಜಿಸುವ ಮೂಲಕ ಕಾರ್ಮಿಕರು ತಮ್ಮ ಪ್ರತಿರೋಧ ವ್ಯಕ್ತಪಡಿಸಿದರು. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನಡೆಯನ್ನು ಕಟ್ಟಡ ಕಾರ್ಮಿಕರ ನಡುವೆ ಪ್ರಚಾರ ಮಾಡುವಲ್ಲಿ ಮತ್ತು ಗಮನ ಸೆಳೆಯುವಲ್ಲಿ ಇಂದು ಸಾಕಷ್ಟು ಯಶಸ್ವಿಯಾಗಿದೆ.

ಹಮಾಲಿ ಕಾರ್ಮಿಕರ ಹೋರಾಟಗಳು:

ಹಮಾಲಿ ಕಾರ್ಮಿಕರ ಫೆಡರೇಷನ್ ಸಿಐಟಿಯು ನೇತೃತ್ವದಲ್ಲಿ ನಡೆದ 2017 ಜನವರಿ 31 ರಿಂದ ಮೂರು ದಿನಗಳ ಕಾಲ ನಡೆದ ಅನಿರ್ದಿಷ್ಟಾವಧಿ ಹೋರಾಟ ಮತ್ತು ಸೆಪ್ಟೆಂಬರ್ 14 ರಂದು ನಡೆದ **"ನಮ್ಮ ಮಹಾ ನಡೆ ಬೆಂಗಳೂರಿನೆಡೆಗೆ"** ಸಾರ್ವತ್ರಿಕ ಮುಷ್ಕರ ಹೋರಾಟಗಳಲ್ಲಿ ಹಮಾಲಿ ಕಾರ್ಮಿಕರ ಪ್ರಮುಖ ಪ್ರಶ್ನೆಗಳಾಧಾರದಲ್ಲಿ ರಾಜ್ಯಾದ್ಯಂತ ಪ್ರಚಾರ ಕೈಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಹಮಾಲಿ ಕಾರ್ಮಿಕರನ್ನು ಭಾಗವಹಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. 2017 ಜುಲೈ ತಿಂಗಳು, 2018 ಜೂನ್ ತಿಂಗಳಲ್ಲಿ ಮತ್ತು 2019 ಜುಲೈ ತಿಂಗಳಲ್ಲಿ ಕೂಲಿ ಪರಿಷ್ಕರಣೆ ಸೇರಿದಂತೆ ಸ್ಥಳೀಯ ಸಮಸ್ಯೆಗಳು ಹಾಗೂ ವಸತಿ, ಭವಿಷ್ಯನಿಧಿ ಯೋಜನೆ ಮುಂತಾದ ನೆನೆಗುದಿಗೆ ಬಿದ್ದಿರುವ ಬೇಡಿಕೆಗಳಿಗಾಗಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಹೋರಾಟಗಳು ನಡೆದಿವೆ.

2017 ನವೆಂಬರ್ 21 ರಂದು ಬೆಳಗಾವಿ ಸುವರ್ಣಸೌಧ ಚಲೋ ಹೋರಾಟ ಯಶಸ್ವಿಯಾಗಿ ನಡೆದಿದೆ. ಇದರ ಪರಿಣಾಮವಾಗಿ ರಾಜ್ಯ ಬಜೆಟ್‌ನಲ್ಲಿ ಅಸಂಘಟಿತ ಕಾರ್ಮಿಕರಿಗೆ ಅಂಬೇಡ್ಕರ ಸಹಾಯ ಹಸ್ತ ಸ್ಮಾರ್ಟಕಾರ್ಡ್ ಮತ್ತು ಎಪಿಎಂಸಿ ಹಮಾಲಿ ಕಾರ್ಮಿಕರಿಗೆ 1000 ಮನೆಗಳನ್ನು ಘೋಷಿಸಲಾಗಿತ್ತು. ನಂತರದಲ್ಲಿ ವಸತಿ ಯೋಜನೆ, ಸ್ಮಾರ್ಟ ಕಾರ್ಡ, ಭವಿಷ್ಯ ನಿಧಿ ಯೋಜನೆಗಳ ಜಾರಿಗಾಗಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗಿತ್ತು. ರಾಜ್ಯದ ಎಪಿಎಂಸಿಗಳಲ್ಲಿ ಲಭ್ಯವಿರುವ ಜಾಗಗಳನ್ನು ಗುರುತಿಸಿ ಎಲ್ಲಾ ಲೈಸೆನ್ಸ ಪಡೆದ ವಸತಿರಹಿತ ಹಮಾಲಿ ಕಾರ್ಮಿಕರಿಗೆ ಉಚಿತ ವಸತಿ ಕಲ್ಪಿಸುವ ಯೋಜನೆಯನ್ನು ರೂಪಿಸಿ ಸರಕಾರಕ್ಕೆ ನೀಡಲಾಗಿದ್ದು ಅಗತ್ಯ ಹಣಕಾಸು ನೀಡಲು ಸರಕಾರ ಮನಸ್ಸು ಮಾಡುತ್ತಿಲ್ಲ. ಸ್ಮಾರ್ಟಕಾರ್ಡಗಳು ಬಹಳ ವಿಳಂಬವಾದರೂ ಈಗ ಅವುಗಳನ್ನು ವಿತರಿಸಲಾಗುತ್ತಿದೆ.

ವೇತನಕ್ಕಾಗಿ ಗ್ರಾಮಪಂಚಾಯಿತಿ ನೌಕರರ ಹೋರಾಟ

ಗ್ರಾಮ ಪಂಚಾಯಿತಿ ನೌಕರರ ಸಂಬಳಕ್ಕಾಗಿ ಸರ್ಕಾರ ಅನುಧಾನ ನೀಡಬೇಕೆಂದು 2017 ಮಾರ್ಚ್ 6 ರಿಂದ 29 ರವರೆಗೆ 24 ದಿವಸಗಳು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಹಗಲು ರಾತ್ರಿ ಅನಿರ್ದಿಷ್ಟ ಧರಣಿ ನಡೆಸಲಾಯಿತು. ಸಂಬಳದ ಅನುಧಾನಕ್ಕೆ ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಿ 2017 ಜೂನ್ 12ಕ್ಕೆ ಬೆಂಗಳೂರಿನಲ್ಲಿ ಅನಿರ್ದಿಷ್ಟ ಹೋರಾಟಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತೀವ್ರವಾದ ತಯಾರಿಯನ್ನು ಗಮನಿಸಿದ ಸರ್ಕಾರ ಈ ಹೋರಾಟಕ್ಕೆ ಅವಕಾಶವನ್ನು ನೀಡದೆ ಮುಂಚಿತವಾಗಿ ಮಾತುಕತೆಗೆ ಕರೆದು ಬೇಡಿಕೆ ಇಡೇರಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 19.7.2017ರಂದು ಮಾತುಕತೆ ಏರ್ಪಡಿಸಿ ಸಂಘದ ಮುಖಂಡರು, ಗ್ರಾಮೀಣಾಭಿವೃದ್ಧಿ ಸಚಿವರು, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಅಧಿಕಾರಿಗಳು ಭಾಗವಹಿಸಿ ಎಲ್ಲಾ ಸಿಬ್ಬಂದಿಗೆ ವೇತನಕ್ಕಾಗಿ ಅನುಧಾನ ನೀಡಲು ಒಪ್ಪಿಗೆ ನೀಡಿದರು.

ಸರ್ಕಾರ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ EFMS ಮುಖಾಂತರ ವೇತನ ನೀಡಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಸಿಬ್ಬಂದಿಗಳ ವಿವರ, ಬ್ಯಾಂಕ್ ಖಾತೆ ಸಿಬ್ಬಂದಿಗಳಿಗೆ ಬೇಕಾಗುವ ಹಣ ಇತ್ಯಾದಿ ವಿವರಗಳನ್ನು ಪಡೆದ ಮೇಲೆ ನೌಕರರ ಸಂಘದ ಐಕ್ಯತೆಯನ್ನು ಮುರಿಯುವ ಪ್ರಯತ್ನ ಮಾಡಿ ಜಿಲ್ಲಾ ಪಂಚಾಯತ್‌ನಲ್ಲಿ ಅನುಮೋದನೆಯಾಗಿರುವ ನೌಕರರಿಗೆ ಮಾತ್ರ ಸರ್ಕಾರದಿಂದ ವೇತನ ನೀಡುತ್ತೇವೆ. ಅನುಮೋದನೆ ಆಗದ ನೌಕರರಿಗೆ ಗ್ರಾಮ ಪಂಚಾಯಿತಿ ನಿಧಿಯಿಂದ ವೇತನ ಪಡೆಯುವುದು ಎಂದು ಸರ್ಕಾರ ಸುತ್ತೋಲೆ ಕಳಿಸಿತು. ತಕ್ಷಣವೇ ಸಂಘವು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಂದೆ ಅನಿರ್ದಿಷ್ಟಹೋರಾಟವನ್ನು ಅಮ್ಮಿಕೊಂಡು ಗ್ರಾಮ ಪಂಚಾಯಿತಿಯ ಎಲ್ಲಾ ನೌಕರರಿಗೂ EFMS ಮುಖಾಂತರ ವೇತನ ನೀಡಬೇಕು ಎಂಬ ಹೋರಾಟವನ್ನು ಜಿಲ್ಲೆಗಳಲ್ಲಿ ಮುಗಿಸಿ ರಾಜ್ಯಕೇಂದ್ರದಲ್ಲಿ ಅನಿರ್ದಿಷ್ಟ ಧರಣಿಯನ್ನು ಹಮ್ಮಿಕೊಳ್ಳಲಾಯಿತು. ಈ ಹೋರಾಟಕ್ಕೆ ಸ್ಪಂದಿಸಿದ ಸರ್ಕಾರ ಒಪ್ಪಿ ಎಲ್ಲಾ ನೌಕರರಿಗೂ EFMS ಮುಖಾಂತರ ವೇತನ ಕೊಡುವುದಾಗಿ ಒಪ್ಪಿಗೆ ನೀಡಿತು.

ಬಿಸಿಯೂಟ ನೌಕರರ ಪ್ರಮುಖ ಹೋರಾಟಗಳು

ಸೆಪ್ಟಂಬರ್ 14 ರಂದು ಇಡೀ ರಾಜ್ಯದಲ್ಲಿ ಬಿಸಿಯೂಟ ನೌಕರರು ತಮ್ಮ ಕೆಲಸ ಸ್ಥಗಿತಗೊಳಿಸಿ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಈ ಹೋರಾಟದ ಭಾಗವಾಗಿ ಅಜಯ ಸೇಠ್, ಮಾನ್ಯ ಆಯುಕ್ತರಾದ ಸೌಜನ್ಯರವರ ಜೊತೆ ಮಾತುಕತೆ ನಡೆಸಲಾಗಿದೆ. ಈ ಸಭೆಯಲ್ಲಿ ಪೆನ್ಷನ್, ವೇತನ ಹೆಚ್ಚಳ, S.D.M.C. ಕಿರುಕುಳ, ಗ್ಯಾಸ್ ವಿತರಣೆಯು ಸೂಕ್ತವಾದ ರೀತಿಯಲ್ಲಿ ಆಗದ ಕಾರಣ ಗಂಭೀರವಾಗಿ ಚರ್ಚಿಸಿ ಇದಕ್ಕೆ ಸೂಕ್ತ ಪರಿಹಾರ ಪಡೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಹೋರಾಟದ ಸ್ಥಳಕ್ಕೆ ರಾತ್ರಿ 9 ಗಂಟೆಗೆ ಮಾನ್ಯ ಶಿಕ್ಷಣ ಸಚಿವರಾದ ತನ್ವೀರ್‌ಸೇಠ್ ಆಗಮಿಸಿ ಹೋರಾಟ ವಾಪಸ್ಸು ಪಡೆದುಕೊಳ್ಳಲು ಮನವಿ ಮಾಡಿದರು. ನಿಮ್ಮ ಹೋರಾಟದ ಶಕ್ತಿಯಿಂದ ಹಲವಾರು ಸಮಸ್ಯೆಯನ್ನು ಬಗೆಹರಿಸಲಾಗಿದೆ. ಹಾಗೂ ಹೋರಾಟದ ನಂತರ ವೇತನ 500ರೂ ಹೆಚ್ಚಳ ಮಾಡಲಾಗಿದೆ.

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಪ್ರತಿಭಟನೆ:

ಸಾರ್ವಜನಿಕ ಉದ್ದಿಮೆಗಳ ಶೇರು ಮಾರಾಟ ಹಾಗು ಖಾಸಗೀಕರಣದ ನೀತಿಗಳ ವಿರುದ್ಧ ದಿನಾಂಕ 28 ಜನವರಿ 2017ರಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆಯೊಂದನ್ನು ನಡೆಸಲಾಯಿತು. ಮರುದಿನ ಜನವರಿ 29 ರಂದು ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಸಿಪಿಎಸ್‌ಟಿಯು ಈ ಸಭೆಯನ್ನು ನಡೆಸಲಾಯಿತು

ಸಾರ್ವಜನಿಕ ಉಧ್ಯಮಗಳ ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶ:

ಕೇಂದ್ರ ಸಾರ್ವಜನಿಕ ಉದ್ದಿಮೆಗಳಾದ ಬಿಎಸ್‌ಎನ್‌ಎಲ್, ಬಿಇಎಂಎಲ್, ಬಿಇಎಲ್, ಬಿಐಎಸ್‌ಎಲ್ ಮುಂತಾದ ಹಲವು ಉದ್ದಿಮೆಗಳಲ್ಲಿ ಧೀರ್ಘಕಾಲ ಸೇವೆ ಸಲ್ಲಿಸಿರುವ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿ, ತರಬೇತಿ ಕಾರ್ಮಿಕರನ್ನು ನೇಮಕ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಸಂಧರ್ಭದಲ್ಲಿ ಮಧ್ಯಪ್ರವೇಶ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಭಾವಿ ಚಳುವಳಿಯೊಂದನ್ನು ಕಟ್ಟಲು ಗುತ್ತಿಗೆ ಕಾರ್ಮಿಕರ ಮುಖಂಡರುಗಳ ಸಭೆಯೊಂದನ್ನು ದಿನಾಂಕ 22.05.2019ರಂದು ನಡೆಸಲಾಯಿತು. ಜೂನ್ 23 ರಂದು ಸಾರ್ವಜನಿಕ ಉದ್ಯಮಗಳ ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶವನ್ನು ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್ ಸಹಕಾರದೊಂದಿಗೆ ಸಂಘಟಿಸಲಾಯಿತು. ಇದಾದ ಬಳಿಕ 2019 ಜುಲೈ 1, ರಿಂದ ಜುಲೈ 31ರವರೆಗೆ ಸಹಿ ಸಂಗ್ರಹ ಹಾಗೂ ದ್ವಾರ ಸಭೆ, ಬೀದಿಬದಿ ಸಭೆಗಳನ್ನು ಸಂಘಟಿಸಲಾಯಿತು.

ಬೀಡಿ ಕಾರ್ಮಿಕರ ಕನಿಷ್ಠ ವೇತನದ ಕುರಿತು ಒಪ್ಪಂದ:

ಬೀಡಿ ಕಾರ್ಮಿಕರ ಕನಿಷ್ಠ ವೇತನ ನಿಗದಿ ಪಡಿಸಲು ಸಲುವಾಗಿ ಕಾಯ್ದೆಯ ಸೆಕ್ಷನ್ 5(1) ಎ ಅಡಿಯಲ್ಲಿ ನೇಮಕವಾದ ತ್ರಿಪಕ್ಷೀಯ ಸಮಿತಿಯಲ್ಲಿ ಒಂದು ಸಾವಿರ ಬೀಡಿಗಳಿಗೆ ಪ್ರತಿ ದಿನಕ್ಕೆ ರೂ. 210/– ವೇತನ ನಿಗದಿ ಪಡಿಸಲು ಶಿಫಾರಸ್ಸು ಮಾಡುವ ಒಪ್ಪಂದಕ್ಕೆ ಬರಲಾಗಿತ್ತು. ಹಾಗು ತುಟ್ಟಿಭತ್ಯೆ ಗ್ರಾಹಕ ಬೆಲೆ ಸೂಚ್ಯಾಂಕದ ಪ್ರತಿ ಅಂಶಕ್ಕೆ ಪ್ರತಿ ದಿನಕ್ಕೆ 4 ಪೈಸೆಯಂತೆ ನಿಗದಿಪಡಿಸಲು ಶಿಫಾರಸ್ಸು ಮಾಡಲು ತೀರ್ಮಾನಿಸಲಾಗಿತ್ತು. ಈ ಬಗ್ಗೆ ಚರ್ಚಿಸಿ ಮುಂದಿನ ದಿನಗಳಲ್ಲಿ ನಮ್ಮ ಬೇಡಿಕೆ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬೀಡಿ ಫೇಡರೇಷನ್ ಸಭೆಯನ್ನು ಕೂಡಲೇ ಸೇರಿಸಲು ಸಭೆ ಸೇರಿಸಿ ಮಧ್ಯ ಪ್ರವೇಶಿಸಿ ನಮ್ಮ ಬೇಡಿಕೆಯನ್ನು ಪುನರುಜ್ಜೀಸಲಾಗಿದೆ. ಮತ್ತು ಈ ಬಗ್ಗೆ ಹೋರಾಟಗಳನ್ನು ಸಂಘಟಿಸಲಾಗಿದೆ.



ಸಿಐಟಿಯು ಹಾಸನ ಜಿಲ್ಲಾಧ್ಯಕ್ಷರಾಗಿ ಧರ್ಮೇಶ್ ಪುನರಾಯ್ಕೆ

ಪ್ರಧಾನ ಕಾರ್ಯದರ್ಶಿಯಾಗಿ ಎಂ.ಬಿ. ಪುಷ್ಪ ಮತ್ತು ಖಜಾಂಚಿಯಾಗಿ ಜಿ.ಪಿ. ಸತ್ಯನಾರಾಯಣ ಆಯ್ಕೆ

ಉದ್ಯೋಗ, ಉದ್ದಿಮೆಗಳ ಖಾಸಗೀಕರಣ, ನಿರುದ್ಯೋಗ, ಕಾರ್ಮಿಕ ಕಾನೂನುಗಳ ಬದಲಾವಣೆ ವಿರೋಧಿಸಿ, ಕಾರ್ಮಿಕರಿಗೆ ತಿಂಗಳಿಗೆ ರೂ 25 ಸಾವಿರ ಕನಿಷ್ಟ ವೇತನ ಹಾಗೂ ಕೆಲಸ ಮತ್ತು ಸಾಮಾಜಿಕ ಭದ್ರತೆಗಾಗಿ ಹಾಗೂ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ, ಜಾತ್ಯಾತೀತ ಪ್ರಜಾಪ್ರಭುತ್ವದ ಉಳಿವಿಗಾಗಿ ಆಗ್ರಹಿಸಿ ಸಿಐಟಿಯುನ 5ನೇ ಹಾಸನ ಜಿಲ್ಲಾ ಸಮ್ಮೇಳನವು ಹಾಸನ ನಗರದ ಶ್ರೀ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಅಕ್ಟೋಬರ್ 19 ಮತ್ತು 20ರಂದು ಎರಡು ದಿನಗಳ ಕಾಲ ನಡೆಯಿತು. ಈ ಎರಡು ದಿನಗಳ ಕಾಲ ಜಿಲ್ಲೆಯ ಎಲ್ಲಾ ತಾಲೂಕು ಮತ್ತು ಕಾರ್ಮಿಕ ಸಂಘಗಳಿಂದ ಆಯ್ಕೆಯಾಗಿದ್ದ 150 ಪ್ರತಿನಿಧಿಗಳು ಭಾಗವಹಿಸಿ ಪ್ರಸ್ತುತ ಕಾರ್ಮಿಕರ ಸಮಸ್ಯೆಗಳು ಮತ್ತು ಜಿಲ್ಲೆಯ ಸಮಸ್ಯೆಗಳ ಬಗ್ಗೆ ಚರ್ಚಿಸಿ ಹಲವಾರು ನಿರ್ಣಯಗಳನ್ನು ತೆಗೆದುಕೊಂಡರು. ಇಂದಿನ ಅಗತ್ಯಕ್ಕನುಗುಣವಾಗಿ ಜಿಲ್ಲೆಯಾದ್ಯಂತ ಎಲ್ಲಾ ಕಾರ್ಮಿಕ ಮತ್ತು ನೌಕರ ವಿಭಾಗದಲ್ಲಿ ಸಿಐಟಿಯು ಸಂಘಟನೆಯನ್ನು ವಿಸ್ತರಿಸಲು ತೀರ್ಮಾನಿಸಲಾಯಿತು. ನಂತರದಲ್ಲಿ ಸಿಐಟಿಯು ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾಗಿ ಧರ್ಮೇಶ್ ಪುನರಾಯ್ಕೆಯಾದರು. ಪ್ರಧಾನ ಕಾರ್ಯದರ್ಶಿಯಾಗಿ ಎಂ.ಬಿ. ಪುಷ್ಪ ಮತ್ತು ಖಜಾಂಚಿಯಾಗಿ ಜಿ.ಪಿ. ಸತ್ಯನಾರಾಯಣ ಆಯ್ಕೆಯಾದರು. ಜಿಲ್ಲಾ ಸಮಿತಿಯ ಉಪಾಧ್ಯಕ್ಷರುಗಳಾಗಿ ಇಂದ್ರಮ್ಮ, ಎಚ್.ಎಸ್.



ಮಂಜುನಾಥ್, ಬೋಜ ಪೂಜಾರಿ, ಕರಿಯಪ್ಪ, ಕೆ.ಟಿ. ಹೊನ್ನೇಗೌಡ, ಕೆ.ಪಿ. ವೀಣಾ, ಪ್ರಕಾಶ್ ಮತ್ತು ಶಾರದ ಆಯ್ಕೆಯಾದರು. ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾಗಿ ಅರವಿಂದ್, ಅಶೋಕ್ ಅತ್ನಿ, ಸೌಮ್ಯ, ಕೆ. ಕುಮಾರಸ್ವಾಮಿ, ಕಾಮಾಕ್ಷಿರಾಜು, ಟಿ. ರಮೇಶ್, ಶೈಲಜಾ, ಜಯಂತಿ, ಉಷಾ, ಕಲಾ ಮತ್ತು ಎನ್.ಬಿ. ಸುಶೀಲ ಆಯ್ಕೆಯಾದರು. ಜಿಲ್ಲಾ ಸಮಿತಿಯ ಗೌರವಾಧ್ಯಕ್ಷರಾಗಿ ಹಿರಿಯ ಕಾರ್ಮಿಕ ನಾಯಕ ವಿ. ಸುಕುಮಾರ್‌ರವರನ್ನು ಮುಂದುವರಿಸಲಾಯಿತು. ಜೊತೆಗೆ 50 ಜನರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಭಾರತದ ಕಾರ್ಮಿಕ ಚಳುವಳಿಗೆ 100 ವರ್ಷ ಹಾಗೂ ಸಿಐಟಿಯುಗೆ 50 ವರ್ಷಗಳಾಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಕಾರ್ಮಿಕ ಚಳುವಳಿಯ ಇತಿಹಾಸದ ಕುರಿತು ಕಾರ್ಯಕ್ರಮ ಸಂಘಟಿಸಿ ಕಾರ್ಮಿಕ ಸಂಘಗಳ ಕಾರ್ಯಕರ್ತರಿಗೆ ಸೈದ್ಧಾಂತಿಕ ತರಬೇತಿ ನೀಡುವ ತೀರ್ಮಾನ ಕೈಗೊಳ್ಳಲಾಯಿತು.

ನಿರುದ್ಯೋಗ, ಕಾರ್ಮಿಕ ಕಾನೂನುಗಳ ಬದಲಾವಣೆ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಆರ್ಥಿಕ ದಿವಾಳಿತನ ಹಾಗೂ ದೇಶದ ಜಾತ್ಯಾತೀಯ ಪ್ರಜಾಪ್ರಭುತ್ವ ಹಾಗೂ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಮೋದಿ ಸರ್ಕಾರ ನಡೆಸುತ್ತಿರುವ ದಾಳಿಯ ವಿರುದ್ಧ ಅಖಿಲ ಭಾರತ ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಜನವರಿ 8ರ ಭಾರತ ಬಂದ್ ಕರೆಯನ್ನು ಜಿಲ್ಲೆಯಲ್ಲಿ ಸಂಪೂರ್ಣ ಯಶಸ್ವಿಗೊಳಿಸಲು ನಿರ್ಣಯಿಸಲಾಯಿತು. ಗುತ್ತಿಗೆ ಕಾರ್ಮಿಕರ ಪದ್ಧತಿ ವಿರುದ್ಧ, ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ, ಕೋಮುವಾದ ಮತ್ತು ಮಹಿಳಾ ದೌರ್ಜನ್ಯದ ವಿರುದ್ಧ, ವಸತಿ ಮತ್ತು ನಿವೇಶ ರಹಿತರ ಪರವಾಗಿ ಹೋರಾಟ ಸಂಘಟಿಸುವ ಹಾಗೂ ಜಿಲ್ಲೆಯ ಕಾರ್ಮಿಕರ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸುವ ಕುರಿತು ಹಲವಾರು ಪ್ರಮುಖ ನಿರ್ಣಯಗಳನ್ನು ಜಿಲ್ಲಾ ಸಮ್ಮೇಳನವು ಕೈಗೊಂಡಿತು. ಇದೇ ಸಂದರ್ಭದಲ್ಲಿ ತುಮಕೂರಿನಲ್ಲಿ ನವೆಂಬರ್ 8 ರಿಂದ 10ರವರೆಗೆ ನಡೆಯುತ್ತಿರುವ ಸಿಐಟಿಯು 14ನೇ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

– ಅರವಿಂದ್



ಮಾಜಿ ಲೋಕಾಯುಕ್ತ ಎನ್. ವೆಂಕಟಾಚಲ ನಿಧನ

ಮಾಜಿ ಲೋಕಾಯುಕ್ತ ಎನ್. ವೆಂಕಟಾಚಲ ಅಕ್ಟೋಬರ್ 30 ರಂದು ಬೆಂಗಳೂರಿನಲ್ಲಿನ ಖಾಸಗಿ ಆಸ್ಪತ್ರೆ ಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಇವರಿಗೆ 90 ವರ್ಷ ವಯಸ್ಸಾಗಿತ್ತು. ಕರ್ನಾಟಕದ ಆಡಳಿತದಲ್ಲಿ, ಆಸ್ಪತ್ರೆಗಳಲ್ಲಿ, ಕಛೇರಿಗಳಲ್ಲಿ ನಡೆಯುವ, ಒಟ್ಟಾರೆಯಾಗಿ ಭ್ರಷ್ಟಾಚಾರವನ್ನು ನಿಗ್ರಹಿಸುವುದರಲ್ಲಿ ದಕ್ಷತೆಯಿಂದ ದುಡಿದ ಲೋಕಾಯುಕ್ತ ಎಂದು ಹೆಸರು ಮಾಡಿದ್ದರು.

ಕಮ್ಯುನಿಸ್ಟ್ ವಿಚಾರಗಳ, ಚಳುವಳಿಯ ಪ್ರಸಾರ 1921–24

ಪುಟ 8 ರಿಂದ

ಬಹಿರಂಗ ಪತ್ರ'(1921)ದಲ್ಲಿ "ಕಮ್ಯುನಿಸಂ, ಅಂದರೆ ದೇಶದ ಎಲ್ಲಾ ದುಡಿಯುವ ಜನರ ಸಾಮಾನ್ಯ ಬಳಕೆಗಾಗಿ ಮತ್ತು ಪ್ರಯೋಜನಕ್ಕಾಗಿ ಭೂಮಿ ಮತ್ತು ಪ್ರಮುಖ ಕೈಗಾರಿಕೆಗಳನ್ನು ಹೊಂದುವಂತಾಗುವುದು, ಮಾತ್ರವೇ ನಮ್ಮ ಜನರಿಗೆ ಸಂತುಷ್ಟಿಯ ಹಾಗೂ ಸ್ವಾತಂತ್ರ್ಯದ ನೈಜ ಕಾರ್ಯಕ್ರಮವಾಗುತ್ತದೆ . . . ನಾವು ರಾಜಕೀಯ ನಿರಂಕುಶಾಧಿಕಾರದ ವಿರುದ್ಧ ಅಹಿಂಸಾತ್ಮಕ ಅಸಹಕಾರವನ್ನು ಬಳಸಬಹುದಾದರೆ, ಅದನ್ನೇ ಬಂಡವಾಳಶಾಹಿ ನಿರಂಕುಶಾಧಿಕಾರದ ವಿರುದ್ಧವೂ ನಾವು ಏಕೆ ಬಳಸಬಾರದೆಂಬುದು ನನಗೆ ಅರ್ಥವಾಗುತ್ತಿಲ್ಲ? ನಾವು ಒಂದರ ವಿರುದ್ಧ ಹೋರಾಡಿ ಮತ್ತೊಂದರ ವಿರುದ್ಧ ಹೋರಾಡದೆ ಇರಲು ಸಾಧ್ಯವಿಲ್ಲ" ಎಂದು ಬರೆದರು. ರಾಜಕೀಯ ಸ್ವಾತಂತ್ರ್ಯದ ಜತೆಯಲ್ಲೇ ದುಡಿಯುವ ಜನರಿಗೆ ಆರ್ಥಿಕ ಸ್ವಾತಂತ್ರ್ಯದ ಅಗತ್ಯವೂ ಇದೆ ಎಂದು ಸುಸ್ಪಷ್ಟವಾಗಿ ವಿಶದಪಡಿಸಿದರು ಮತ್ತು ಕಾರ್ಮಿಕರು ಹಾಗೂ ರೈತರಿಗಾಗಿ ಒಂದು ಸಂಘಟನೆಯನ್ನು ಕಟ್ಟಬೇಕು ಎಂದು ಒತ್ತಾಯಿಸಿದರು. ಈ ಸಂಘಟನೆಯು, ಅವರ ಪ್ರಕಾರ, 'ಮಾಸ್ಕೋದ ಅಂತರ್ರಾಷ್ಟ್ರೀಯ ದುಡಿಯುವ ಜನರ ಸಂಘ'(ಇಂಟರ್‌ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಶಿಯೇಶನ್ ಆಫ್ ಮಾಸ್ಕೋ)ದ ಕಟ್ಟು ಕಟ್ಟಳೆಗಳನ್ನು ಅಥವಾ ನಿಯಮಾವಳಿಗಳನ್ನು' 'ಭಾರತೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತವಾದ ಬದಲಾವಣೆಗಳೊಂದಿಗೆ' ಅಳವಡಿಸಿಕೊಳ್ಳಬೇಕು. 1923ರಲ್ಲಿ, ಮೊಟ್ಟ ಮೊದಲ ಬಾರಿಗೆ ಮದ್ರಾಸಿನಲ್ಲಿ ಮೇ ದಿನಾಚರಣೆಯನ್ನು ಆಚರಿಸುವ ಮೂಲಕ ಸಿಂಗಾರವೇಲು ಅವರು ಲೇಬರ್ ಕಿಸಾನ್ ಪಕ್ಷವನ್ನು ಪ್ರಾರಂಭಿಸಿದರು.

'1922ರ ಶರತ್ಕಾಲದ ಹೊತ್ತಿಗೆ' ಈ ಕೆಳಗಿನ 'ಕಮ್ಯುನಿಸ್ಟ್ ಪ್ರಕಾಶನಗಳು' ಅಸ್ತಿತ್ವದಲ್ಲಿದ್ದವು ಎಂದು ಬ್ರಿಟಿಷ್ ಗೃಹ ಇಲಾಖೆ ಗುರುತಿಸಿತ್ತು: "**ಆತ್ಮಶಕ್ತಿ, ಧೂಮಕೇತು, ದೇಶೆರ್ ಬಾನಿ, ನವ್‌ಯುಗ್**(ಬಂಗಾಳಿಯಲ್ಲಿ), **ಸೋಶಿಯಲಿಸ್ಟ್**(ಬಾಂಬೆ), **ಲೇಬರ್ ಗೆಜೆಟ್, ನವಯುಗಂ**(ಮದ್ರಾಸ್) ಮತ್ತು **ಇಂಕ್ವಿಲಾಬ್, ಕಿರ್ತಿ**(ಪಂಜಾಬ್)." ಈ ಪ್ರಕಾಶನಗಳಲ್ಲದೇ ಅನೇಕ ಮುಖ್ಯವಾಹಿನಿಯ ಭಾರತೀಯ ಮಾಧ್ಯಮಗಳೂ 'ಕಮ್ಯುನಿಸಂನ ಪ್ರಭಾವ' ದ ಅಡಿಯಲ್ಲಿ ಇದ್ದವು ಎಂಬುದನ್ನೂ ಕೂಡ ಅವರು ಗಮನಿಸಿದ್ದರು. **ಅಮೃತ್ ಬಜಾರ್ ಪತ್ರಿಕಾ**(ಕಲ್ಕತ್ತಾ), **ಸರ್ವಂಟ್**(ಬಾಂಬೆ) ಮತ್ತು **ಬಂದೇ ಮಾತರಂ**(ಲಾಹೋರ್) ಎಂಬುದನ್ನು ನಿರ್ದಿಷ್ಟವಾಗಿ ನಮೂದಿಸಿದ್ದರು.

ದೇಶದಲ್ಲಿನ ಈ ಎಲ್ಲಾ ಹಲವಾರು ಗುಂಪುಗಳ ಮುಖಂಡರು ಹಲವಾರು ಕಾರಣಗಳಿಂದಾಗಿ ನೇರವಾಗಿ ಭೇಟಿಯಾಗಲು ಸಾಧ್ಯವಾಗದೆ ಇದ್ದಾಗಲೂ, ಪರಸ್ಪರ ಪತ್ರ ವ್ಯವಹಾರ ಇಟ್ಟುಕೊಂಡಿದ್ದರು. ಅವರ ಚಿಂತನೆಗಳು ಸಮಾನವಾಗಿದ್ದವಷ್ಟೇ ಅಲ್ಲ, ಅವರ ಚಟುವಟಿಕೆಗಳನ್ನು ಸಮನ್ವಯಗೊಳಿಸುವಲ್ಲಿ ಎಂ.ಎನ್. ರಾಯ್ ಪ್ರಮುಖ ಪಾತ್ರ ವಹಿಸಿದ್ದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಗಯಾ ಅಧಿವೇಶನದಲ್ಲಿ(1922), ಸಿಂಗಾರವೇಲು ಡಾಂಗೆಯನ್ನು ಭೇಟಿ ಮಾಡಿದರು ಮತ್ತು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸರ್ಕಾರದ ಉಪಟಳಗಳನ್ನು ಎದುರಿಸಬೇಕಾದೀತು ಮತ್ತು 'ಗೌರವಯುತ ರಾಷ್ಟ್ರೀಯವಾದ'ದಿಂದ ಬಹಿಷ್ಕೃತರಾಗಬೇಕಾದೀತು ಎಂಬ ಭೀತಿಯಿಂದ ಯುವ ಚೇತನಗಳು ಹಿಂಜರಿಯುತ್ತಿದ್ದಾಗ ಇರುವಾಗ 'ಒಬ್ಬ ಬಿಳಿ ಗಡ್ಡದ (ಅರವತ್ತು ವರ್ಷದ ಮೇಲಿನ) ಮನುಷ್ಯ ತಾನು ಕಮ್ಯುನಿಸ್ಟ್ ಎಂದು ಬಹಿರಂಗವಾಗಿ ಘೋಷಿಸಿಕೊಂಡದ್ದು' ಒಂದು ಚಾರಿತ್ರಿಕ ವಿದ್ಯಮಾನ ಎಂದು ಎಂ.ಎನ್.ರಾಯ್ ಬಣ್ಣಿಸಿದರು.


ನಿಧಾನವಾಗಿ, ಆದರೆ ಸತತವಾಗಿ ಹರಡುತ್ತಿದ್ದ ಕಮ್ಯುನಿಸ್ಟ್ ಚಳುವಳಿಯು ಬ್ರಿಟಿಷರಿಗೆ ಗಂಭೀರ ಆತಂಕವನ್ನು ಉಂಟುಮಾಡಿತು. ಗೃಹ ಇಲಾಖೆಯು ತನ್ನ ಟಿಪ್ಪಣಿಯಲ್ಲಿ "ಅದರ(ಕಮ್ಯುನಿಸ್ಟ್ ಪಕ್ಷದ) ಹಾವಳಿಯು ಭಾರತದ ಶಾಂತಿ ಮತ್ತು ಅಭಿವೃದ್ಧಿಗೆ ಸಾಕಷ್ಟು ಗಂಭೀರವಾಗಿ ಪರಿಣಮಿಸಿದ್ದು, ಅದು ಮೊದಲ ಪ್ರಮುಖ ಕಮ್ಯುನಿಸ್ಟ್ ಪಿತೂರಿ ಪ್ರಕರಣವನ್ನು ಅನಿವಾರ್ಯವಾಗಿಸಿದೆ." ಎಂದಿತು. 1923ರ ಮೇ ತಿಂಗಳಲ್ಲಿ, ಶೌಕತ್ ಉಸ್ಮಾನಿಯವರನ್ನು ಕಾನ್ಪುರದಲ್ಲಿ ಮತ್ತು ಮುಜಫ್ಫರ್ ಅಹಮದ್ ಅವರನ್ನು ಕಲ್ಕತ್ತಾದಲ್ಲಿ ಬಂಧಿಸಲಾಯಿತು. ಸ್ವಲ್ಪ ದಿನಗಳ ನಂತರ ಗುಲಾಮ್ ಹುಸೇನ್ ಅವರನ್ನು ಲಾಹೋರಿನಲ್ಲಿ ಬಂಧಿಸಿದರು. ಎಲ್ಲಾ ಮೂವರನ್ನೂ ಬೇರೆ ಬೇರೆ ಜೈಲುಗಳಲ್ಲಿ 1818ರ ನಿಬಂಧನೆ 3ರ ಅಡಿಯಲ್ಲಿ ವಿಚಾರಣೆಯಿಲ್ಲದೇ ಇಡಲಾಯಿತು. 1923ರ ಡಿಸೆಂಬರಿನಲ್ಲಿ ನಳಿನಿ ಗುಪ್ತಾ ಅವರನ್ನೂ ಬಂಧಿಸಿ ಅದೇ ನಿಬಂಧನೆ ಅಡಿಯಲ್ಲಿ ಇಡಲಾಯಿತು. ಅವರು ಯಾವುದೇ ಪಕ್ಷದ ಸದಸ್ಯರಾಗಿರಲಿಲ್ಲ, ಆದರೆ ತಾನೊಬ್ಬ ರಾಷ್ಟ್ರೀಯವಾದಿ ಕ್ರಾಂತಿಕಾರಿ ಎಂದು ಘೋಷಿಸಿಕೊಂಡಿದ್ದರು.

1924ರ ಮಾರ್ಚ್ ತಿಂಗಳಲ್ಲಿ, ಭಾರತೀಯ ದಂಡ ಸಂಹಿತೆಯ 121–ಎ ವಿಧಿಯಡಿಯಲ್ಲಿ 1) ಎಸ್.ಎ.ಡಾಂಗೆ; 2) ಶೌಕತ್ ಉಸ್ಮಾನಿ; 3) ಮುಜಫ್ಫರ್ ಅಹಮದ್; 4) ನಳಿನಿ ಗುಪ್ತಾ; 5) ಗುಲಾಮ್ ಹುಸೇನ್; 6) ಸಿಂಗಾರವೇಲು ಚೆಟ್ಟಿಯಾರ್; 7) ರಾಮಚರಣ್ ಲಾಲ್ ಶರ್ಮಾ ಮತ್ತು 8) ಮನಬೇಂದ್ರ ನಾಥ್ ರಾಯ್(ಎಂ.ಎನ್. ರಾಯ್) ಇವರುಗಳ ವಿರುದ್ಧ ಒಂದು ಆರೋಪ ಪಟ್ಟಿಯನ್ನು ಕಾನ್ಪುರದ ಜಿಲ್ಲಾ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಸಲ್ಲಿಸಲಾಯಿತು. ಮೊದಲ ನಾಲ್ಕು ಜನರನ್ನು ಮಾತ್ರ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ಅನಾರೋಗ್ಯದಿಂದ ಹಾಸಿಗೆ ಹಿಡಿದ ಕಾರಣ ಸಿಂಗಾರವೇಲು ಚೆಟ್ಟಿಯಾರ್ ಅವರನ್ನು ಹಾಜರುಪಡಿಸಲಿಲ್ಲ, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಗುಲಾಮ್ ಹುಸೇನ್ ಅವರು ಪೋಲಿಸರ ಮುಂದೆ ತಪ್ಪೊಪ್ಪಿಕೊಂಡು ದಯಾಭಿಕ್ಷೆ ಬೇಡಿದ್ದರಿಂದ ಬಿಡುಗಡೆ ಪಡೆದರು. ರಾಮಚರಣ್ ಲಾಲ್ ಶರ್ಮಾ ಅವರು ಪಾಂಡಿಚೇರಿಯಲ್ಲಿ ಫ್ರೆಂಚ್ ಸರ್ಕಾರದ ರಕ್ಷಣೆ ಬೇಡಿದ್ದರಿಂದ ಅವರನ್ನು ಬಂಧಿಸಲಾಗಲಿಲ್ಲ. ಎಂ.ಎನ್.ರಾಯ್ ಯೂರೋಪಿನಲ್ಲಿ ಇದ್ದುದರಿಂದ ಬಂಧನಕ್ಕೊಳಗಾಗಲಿಲ್ಲ. ಆದಕಾರಣ ಮುಜಫ್ಫರ್ ಅಹಮದ್, ಡಾಂಗೆ, ಶೌಕತ್ ಉಸ್ಮಾನಿ ಮತ್ತು ನಳಿನಿ ಗುಪ್ತಾ ಅವರ ಮೇಲೆ ಮಾತ್ರ ನ್ಯಾಯಾಲಯದ ಕಲಾಪಗಳು ಮುಂದುವರಿದವು. ಸರ್ಕಾರವು ಇದನ್ನು "ಕಾನ್ಪುರ ಬೋಲ್ಶೆವಿಕ್ ಪಿತೂರಿ ಪ್ರಕರಣ" ಎಂದು ಹೆಸರಿಸಿತು.

ಮುಜಫ್ಫರ್ ಅಹಮದ್ ಅವರು ತಮ್ಮ ಆತ್ಮಕತೆಯಲ್ಲಿ "ಬ್ರಿಟಿಷರ ಲೆಕ್ಕಾಚಾರಗಳು ಏನೇ ಆಗಿದ್ದಿರಬಹುದು, ನಾವು ಎಷ್ಟೇ ನರಳಿರಬಹುದು, ಆ ಕಾನ್ಪುರ ಬೋಲ್ಶೆವಿಕ್ ಪಿತೂರಿ ಪ್ರಕರಣವು ನಮ್ಮ ಚಳುವಳಿಗೆ ಸ್ಫೂರ್ತಿಯನ್ನು ಒದಗಿಸಿದೆ ಕೂಡ. ಕೆಲಮಟ್ಟಿಗೆ, 1928 ರವರೆಗಿನ ನಮ್ಮ ಚಳುವಳಿಗೆ ಸಾಕಷ್ಟು ಶಕ್ತಿಯನ್ನು ಒದಗಿಸುವಲ್ಲಿ ಅದು ಕೊಡುಗೆ ನೀಡಿದೆ." ಎಂದು ಬರೆದಿದ್ದಾರೆ.

ಪೇಶಾವರ್ ಪ್ರಕರಣದ ಸಂದರ್ಭಕ್ಕೆ ಭಿನ್ನವಾಗಿ, ಅನೇಕ ಪತ್ರಿಕೆಗಳು ಕಾನ್ಪುರ ಪ್ರಕರಣ ಕುರಿತು ವರದಿ ಮಾಡಿದವು ಮತ್ತು ಅವುಗಳಲ್ಲಿ ಕೆಲವು, ಕಮ್ಯುನಿಸ್ಟರನ್ನು ಬೆಂಬಲಿಸಿದವು ಕೂಡ. ದಬ್ಬಾಳಿಕೆಯು ಕಮ್ಯುನಿಸ್ಟ್ ಪ್ರಭಾವವನ್ನು ತಡೆಯುವಲ್ಲಿ ಸೋತಿತ್ತೆಂಬುದು ಸುಸ್ಪಷ್ಟ. 'ಕಮ್ಯುನಿಸಂ ತಳವೂರಿಬಿಟ್ಟಿದೆ' ಎಂದು ಬ್ರಿಟಿಷರು ಒಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳಬೇಕಾಯಿತು ಮತ್ತು ಕಲ್ಕತ್ತಾ ಪತ್ರಿಕೆಯ ವರದಿಯೊಂದು "ಕಮ್ಯುನಿಸಂ ವಿರುದ್ಧದ ಕಾನೂನಿನ ಭಯವನ್ನು ತೊಲಗಿಸಲಾಗಿದೆ" ಎಂದು ಉಲ್ಲೇಖಿಸಿತು.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ–'ಮಾನ'!
ನಿರಾತಂಕದಿಂದಿರುವ ಆರ್ಥಿಕ 'ಸೂಪರ್ ಪವರ್'ನ ಆಳುವ ಮಂದಿ!!



ಇತ್ತೀಚಿನ ಆರ್ಥಿಕ ಮಂದಗತಿಗೆ ಮೊದಲು, ಭಾರತವು, ಒಂದು ಆರ್ಥಿಕ ಸೂಪರ್‌ಪವರ್ ಆಗಿ ಹೊಮ್ಮಿ ಬರುತ್ತಿದ ಎಂದು ಬಿಜೆಪಿ ಸರಕಾರ ಹೇಳಿಕೊಳ್ಳುತ್ತಿತ್ತು; ಮತ್ತು ಕೆಲ ಕಾಲ, ಭಾರತದ ಜಿಡಿಪಿಯ ಬೆಳವಣಿಗೆಯ ದರವು ಚೀನಾದಕ್ಕಿಂತಲೂ ಉನ್ನತವಾಗಿದ್ದಾಗ, ವಿಶ್ವದಲ್ಲಿ ಭಾರತವೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ ಎಂದು ಎಷ್ಟು ಹೇಳಿದರೂ ಅದಕ್ಕೆ ದಣಿವಾಗುತ್ತಿರಲಿಲ್ಲ. ಆದಾಗ್ಯೂ, 2019ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ, ಈ ಸೂಪರ್‌ಪವರ್‌ನು ಸ್ಥಾನವು ಬಡ ದೇಶ ನೇಪಾಳಕ್ಕಿಂತ ಕೀಳಾಗಿದೆ. ಆದರೆ ಈ ಸರಕಾರಕ್ಕೆ ಈಬಗ್ಗೆ ಎಳ್ಳಷ್ಟೂ ಆತಂಕವಿಲ್ಲ. ಈ ವಿಚಿತ್ರ ನಿರ್ವ್ಯಾಕುಲತೆಯನ್ನು ನಾವು ವಿವರಿಸುವುದಾದರೂ ಹೇಗೆ?

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**

2019ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯು ಇತ್ತೀಚೆಗೆ ಪ್ರಕಟವಾಗಿದೆ. ಒಂದು ಅಂತಾರಾಷ್ಟ್ರೀಯ ಸಂಸ್ಥೆಯು ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಪ್ರತಿ ವರ್ಷವೂ ಅಕ್ಟೋಬರ್ ತಿಂಗಳಿನಲ್ಲಿ ಒಂದು ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯನ್ನು ಪ್ರಕಟಿಸುತ್ತದೆ. ಹಸಿವೆಯ ಸಮಸ್ಯೆ ಇಲ್ಲದಿರುವ ದೇಶಗಳು ಈ ಪಟ್ಟಿಯಲ್ಲಿ ಇರುವುದಿಲ್ಲ. ಈ ಬಾರಿ ಪಟ್ಟಿಯಲ್ಲಿರುವ 117 ದೇಶಗಳ ಪೈಕಿ ಭಾರತವು 102ನೆಯ ಕೆಳಗಿನ ಸ್ಥಾನದಲ್ಲಿರುವ ಸುದ್ದಿಯು ತಲ್ಲಣಗೊಳಿಸಬೇಕಾಗಿತ್ತು. ಆದರೆ ಅದರ ಬದಲು ಅದು ಒಂದು ಕ್ಷುಲ್ಲಕ ಚರ್ಚೆಯನ್ನು ಹುಟ್ಟಿಹಾಕಿದೆ. ವಿಡಂಬನೆಯೆಂದರೆ, ಈ ಚರ್ಚೆ ಎರಡು ವಿಷಯಗಳಿಗೆ ಸಂಬಂಧಪಟ್ಟದ್ದಾಗಿದೆ.

ಮೊದಲನೆಯದು, 2014ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ 55ನೆಯ ಸ್ಥಾನದಲ್ಲಿದ್ದ ಭಾರತವು ಗಮನ ಸೆಳೆಯುವ ರೀತಿಯಲ್ಲಿ 102ನೆಯ ಸ್ಥಾನಕ್ಕೆ ಕುಸಿದಿದೆಯೇ ಎಂಬುದು. ಎರಡನೆಯದು, ಜಾಗತಿಕ ಹಸಿವಿನ ಸೂಚ್ಯಂಕವು ಒಳಗೊಳ್ಳುವ ಅಂಶಗಳಲ್ಲಿ ಭಾರತದಲ್ಲಿ ಬದಲಾವಣೆಯ ದಿಕ್ಕು ಸರಿ ಇದೆಯೇ ಎಂಬುದು. 'ನೀತಿ ಆಯೋಗ' ಸಕ್ರಿಯವಾಗಿ ಎರಡನೇ ಚರ್ಚೆಯಲ್ಲಿ ಭಾಗವಹಿಸುತ್ತಿದೆ.

ಮೊದಲನೆಯ ವಿಷಯದ ಬಗ್ಗೆ, ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ಶ್ರೀಮಂತ ದೇಶಗಳನ್ನು ಸೇರಿಸುವುದೇ ಇಲ್ಲ, ಐದಕ್ಕಿಂತ ಕಡಿಮೆ ಅಂಕ ಗಳಿಸಿದ ದೇಶಗಳನ್ನು ಕೆಲವೊಮ್ಮೆ ಪಟ್ಟಿಯಿಂದ ಹೊರಗೆ ತೋರಿಸಲಾಗಿದೆ, ಇನ್ನು ಕೆಲವು ಬಾರಿ ಪಟ್ಟಿಯಲ್ಲಿಯೇ ಸೇರಿಸಲಾಗಿದೆ. ಇದರಿಂದಾಗಿ, ಭಾರತದ ಸ್ಥಾನ ಕುಸಿದಿದೆ ಎಂಬ ಯಾವ ಸ್ಪಷ್ಟ ತೀರ್ಮಾನಕ್ಕೂ ಬರಲಾಗದು ಎಂಬುದಾಗಿ ವಾದಿಸಲಾಗಿದೆ. ವಾಸ್ತವವಾಗಿ, 2014ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿದ್ದ 77 ದೇಶಗಳ ಪೈಕಿ ಭಾರತವು 55ನೆಯ ಸ್ಥಾನದಲ್ಲಿತ್ತು; 2015ರ 104 ದೇಶಗಳ ಪಟ್ಟಿಯಲ್ಲಿ 80ನೆಯ ಸ್ಥಾನದಲ್ಲಿತ್ತು; 2016ರ 118 ದೇಶಗಳ ಪಟ್ಟಿಯಲ್ಲಿ 97ನೆಯ ಸ್ಥಾನದಲ್ಲಿತ್ತು; 2017ರ 119 ದೇಶಗಳ ಪಟ್ಟಿಯಲ್ಲಿ 100ನೆಯ ಸ್ಥಾನದಲ್ಲಿತ್ತು; 2018ರ 119 ದೇಶಗಳ ಪಟ್ಟಿಯಲ್ಲಿ 103ನೆಯ ಸ್ಥಾನದಲ್ಲಿತ್ತು ಮತ್ತು 2019ರ 117 ದೇಶಗಳ ಪಟ್ಟಿಯಲ್ಲಿ 102ನೆಯ ಸ್ಥಾನದಲ್ಲಿದೆ. ಮತ್ತು, ಈ ಕೋಷ್ಟಕದಲ್ಲಿ ಕೊಟ್ಟಿರುವ ಶ್ರೇಣೀಕರಣ ಮತ್ತು ಅಂಕಗಳನ್ನು ಅದೇ ಅಂಶಗಳಿಗೆ ಸಂಬಂಧಿಸಿದಂತೆ ಹಿಂದಿನ ವರ್ಷದ ವರದಿಗಳೊಂದಿಗೆ ನಿಖರವಾಗಿ ಹೋಲಿಸುವಂತಿಲ್ಲ ಎಂಬುದನ್ನು ಜಾಗತಿಕ ಹಸಿವಿನ ಸೂಚ್ಯಂಕದ ವರದಿಗಳೇ ಹೇಳುತ್ತವೆ.

ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ಭಾರತದ ಸ್ಥಾನ ಯಾವುದೇ ಇರಲಿ, ಈ ಸೂಚ್ಯಂಕವು ಒಳಗೊಂಡ ನಾಲ್ಕು ಅಂಶಗಳಿಗೆ ಸಂಬಂಧಿಸಿ ನೋಡಿದಾಗ ಅವುಗಳ ಬದಲಾವಣೆಯ ದಿಕ್ಕು ಸರಿಯಾಗಿದೆ, ಅಂದರೆ, ಈ ಸೂಚ್ಯಂಕದ ನಾಲ್ಕೂ ಆಂಶಗಳಲ್ಲಿ ಭಾರತದ ಪರಿಸ್ಥಿತಿ ಕ್ರಮೇಣ ಸುಧಾರಿಸಿದೆ ಎಂಬ 'ನೀತಿ ಆಯೋಗ'ದ ವಾದವು ತಿಪ್ಪೆ ಸಾರಿಸುವ ಕೆಲಸದಂತಿದೆ. ಈ ಸೂಚ್ಯಂಕವು ಒಳಗೊಂಡ ನಾಲ್ಕು ಆಂಶಗಳು ಯಾವುವು ಎಂದರೆ: ಪೋಷಣೆಯ ಕೊರತೆ (ಅಸಮರ್ಪಕ ಕ್ಯಲೊರಿ ಆಹಾರ ಸೇವನೆ); ಕೃಶಗೊಂಡ ಶಿಶುಗಳು (ಐದು ವರ್ಷದೊಳಗಿನ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಕೃಶಗೊಂಡ ಮಕ್ಕಳು, ಅಂದರೆ, ಈ ಮಕ್ಕಳ ಶರೀರ ತೂಕವು ಅವರ ಎತ್ತರಕ್ಕೆ ಅನುಗುಣವಾಗಿಲ್ಲದಿರುವುದು); ಬೆಳವಣಿಗೆ ಕುಂಠಿತ ಶಿಶುಗಳು (ಐದು ವರ್ಷಕೆಳಗಿನ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಕಡಿಮೆ ತೂಕದ ಮಕ್ಕಳು, ಅಂದರೆ, ಈ ಮಕ್ಕಳ ಶರೀರ ತೂಕವು ಅವರ ವಯಸ್ಸಿಗೆ ಅನುಗುಣವಾಗಿಲ್ಲದಿರುವುದು); ಶಿಶು ಮರಣ (ಐದು ವರ್ಷದೊಳಗಿನ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಮರಣ ಹೊಂದುವ ಮಕ್ಕಳು). ನೀತಿ ಆಯೋಗವು ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಸಿಎನ್‌ಎನ್‌ಎಸ್ ಸರ್ವೆಯನ್ನು ಬಳಸಿಕೊಳ್ಳುತ್ತದೆ. ಆದರೆ, ಸಿಎನ್‌ಎನ್‌ಎಸ್ ಸರ್ವೆಯು ಒಂದು ನಿರ್ದಿಷ್ಟ ಸಮಯದ ಸರ್ವೆ. ಅದು ನಿಯತ ಕಾಲದಲ್ಲಿ ನಡೆಯುವ ಸರ್ವೆಯಲ್ಲ. ಈ ಸರ್ವೆಯ ವರದಿಯನ್ನು ಮತ್ತೊಂದು ಸಂಸ್ಥೆಯು ನಡೆಸಿದ ಸರ್ವೆಯೊಂದಿಗೆ ಹೋಲಿಸುವುದು ಒಂದು ಪ್ರಶ್ನಾರ್ಹ ಕ್ರಮವಾಗುತ್ತದೆ. ಹಾಗಾಗಿ, ನೀತಿ ಆಯೋಗವು ಸಿಎನ್‌ಎನ್‌ಎಸ್ ಸರ್ವೆಯನ್ನು ಮತ್ತೊಂದು ಸಂಸ್ಥೆಯು ನಡೆಸಿದ ಸರ್ವೆಯೊಂದಿಗೆ ಹೋಲಿಕೆ ಮಾಡಿ ಅದರ ಆಧಾರದ ಮೇಲೆ ಮಂಡಿಸುವ ಸಮರ್ಥನೆಗಳೂ ಸಹ ಪ್ರಶ್ನಾರ್ಹವಾಗುತ್ತವೆ.

ಅಲ್ಲದೆ, ಈ ಸರ್ವೆಗಳಲ್ಲಿ ಜಾಗತಿಕ ಹಸಿವಿನ ಸೂಚ್ಯಂಕವು ಒಳಗೊಂಡ ಬೇರೆ ಬೇರೆ ಆಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಉದಾಹರಣೆಗೆ, ಈ ಸೂಚ್ಯಂಕದ ಮೊದಲನೆಯ ಅಂಶವು ಇಡೀ ಜನಸಂಖ್ಯೆಯ ಆಹಾರ ಸೇವನೆಯ ಕ್ಯಲೊರಿ ಪ್ರಮಾಣಕ್ಕೆ ಸಂಬಂಧಿಸಿದೆ. ಆಹಾರ ಸೇವನೆಯ ಕ್ಯಲೊರಿ ಪ್ರಮಾಣವು ಕಾಲ ಕ್ರಮದಲ್ಲಿ ಎಷ್ಟು ಬದಲಾಗಿದೆ ಎಂಬುದನ್ನು ಯಾವ ಅಧಿಕೃತ ಅಂಕಿ ಅಂಶಗಳೂ ತಿಳಿಸುವುದಿಲ್ಲ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ(ಎನ್‌ಎಸ್‌ಎಸ್) ಸಂಸ್ಥೆಯು ಐದು ವರ್ಷಕ್ಕೊಮ್ಮೆ ತುಂಬ ವ್ಯವಸ್ಥಿತವಾಗಿ ಹಲವು ಸಾವಿರ ಕುಟುಂಬಗಳನ್ನು ಸಂದರ್ಶಿಸಿ ಅವರು ಸೇವಿಸುವ ಆಹಾರದ ವಿವರ ಮತ್ತು ಅವರ ಇತರ ಖರ್ಚುಗಳ ವಿವರ ಸಂಗ್ರಹಿಸಿ, ಅದರ ಆಧಾರದ ಮೇಲೆ ಆಹಾರ ಸೇವನೆಯ ಕ್ಯಲೊರಿ ಪ್ರಮಾಣವನ್ನು ನಿರ್ಧರಿಸುತ್ತಿತ್ತು. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಈ ಸರ್ವೆಗಳ ನಡುವಿನ ನಾಲ್ಕು ವರ್ಷಗಳಲ್ಲಿ ಪ್ರತಿ ವರ್ಷವೂ ಸಹ ಇದೇ ಸರ್ವೆಯನ್ನು ಒಂದು ಸಣ್ಣ ಪ್ರಮಾಣದಲ್ಲಿ ನಡೆಸುತ್ತಿತ್ತು. ಸಾಂದರ್ಭಿಕವಾಗಿ ಹೇಳುವುದಾದರೆ, ಪ್ರಪಂಚದ ಯಾವ ದೇಶವೂ ಇಷ್ಟೊಂದು ಬೃಹತ್ ಪ್ರಮಾಣದ ಸ್ಯಾಂಪಲ್ ಸರ್ವೆ ಮಾಡುತ್ತಿರಲಿಲ್ಲ. ಹಾಗಾಗಿ, ಭಾರತದ ಅರ್ಥವ್ಯವಸ್ಥೆಯ ವಿವಿಧ ಆಯಾಮಗಳ ಅಧ್ಯಯನ ನಡೆಸುವ ಸಂಶೋಧಕರಿಗೆ ದೊರೆಯುತ್ತಿದ್ದ ಅಂಕಿ ಅಂಶಗಳಿಗೆ ಈ ಸರ್ವೆಯು ಒಂದು ಮೂಲ ಆಕರವಾಗಿತ್ತು. ಆದರೆ, ಲಭ್ಯವಿರುವ ಈ ಸರ್ವೆಯ ವಿವರಗಳ ಇತ್ತೀಚಿನ ವರ್ಷವೆಂದರೆ 2011–12 ಮಾತ್ರ. ಆನಂತರದಲ್ಲಿ, ಆಹಾರ ಸೇವನೆಯ ಕ್ಯಲೊರಿ ಪ್ರಮಾಣದ ವಿವರಗಳು ಪ್ರಕಟವಾಗಿಲ್ಲ. ಬಿಜೆಪಿ ಸರ್ಕಾರದಲ್ಲಿ ಈ ಸರ್ವೆಯ ಪರಿಸ್ಥಿತಿ ಏನಾಗಿದೆ ಎಂಬುದೇ ಒಂದು ನಿಗೂಢ ಪ್ರಶ್ನೆಯಾಗಿದೆ. ನೀತಿ ಆಯೋಗಕ್ಕೆ ಹಸಿವಿನ ಸೂಚ್ಯಂಕವು ಒಳಗೊಂಡ ಆಂಶಗಳು ಸರಿಯಾದ ದಿಕ್ಕಿನಲ್ಲಿ ಬದಲಾಗಿವೆ ಎನ್ನುವ ತನ್ನ ವಾದವು ನಿಜಕ್ಕೂ ಗಂಭೀರತೆಯಿಂದ ಕೂಡಿರಬೇಕು ಎನಿಸಿದ್ದರೆ, ಅದು ಒಂದು ಅಸಮರ್ಪಕ ಸರ್ವೆಯ ಮತ್ತು ಪ್ರಶ್ನಾರ್ಹ ಹೋಲಿಕೆಯ ಮಾಹಿತಿ ಆಧರಿಸಿದ ತನ್ನ ಸಮರ್ಥನೆಯನ್ನು ಒಂದು ಸಾರಭೂತವಾದ ಸೈದ್ಧಾಂತಿಕ ಅಂಶವಾಗಿ ಮಂಡಿಸುವುದರ ಬದಲು ಅಂಕಿ ಅಂಶಗಳಿಗೆ ಒಂದು ಮೂಲ ಆಕರವಾಗಿದ್ದ ಎನ್‌ಎಸ್‌ಎಸ್ ಸಂಸ್ಥೆಯ ಸರ್ವೆಯನ್ನು ಪುನರಾರಂಭಿಸುವ ಧೈರ್ಯ ತೋರಿಸಬೇಕಿತ್ತು.

ಈ ಎಲ್ಲ ಚರ್ಚೆಗಳನ್ನು ಒತ್ತಟ್ಟಿಗಿಟ್ಟು, 2019ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯನ್ನು ಗಮನಿಸಿದರೆ, ಸರಳವಾದ ಹಾಗೂ ಗಹನವಾದ ಎರಡು ಅಂಶಗಳನ್ನು ಸ್ಪಷ್ಟವಾಗಿ ಕಾಣಬಹುದು. ಮೊದಲನೆಯದು, 2019ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ದಕ್ಷಿಣ ಏಷ್ಯಾದ ದೇಶಗಳ ಪೈಕಿ ಭಾರತವು ಅತ್ಯಂತ ಕೆಳಗಿನ ಸ್ಥಾನದಲ್ಲಿದೆ. ಎರಡನೆಯದು, 2010 ಮತ್ತು 2019ರ ನಡುವಿನ ಅವಧಿಯಲ್ಲಿ, ಭಾರತದಲ್ಲಿ ಬೆಳವಣಿಗೆ ಕುಂಠಿತ ಶಿಶುಗಳ ಸಂಖ್ಯೆಯು ಗಾಬರಿಗೊಳ್ಳುವಷ್ಟು ವ್ಯಾಪಕವಾಗಿ ಹರಡಿದೆ (ಅಂದರೆ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಕಡಿಮೆ ತೂಕದ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವ ಅಂಶವು ಪೌಷ್ಠಿಕತೆ ಅದೆಷ್ಟು ಇಳಿದಿದೆ ಎಂಬುದನ್ನು ಸೂಚಿಸುತ್ತದೆ).


ಈ ಎರಡೂ ಗಹನವಾದ ಅಂಶಗಳಿಗೂ ಅಗಾಧವಾದ ಮಹತ್ವವಿದೆ. ಶ್ರೀಲಂಕಾ ಮತ್ತು ಬಾಂಗ್ಲಾ ದೇಶದ ಮಾತಿರಲಿ, ವಿಶ್ವ ಸಂಸ್ಥೆಯು "ಅತ್ಯಲ್ಪ ಅಭಿವೃದ್ಧಿ ಹೊಂದಿದ ದೇಶಗಳು" ಎಂದು ವರ್ಗೀಕರಿಸಿದ ಪಟ್ಟಿಯಲ್ಲಿರುವ ಬಡ ದೇಶ ನೇಪಾಳದ ಸ್ಥಾನವೂ ಸಹ 2019ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ಭಾರತಕ್ಕಿಂತ ಮೇಲಿದೆ. ಅದೇ ರೀತಿಯಲ್ಲಿ, ಸದ್ಯದಲ್ಲಿ ಒಂದು ಗಂಭೀರ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವ ಪಾಕಿಸ್ತಾನದ ಸ್ಥಾನವೂ ಸಹ ಭಾರತಕ್ಕಿಂತ ಮೇಲಿದೆ. ಈ ಮೊದಲು, ಭಾರತದ ಸ್ಥಾನವು ಪಾಕಿಸ್ತಾನಕ್ಕಿಂತ ಉತ್ತಮವಾಗಿತ್ತು. ಆದರೆ, ಈಗ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ಸ್ಥಾನಗಳು ಅದಲು ಬದಲಾಗಿವೆ.

ಇತ್ತೀಚಿನ ಆರ್ಥಿಕ ಮಂದಗತಿಗೆ ಮೊದಲು, ಭಾರತವು, "ಹೊರಹೊಮ್ಮುತ್ತಿರುವ ಆರ್ಥಿಕ ಅಧಿಶಕ್ತಿ" ಎಂದು ಹೇಳಿಕೊಳ್ಳುತ್ತಿತ್ತು; ಮತ್ತು ಕೆಲ ಕಾಲ, ಭಾರತದ ಜಿಡಿಪಿಯ ಬೆಳವಣಿಗೆಯ ದರವು ಚೀನಾದಕ್ಕಿಂತಲೂ ಉನ್ನತವಾಗಿದ್ದಾಗ, ವಿಶ್ವದಲ್ಲಿ ಭಾರತವೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ (ಈ ಬೆಳವಣಿಗೆಯ ಅಂದಾಜಿನ ಸತ್ಯಾಸತ್ಯತೆ ಏನೇ ಇದ್ದರೂ) ಎಂದು ಬಿಜೆಪಿ ಸರಕಾರ ಸತತವಾಗಿ ಹೇಳುತ್ತಿತ್ತು. ಆದಾಗ್ಯೂ, 2019ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ, ಈ "ಹೊರಹೊಮ್ಮುತ್ತಿರುವ ಆರ್ಥಿಕ ಅಧಿಶಕ್ತಿ"ಯ ಸ್ಥಾನವು ಬಡ ದೇಶ ನೇಪಾಳಕ್ಕಿಂತ ಕೀಳಾಗಿದೆ.

ಆದರೆ ಈ ಸರಕಾರಕ್ಕೆ ಜನತೆಯ ಹಸಿವು ಮತ್ತು ಬಡತನ ಬಗ್ಗೆ ಏನೇನೂ ಆತಂಕ ಇದ್ದಂತಿಲ್ಲ. ಈ ವಿಚಿತ್ರ ನಿರ್ವ್ಯಾಕುಲತೆಯನ್ನು ನಾವು ವಿವರಿಸುವುದಾದರೂ ಹೇಗೆ? ನಿಜ, ಬಂಡವಾಳಶಾಹಿ ಒಂದು ತುದಿಯಲ್ಲಿ ಸಂಪತ್ತನ್ನೂ ಮತ್ತು ಇನ್ನೊಂದು ತುದಿಯಲ್ಲಿ ಬಡತನವನ್ನೂ ಸೃಷ್ಟಿಸುವ ಉತ್ಪಾದನಾ ವಿಧಾನವನ್ನು ತನ್ನೊಳಗೇ ಹೊಂದಿರುವ ವ್ಯವಸ್ಥೆ (ಕ್ಯೂಬಾ–ಒಂದು ಪುಟ್ಟ ಸಮಾಜವಾದಿ ದೇಶ 5ಕ್ಕಿಂತ ಕಡಿಮೆ ಅಂಕ ಗಳಿಸಿ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವುದರಲ್ಲಿ ಆಶ್ಚರ್ಯವೇನಿಲ್ಲ; ಭಾರತದ ಅಂಕ 30.3, ಆದ್ದರಿಂದಲೇ 102ನೆಯ ಸ್ಥಾನ). ಆದರೆ, ಬಡ ಜನರ ಪರಿಸ್ಥಿತಿಯ ಬಗ್ಗೆ ನಮ್ಮ ಆಳುವ ವ್ಯವಸ್ಥೆಯ ನಿರ್ದಯತೆಯು, ಬಂಡವಾಳಶಾಹಿಯಲ್ಲಿ ಕಾಣುವ ಈ ಕಂದರವನ್ನೂ ದಾಟಿ ಹೋಗಿದೆ. ಉದಾಹರಣೆಗೆ, ಭಾರತದಲ್ಲಿ ಅಗಾಧ ಸಂಖ್ಯೆಯ ಜನರು ಹಸಿವಿನಿಂದ ನರಳುತ್ತಿರುವ ಸಮಯದಲ್ಲೇ ಅಗಾಧ ಪ್ರಮಾಣದ ಆಹಾರ ಧಾನ್ಯಗಳ ದಾಸ್ತಾನೂ ಇತ್ತು ಮತ್ತು ಅದು ರಫ್ತೂ ಆಗುತ್ತಿತ್ತು. ಆದರೆ, ಅದೇ ಆಹಾರ ಧಾನ್ಯಗಳನ್ನು ಬಡ ಜನರ ಹಸಿವು ಇಂಗಿಸಲು ಬಳಸಿದ್ದರೆ, ಹಸಿವಿನ ತೀವ್ರತೆಯನ್ನು ಬಹಳಷ್ಟು ನಿವಾರಿಸಬಹುದಿತ್ತು. ಇದು ಆಗಲಿಲ್ಲ ಯಾಕೆ?

ಹಸಿವಿನಿಂದ ನರಳುತ್ತಿರುವ ಜನರ ನೋವಿಗೆ ಸ್ಪಂದಿಸದ ನಮ್ಮ ಆಳುವ ವ್ಯವಸ್ಥೆಯ ನಿರ್ದಯತೆಯು,

ಪುಟ 14 ಕ್ಕೆ



ಹಸಿವಿನಿಂದ ನರಳುತ್ತಿರುವ ಜನರ ನೋವಿಗೆ ಸ್ಪಂದಿಸದ ಆಳುವ ವ್ಯವಸ್ಥೆಯ ನಿರ್ದಯತೆಯು, ಕಲ್ಲೆದೆಯ ಬಂಡವಾಳಶಾಹಿಗಿಂತಲೂ ಕಠಿಣವಾಗಿರುವುದಷ್ಟೇ ಅಲ್ಲ, ಬೇರೆ ಕೆಲವು ದೇಶಗಳಲ್ಲಿ ಇರುವುದಕ್ಕಿಂತಲೂ ಹೆಚ್ಚು ಕ್ರೂರವಾಗಿದೆ. ಇಂತಹ ನಿರ್ದಯತೆಗೆ ನಿರ್ದಿಷ್ಟ ಭಾರತೀಯ ಬೇರುಗಳಿವೆ. ಜಾತಿ ಪದ್ಧತಿಯೇ ಅಂತಹ ಒಂದು ಬೇರು ಎಂಬುದು ಸ್ಪಷ್ಟವಾಗಿಯೇ ಗೋಚರಿಸುತ್ತದೆ.

ಜಾತಿವ್ಯವಸ್ಥೆಯು ಸಾಂಸ್ಥೀಕರಿಸಿದ ಅಸಮಾನತೆಯ ಮೇಲೆ ಬಂಡವಾಳಶಾಹಿ ವ್ಯವಸ್ಥೆಯು ಉಂಟುಮಾಡುವ ಅಸಮಾನತೆಯೂ ಹೇರಲ್ಪಟ್ಟಿರುವ ನಮ್ಮ ಸಾಮಾಜಿಕ ಸಂರಚನೆ ಪ್ರಪಂಚದಲ್ಲಿ ಬೇರೆಲ್ಲೂ ಕಾಣಸಿಗದಂತಹ ಒಂದು ನಿರ್ದಯತೆಯನ್ನು ಹುಟ್ಟುಹಾಕಿದೆ. ಇದು ಹಿಂದುತ್ವ ಶಕ್ತಿಗಳ ಆಳ್ವಿಕೆಯಲ್ಲಂತೂ ಸ್ಪಷ್ಟವಾಗಿ ಪ್ರಕಟಗೊಂಡಿದೆ;.....

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ವ್ಯಂಗ್ಯಚಿತ್ರ" ಕೀರ್ತಿಶ್, ಬಿಬಿಸಿ ಹಿಂದಿ ನ್ಯೂಸ್

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ–'ಮಾನ'!

ಪುಟ 13 ರಿಂದ

ಕಲ್ಲೆದೆಯ ಬಂಡವಾಳಶಾಹಿಗಿಂತಲೂ ಕಠಿಣವಾಗಿರುವುದಷ್ಟೇ ಅಲ್ಲ, ಬೇರೆ ಕೆಲವು ದೇಶಗಳಲ್ಲಿ ಇರುವುದಕ್ಕಿಂತಲೂ ಹೆಚ್ಚು ಕ್ರೂರವಾಗಿದೆ. ಇಂತಹ ನಿರ್ದಯತೆಗೆ ನಿರ್ದಿಷ್ಟ ಭಾರತೀಯ ಬೇರುಗಳಿವೆ. ಜಾತಿ ಪದ್ಧತಿಯೇ ಅಂತಹ ಒಂದು ಬೇರು ಎಂಬುದು ಸ್ಪಷ್ಟವಾಗಿಯೇ ಗೋಚರಿಸುತ್ತದೆ. ದಲಿತ ಮತ್ತು ಇತರ "ಹಿಂದುಳಿದ" ಜಾತಿಗಳನ್ನು ಮೇಲ್ಜಾತಿಗಳಿಗೆ "ಸಮಾನ"ವೆಂದೂ ಪರಿಗಣಿಸದಿದ್ದರೆ, ಆಗ ಈ ಸಾಂಸ್ಥೀಕೃತ ಅಸಮಾನತೆಯೇ ಅವರಿಗೆ ಯಾವುದೇ ಸಹಾನುಭೂತಿಯನ್ನು ತೋರಿಸದಂತೆ ಮಾಡುತ್ತದೆ. ಮತ್ತು ಅವರು ಬಹುಪಾಲು ಬಡವರೇ ಆಗಿರುತ್ತಾರೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಜಾತಿವ್ಯವಸ್ಥೆಯು ಸಾಂಸ್ಥೀಕರಿಸಿದ ಅಸಮಾನತೆಯ ಮೇಲೆ ಬಂಡವಾಳಶಾಹಿ ವ್ಯವಸ್ಥೆಯು ಉಂಟುಮಾಡುವ ಅಸಮಾನತೆಯೂ ಹೇರಲ್ಪಟ್ಟಿರುವ ನಮ್ಮ ಸಾಮಾಜಿಕ ಸಂರಚನೆ ಪ್ರಪಂಚದಲ್ಲಿ ಬೇರೆಲ್ಲೂ ಕಾಣಸಿಗದಂತಹ ಒಂದು ನಿರ್ದಯತೆಯನ್ನು ಹುಟ್ಟುಹಾಕಿದೆ. ಇದು ಹಿಂದುತ್ವ ಶಕ್ತಿಗಳ ಆಳ್ವಿಕೆಯಲ್ಲಂತೂ ಸ್ಪಷ್ಟವಾಗಿ ಪ್ರಕಟಗೊಂಡಿದೆ; ಈ ಶಕ್ತಿಗಳು ಚುನಾವಣೆಗಳಲ್ಲಿ ಕುತಂತ್ರಗಳನ್ನು ಹೆಣೆದು ದಲಿತ ಮತ್ತು ಇತರ "ಹಿಂದುಳಿದ" ಜಾತಿಗಳ ಬೆಂಬಲವನ್ನು ಗಿಟ್ಟಿಸಿಕೊಳ್ಳುತ್ತವೆ ಮತ್ತು ಅದೇ ಸಮಯದಲ್ಲಿ ಅವರ ಸ್ಥಿತಿ ಗತಿಗಳನ್ನು ಉತ್ತಮಪಡಿಸುವ ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಸರ್ಕಾರದಿಂದ ವೆಚ್ಚ ನೀಡುವ ವಿಷಯ ಬಂದಾಗ ಮಾತ್ರ ಅತಿ ಜಿಪುಣತನದಿಂದ ವರ್ತಿಸುತ್ತವೆ.

ಈ ಅಂಶವನ್ನು, ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು ಇತ್ತೀಚೆಗೆ ಕೈಗೊಂಡ ವಿತ್ತೀಯ ಕ್ರಮಗಳೇ ಒತ್ತಿ ಹೇಳುತ್ತವೆ. ಸರ್ಕಾರವು, ಶಿಕ್ಷಣವಾಗಲಿ ಅಥವಾ ಆರೋಗ್ಯ ರಕ್ಷಣೆಯಾಗಲಿ ಅಥವಾ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಕಲ್ಯಾಣ ಕಾರ್ಯಕ್ರಮಗಳ ಮೇಲಿನ ವೆಚ್ಚವನ್ನು ಹೆಚ್ಚಿಸಿದ್ದರೆ, ಅರ್ಥವ್ಯವಸ್ಥೆಯು ಉತ್ತೇಜನಗೊಳ್ಳುತ್ತಿತ್ತು ಮಾತ್ರವಲ್ಲ, ಹಸಿವು ಮತ್ತು ಬಡತನ ಸ್ವಲ್ಪ ಮಟ್ಟಿಗಾದರೂ ಶಮನಗೊಳ್ಳುತ್ತಿದ್ದವು. ಆದರೆ, ಈ ಸರ್ಕಾರ ಅದಾವುದನ್ನೂ ಮಾಡಲಿಲ್ಲ. ಬದಲಿಗೆ, 1.45 ಲಕ್ಷ ಕೋಟಿ ರೂಗಳ ಕಾರ್ಪೊರೇಟ್ ತೆರಿಗೆಗಳ ರಿಯಾಯ್ತಿಯನ್ನು, ನಿಷ್ಪ್ರಯೋಜಕವಾಗಿ, ಅತಿ ಶ್ರೀಮಂತರಿಗೆ ಒದಗಿಸಿತು!

ಬಿಜೆಪಿಯ "ಅತಿರಾಷ್ಟ್ರವಾದ" ಎಷ್ಟು ಪೊಳ್ಳು ಎನ್ನುವುದಕ್ಕೆ, ಉನ್ನತ ಜಿಡಿಪಿ ಬೆಳವಣಿಗೆಯ ಬಗ್ಗೆ ಹೆಮ್ಮೆಪಡುವ ಅದರ ಸರಕಾರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ದೇಶವು ತಳದಿಂದ ಹದಿನಾರನೆ ಸ್ಥಾನದಲ್ಲಿರುವ ಅವಮಾನಕರ ಸಂಗತಿಯ ಬಗ್ಗೆ ಎಳ್ಳಷ್ಟೂ ಚಿಂತಿಸದೇ ಇರುವುದಕ್ಕಿಂತ ದೊಡ್ಡದಾದ ಉದಾಹರಣೆ ಬೇಕಿಲ್ಲ. ಇನ್ನು ಈ ಸರ್ಕಾರದ ಉತ್ತುಂಗ ಸಲಹಾ ಸಂಸ್ಥೆಯಾದ ನೀತಿ ಆಯೋಗವಂತೂ ಹಸಿವಿನ ಸೂಚ್ಯಂಕದಲ್ಲಿ ಒಳಗೊಂಡಿರುವ ಅಂಶಗಳಿಗೆ ಸಂಬಂಧಿಸಿ ನೋಡಿದಾಗ ಅವುಗಳ ಬದಲಾವಣೆಯ ದಿಕ್ಕು ಸರಿಯಾಗಿಯೇ ಇದೆ ಎಂದು (ಅದಕ್ಕೆ ಯಾವುದೇ ಸಮರ್ಥನೆಯಿಲ್ಲ ಎಂಬುದರ ಪರಿವೆಯೇ ಇಲ್ಲದೆ) ಸಂಪೂರ್ಣ ತೃಪ್ತಿಯಿಂದ ಹೇಳಿಕೊಳ್ಳುತ್ತಿದೆ! ●

ದಶ–ಶತ ಕೋಟ್ಯಾಧಿಪತಿಗಳ ನಡುವೆ ಈ ಬಡ ಸಿಪಿಐ(ಎಂ) ಶಾಸಕ!



ಮಹಾರಾಷ್ಟ್ರ ವಿಧಾನಸಭೆಗೆ ದಹಾಣು ಕ್ಷೇತ್ರದಿಂದ ಆಯ್ಕೆಯಾಗಿರುವ ಸಿಪಿಐ(ಎಂ) ಅಭ್ಯರ್ಥಿ ವಿನೋದ್ ಭಿವ ನಿಕೊಲೆ ಈಗ ಮಾಧ್ಯಮಗಳಲ್ಲಿ ಸುದ್ದಿಯಾಗಿದ್ದಾರೆ. ಏಕೆಂದರೆ ಅವರು ಕೋಟ್ಯಾಧಿಪತಿಗಳೇ ರಾರಾಜಿಸುತ್ತಿರುವ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅತ್ಯಂತ ಬಡ ಶಾಸಕರಾಗಿದ್ದಾರೆ. ಹೊಸ ಮಹಾರಾಷ್ಟ್ರ ವಿಧಾನಸಭೆಯ ಸದಸ್ಯರ ಸರಾಸರಿ ಆಸ್ತಿ ಮೌಲ್ಯ 10.87ಕೋಟಿ ರೂ.ಗಳು. 43 ವರ್ಷದ ಕಾಂ. ವಿನೋದ್ ಅವರ ಒಟ್ಟು ಆಸ್ತಿ ರೂ.51,082! ಯಾವುದೇ ಸ್ಥಿರಾಸ್ತಿ ಅವರ ಬಳಿ ಇಲ್ಲ.

ತದ್ವಿರುದ್ಧವಾಗಿ ಅತಿ ಹೆಚ್ಚು ಆಸ್ತಿ ಹೊಂದಿರುವ ಶಾಸಕ ಮುಂಬೈಯ ಘಾಟಕೋಪರ್‌ನಿಂದ ಆರಿಸಲ್ಪಟ್ಟಿರುವ ಬಿಜೆಪಿ ಯ ಅಭ್ಯರ್ಥಿ ಪರಾಗ್ ಷಾ! ಅವರ ಆಸ್ತಿ ರೂ.500.62 ಕೋಟಿ ರೂ.. ಅಂದರೆ ವಿನೋದ್ ನಿಕೋಲೆಗಿಂತ 98ಸಾವಿರ ಪಟ್ಟು ಹೆಚ್ಚು! ಎರಡನೇ ಸ್ಥಾನದಲ್ಲಿಯೂ ಬಿಜೆಪಿ ಶಾಸಕರೇ. ಆತನ ಆಸ್ತಿ 441.65 ಕೋಟಿ, ಮೂರನೇ ಸ್ಥಾನದಲ್ಲಿರುವ ಕಾಂಗ್ರೆಸ್ ಶಾಸಕರ ಆಸ್ತಿ 245.67 ಕೋಟಿ.

ವಿನೋದ್ ನಿಕೋಲೆ ಒಂದು ಬಡ ಆದಿವಾಸಿ ಭೂಹೀನ ಕುಟುಂಬದಿಂದ ಬಂದವರು. ಹಣದ ಮುಗ್ಗಟ್ಟಿನಿಂದಾಗಿ ಬಿಕಾಂ ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟು ಬಿಡಬೇಕಾಯಿತು. 2005 ರಿಂದ ಪ್ರಖ್ಯಾತ ವಾರಲೀ ಆದಿವಾಸಿ ಹೋರಾಟದ ಈ ಪ್ರದೇಶದಲ್ಲಿ ಸಿಪಿಐ(ಎಂ)ನ ಪೂರ್ಣ ಕಾಲದ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. ಪಕ್ಷ ಕೊಡುವ 5000ರೂ. ಅಲೋಯೆನ್ಸ್ ಮತ್ತು ಶಿಕ್ಷಕಿಯಾಗಿರುವ 'ಪತ್ನಿ ಪಡೆಯುತ್ತಿರುವ ಸುಮಾರು ಅಷ್ಟೇ ಸಂಬಳವೇ ಇವರ ಒಟ್ಟು ಆದಾಯ.

ಇತ್ತೀಚಿನ ವರೆಗೆ ಡಿವೈಎಫ್ಐ ರಾಜ್ಯಸಮಿತಿಯ ಸದಸ್ಯರಾಗಿದ್ದವರು. ಈಗ ಸಿಪಿಐ(ಎಂ)ನ ಮಹಾರಾಷ್ಟ್ರ ರಾಜ್ಯಸಮಿತಿಯ ಸದಸ್ಯರಾಗಿದ್ದಾರೆ. ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿ ಮತ್ತು ಥಾಣೆ–ಪಾಲ್ಘರ್ ಜಿಲ್ಲಾ ಕಾರ್ಯದರ್ಶಿಯಾಗಿದ್ದಾರೆ. ಇತ್ತೀಚೆಗೆ ನಡೆದ ಐತಿಹಾಸಿಕ ಕಿಸಾನ್ ಲಾಂಗ್ ಮಾರ್ಚ್‌ನಲ್ಲಿ ಇವರು ಸಂಪೂರ್ಣ 200 ಕಿ.ಮೀ. ನಡೆದು ಬಂದ 40,000 ರೈತರಲ್ಲಿ ಒಬ್ಬರು.

ವಿನೋದ್ ನಿಕೋಲೆ 72068 ಮತಗಳನ್ನು ಪಡೆದರೆ, ಬಿಜೆಪಿಯಿಂದ ಶಾಸಕರಾಗಿದ್ದ ಪಾಸ್ಕಲ್ ಧನಾರೆ 67,326 ಮತಗಳನ್ನು ಪಡೆದರು.

ಐತಿಹಾಸಿಕ ವಾರಲೀ ಹೋರಾಟದ ಈ ಕ್ಷೇತ್ರದಲ್ಲಿ (ಈಹಿಂದೆ ಇದು ಜವ್ಹರ್ ಕೇತ್ರವಾಗಿತ್ತು) ಸಿಪಿಐ(ಎಂ) 1978ರಿಂದ ಎಂಟು ಬಾರಿ ಗೆದ್ದಿತ್ತು. 2014ರಲ್ಲಷ್ಟೇ ಬಿಜೆಪಿ ಇಲ್ಲಿಂದ ಗೆದ್ದಿತ್ತು.

ಪಾಲ್ಘರ್ ಜಿಲ್ಲೆಯಲ್ಲಿ ಬಿಜೆಪಿ–ಶಿವಸೇನೆಯ ವಿರುದ್ಧ ಒಂದು ಸಂಯುಕ್ತ ರಂಗ ಸಾಧ್ಯವಾದ್ದರಿಂದಾಗಿ 6ರಲ್ಲಿ ಒಂದರಲ್ಲಿ ಮಾತ್ರ ಶಿವಸೇನೆ ಗೆಲ್ಲಲು ಸಾಧ್ಯವಾಯಿತು. ಇತರ ಎರಡು ಕಡೆಗಳಲ್ಲಿ ಅದು ಸೋಲನ್ನಪ್ಪಿತು, ಬಿಜೆಪಿ ತಾನು ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಸೋತಿತು.

ಎಡ ಮತ್ತು ಜಾತ್ಯತೀತ ಪಕ್ಷಗಳು ಕಾಂಗ್ರೆಸ್–ಎನ್‌ಸಿಪಿ ಮೈತ್ರಿಕೂಟ ಮತ್ತು ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ್ ಬಹುಜನ್ ಅಘಾಡಿ(ವಿಬಿಎ)ಯೊಂದಿಗೆ ಸೀಟು ಹೊಂದಾಣಿಕೆ ಮಾಡಿಕೊಂಡಿದ್ದರೂ ದಹಾಣು ಸೇರಿದಂತೆ ಹೆಚ್ಚಿನ ಕ್ಷೇತ್ರಗಳಲ್ಲಿ ಎನ್‌ಸಿಪಿಯಾಗಲೀ, ವಿಬಿಎ ಆಗಲೀ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ. ಅದರ ಪರಿಣಾಮವಾಗಿ ಬಿಜೆಪಿ–ಶಿವಸೇನೆ ಕಡಿಮೆ ಬಹುಮತದಿಂದಾದರೂ ಗೆಲ್ಲಲು ಸಾಧ್ಯವಾಯಿತು. ●

ಟಿಪ್ಪು ಕಾಲದ 'ನರಮೇಧ': ಚರಿತ್ರೆ ಮತ್ತು ವಾಸ್ತವ......... ಪುಟ 6 ರಿಂದ

ಅರಣ್ಯದಲ್ಲಿ ನರಮೇಧಕ್ಕೆ ಒಳಗಾದ ವೀರರ ನೆನಪಿಗೆಟ್ಟಿದ್ದ "ವಾರ್ ಮೆಮೋರಿಯಲ್ ಗಳನ್ನು" ಸಿಎನ್.ಸಿ ಯ ವಿರೋಧಿಗಳು ನೆಲಕ್ಕುರುಳಿಸಿದ್ದಾರೆ ಎಂದು ಸಿಎನ್.ಸಿ ಯು ಸರ್ಕಾರಕ್ಕೆ ದೂರು ನೀಡಿತು. ಮೀಸಲು ಅರಣ್ಯದಲ್ಲಿ ಅನಧಿಕೃತ ವಾರ್ ಮೆಮೋರಿಯಲ್ ಗಳನ್ನು ಅಕ್ರಮವಾಗಿ ನೆಟ್ಟವರನ್ನು ಬಿಟ್ಟು, ಅವುಗಳನ್ನು ನೆಲಕ್ಕುರುಳಿಸಿದ ಆರೋಪಿಗಳನ್ನು ಹಿಡಿಯಲು ಜಿಲ್ಲಾಡಳಿತವು ಕ್ರಮಕೈಗೊಂಡಿರುವುದು ಅಧ್ಯಯನ ಯೋಗ್ಯವಾದುದು. ಈ ಎಲ್ಲ ವಿವರಗಳನ್ನು ಸಿಎನ್ ಸಿಯು ನರೇಂದ್ರ ಮೋದಿ ಅವರ ಸರ್ಕಾರಕ್ಕೆ, ವಿಶ್ವಸಂಸ್ಥೆಗೆ ವಿವರಿಸಿ "ಕೊಡವರ ನರಮೇಧಕ್ಕೆ ಕಾರಣನಾದ ಟಿಪ್ಪುವಿನ ಜೊತೆ ಕೈಜೋಡಿಸಿದ್ದಕ್ಕೆ ಈಗಿನ ಫ್ರೆಂಚ್ ಸರ್ಕಾರವು ಕೊಡವರ ಕ್ಷಮೆ" ಕೋರಬೇಕೆಂದು ಆಗ್ರಹಿಸಿತು. ಇವರನ್ನು ವಿರೋಧಿಸಿದವರೆಲ್ಲರೂ 'ನಕ್ಸಲರೆಂದು' ಕರೆದು ಅವರ ವಿರುದ್ಧ ತೀವ್ರವಾದ ಕ್ರಮಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಹಾಗೂ ವಿಶ್ವಸಂಸ್ಥೆಗೆ ಮನದಟ್ಟು ಮಾಡಲು ಯತ್ನಿಸಿತು.

ಸೆಕ್ಯುಲರ್ ಪಕ್ಷವೆಂದು ದಲಿತ ಹಿಂದುಳಿದವರ ಧ್ವನಿಯಾಗಿ ಗುರುತಿಸಿಕೊಂಡಿರುವ ಕಾಂಗ್ರೆಸ್ ಪಕ್ಷದಲ್ಲಿ ಕೊಡವ ಮೂಲ ಹೊಂದಿರುವ ಎ.ಐ.ಸಿ.ಸಿ.ಯ ಮಾಧ್ಯಮ ವಕ್ತಾರರೊಬ್ಬರು (ಇವರು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಕಾನೂನು ಸಲಹೆಗಾರರೂ ಆಗಿದ್ದವರು), ಕಾಂಗ್ರೆಸ್ ಪಕ್ಷದಿಂದ ವಿಧಾನಪರಿಷತ್ ಗೆ ಆಯ್ಕೆಯಾದ ಕೊಡವ ಮೂಲದ ಮಹಿಳಾ ಪ್ರತಿನಿಧಿಯೊಬ್ಬರು 2016ರಲ್ಲಿ ಸಿಎನ್ ಸಿಯ ಅಧಿಕೃತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮೂಲಭೂತವಾದಿ ಸಿಎನ್.ಸಿ ಯನ್ನು ಹರಸಿ, ಬೆಂಬಲಿಸಿದ್ದನ್ನು ನೋಡಿದರೆ ಭಾರತದ ಬಹುಮುಖ್ಯ ಸೆಕ್ಯುಲರ್ ಪಕ್ಷವೆಂದು ಕರೆದುಕೊಳ್ಳುತ್ತಿರುವ ಕಾಂಗ್ರೆಸ್ ನ ನಡವಳಿಕೆ ಬಗ್ಗೆ ಗುಮಾನಿ ಬರುತ್ತದೆ. ಕಾಂಗ್ರೆಸ್ ಪಕ್ಷದ ಉನ್ನತ ಸ್ಥಾನಗಳಲ್ಲಿರುವ ಇವರುಗಳು ತಮ್ಮದೇ ಆದ ಕಾಂಗ್ರೆಸ್ ಸರ್ಕಾರವು ಆದೇಶಿಸಿದ ಟಿಪ್ಪು ದಿನಾಚರಣೆಯನ್ನು ಅವಹೇಳನಕಾರಿ ಭಾಷೆಯಲ್ಲಿ ಗೇಲಿ ಮಾಡಿ, ಸಾಮಾಜಿಕ ಅಂತರ್ಜಾಲದಲ್ಲಿ ದ್ವೇಷ ಹರಡಿ ಜನಾಂಗೀಯವಾದವನ್ನು ಸಮರ್ಥಿಸಿಕೊಳ್ಳುತ್ತಿರುವ ಸಿಎನ್.ಸಿಯನ್ನು ಹೆಮ್ಮೆಯಿಂದ ಸಮರ್ಥಿಸಿಕೊಂಡಿರುವುದು ಕಂಡುಬಂದಿದೆ. ಹೀಗಾಗಿ ಕೊಡಗಿನಲ್ಲಿರುವ ಕಾಂಗ್ರೆಸ್ಸನ್ನು "ಕಮಲ ಕಾಂಗ್ರೆಸ್" ಎಂದು ಜನರು ಆಡಿಕೊಳ್ಳುವುದುಂಟು. ಸಮಸ್ತ ಹಿಂದುಗಳನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಜಂಬ ಕೊಚ್ಚುವ ಬಿಜೆಪಿ ನಾಯಕರು ಮೇಲ್ಜಾತಿ ಸಿಎನ್ ಸಿಯ ಮುಖವಾಣಿಯಂತೆ ವರ್ತಿಸುತ್ತಿರುವುದು ಕಂಡುಬರುತ್ತದೆ. ಹೀಗೆ ಸೆಕ್ಯುಲರ್ ಕಾಂಗ್ರೆಸ್ ಮತ್ತು ಹಿಂದುವಾದಿ ಬಿಜೆಪಿ ನಾಯಕತ್ವವು "ನರಮೇಧ ಅತ್ಯಾಚಾರಗಳೆಂಬ' ಘಟನೆಗಳನ್ನು ತಮ್ಮ ಸ್ವಾರ್ಥಕ್ಕಾಗಿ ರಾಜಕೀಯಗೊಳಿಸಿದ್ದಾರೆ. –60,000ಕ್ಕೂ ಹೆಚ್ಚಿನ ಕೊಡವರ ನರಮೇಧ ಮತ್ತು ಮಹಿಳೆಯರ ಅತ್ಯಾಚಾರ" ಎನ್ನುವ ವಿಕೃತಿಯ ಮೇಲೆ ನಡೆಯುತ್ತಿರುವ ಅನಾಗರಿಕ ಚಳವಳಿಯ ಪ್ರಲಾಪಗಳನ್ನು ಕಾಂಗ್ರೆಸ್ ನ ಸೆಕ್ಯುಲರಿಸ್ಟ್ ಗಳು, ಬಿಜೆಪಿಯ ಹಿಂದು ಲಿಬರಲ್ ಗಳು, ತೀವ್ರ ಎಡವಾದಿ ಹಾಗೂ ಎಡವಾದಿ ಸೆಕ್ಯುಲರಿಸ್ಟ್ ಗಳು ಹತಾಶೆಯಿಂದ ನೋಡುತ್ತಾ ಕೈಕಟ್ಟಿಕುಳಿತಿರುವುದನ್ನು ನೋಡಬಹುದು. ಕೇವಲ ಮತಾಂತರವನ್ನು ಮುಂದಿಟ್ಟುಕೊಂಡು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದ ಬಿಜೆಪಿ ಮುಂತಾದ ಬಲಪಂಥೀಯರು ಕೂಡ "ನರಮೇಧ, ಅತ್ಯಾಚಾರ" ಎಂಬ ಅನಾಗರಿಕ ರಾಜಕಾರಣವನ್ನು ನೋಡಿ ದಂಗಾಗಿದ್ದರೂ ಜಾಣಮೌನ ತೋರಿಸಿದ್ದಾರೆ. "ಹಿಂದೂ" ಎನ್ನುವ ಕಡೆ "ಕೊಡವ' ಎಂದು ಸಮೀಕರಣಗೊಂಡ ವಿಚಾರ ಕೂಡ ಅವರಿಗೆ ತೀವ್ರವಾದ ಗೊಂದಲವನ್ನುಂಟು ಮಾಡಿದೆ. ಕನ್ನಡ ರಾಜ್ಯೋತ್ಸವ ದಿನವನ್ನು ಕರಾಳ ದಿನವನ್ನಾಗಿ ಆಚರಿಸುವ, ಸರ್ಕಾರದ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯುಂಟು ಮಾಡಿ ಕೊಡಗಿನ ಕೆಳವರ್ಗಗಳ, ದಲಿತ ಬುಡಕಟ್ಟುಗಳ ಹಕ್ಕುಗಳನ್ನು ಬದಿಗೆ ಸರಿಸಿ, ಮೇಲ್ಜಾತಿಯೊಂದರ ಸಮಸ್ಯೆಯನ್ನೇ ಸಾರ್ವತ್ರೀಕರಣಗೊಳಿಸುವುದಕ್ಕಾಗಿ ಸಂವಿಧಾನದ ಆಶಯಗಳನ್ನು ದುರುಪಯೋಗ ಮಾಡುತ್ತಿರುವುದು ಪ್ರಜಾಸತ್ತಾತ್ಮಕ ತತ್ವಗಳಿಗೆ ತಿಲಾಂಜಲಿ ಇಟ್ಟಂತೆ. ಇಂತಹ ಪ್ರಯತ್ನಗಳಿಗೆ ಕಾಂಗ್ರೆಸ್ ನ ಕೆಲವು "ಸೆಕ್ಯುಲರ್" ರಾಜಕಾರಣಿಗಳು ಹೆಗಲು ನೀಡುತ್ತಿರುವುದು ಕಂಡುಬರುತ್ತದೆ.

1990ರ ದಶಕದಲ್ಲಿ ಕರ್ನಾಟಕ ವಿಮೋಚನೆ ಮಾಡಬೇಕೆಂದಿದ್ದ ಸಂಘಟನೆಗಳು ಕೊಡಗನ್ನು ವಿಮೋಚನೆ ಮಾಡಲು ಲಿಬರೇಷನ್ ವಾರಿಯರ್ಸ್ ಆಫ್ ಕೂರ್ಗ್ ಬೆಂಬಲಿಸಿದ್ದವು. ಆಗ ಅವರಿಗೆಲ್ಲ ಅಚ್ಚುಮೆಚ್ಚಾದ ಕರ್ನಾಟಕದ ಸಿಂಬಲ್ ಆಗಿದ್ದದ್ದು ಟಿಪ್ಪು. ಈಗ ಸಿಎನ್.ಸಿ ಯು ತೀವ್ರ ಎಡವಾದದಿಂದ ತೀವ್ರ ಬಲವಾದಕ್ಕೆ ಹೊರಳಿ ಟಿಪ್ಪುವನ್ನು ವಿಕೃತಗೊಳಿಸುತ್ತಿರುವುದನ್ನು ಇಲ್ಲಿ ಗಮನಿಸಬಹುದು. ಕೋಮುವಾದ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಹೊರಟ ಸೆಕ್ಯುಲರಿಸಂಗಳೆರಡೂ ಯುರೋಪ್ ಕೇಂದ್ರಿತ ಆಧುನಿಕ ಸಿದ್ಧಾಂತಗಳು ಎನ್ನುವ ಆಶಿಶ್ ನಂದಿಯ ವಾದವನ್ನು ಒಪ್ಪಿಕೊಂಡ ಪಕ್ಷದಲ್ಲಿ ಟಿಪ್ಪುವನ್ನು ಯಾವ ರೀತಿಯಲ್ಲಿ ಗುರುತಿಸಬೇಕು ಎನ್ನುವುದು ಚರ್ಚೆಗೆ ಬಿಟ್ಟ ವಿಚಾರ. ●

ವಿಶ್ವದಾದ್ಯಂತ ಒಂದು ಮಹಿಳಾ ತರಂಗವನ್ನು ಕಟ್ಟಲು ಕರೆ

“ಸರ್ವಾಧಿಕಾರಶಾಹಿ, ಬಲಪಂಥೀಯ ಮತ್ತು ನವ ಫ್ಯಾಸಿಸ್ಟ್ ಪಕ್ಷಗಳನ್ನು, ಆಂದೋಲನಗಳನ್ನು ಸೋಲಿಸಿ”

ಜರ್ಮನಿಯ ಎಸ್ಸೆನ್ ಎಂಬಲ್ಲಿ ಸಪ್ಟಂಬರ್ ತಿಂಗಳಲ್ಲಿ ಒಂದು ಪ್ರಗತಿಪರ ಮಹಿಳಾ ಚಳುವಳಿಗಳ ಅಂತರ್ರಾಷ್ಟ್ರೀಯ ಸಮಾಗನ ನಡೆಯಿತು. ಇದರಲ್ಲಿ ಭಾರತದಿಂದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಯ ಪ್ರಧಾನ ಕಾರ್ಯದರ್ಶಿ ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾದ ಮರಿಯಮ್ ಧವಳೆ ಭಾಗವಹಿಸಿದ್ದರು. ಈ ಬಗ್ಗೆ ‘ಪೀಪಲ್ಸ್ ಡೆಮಾಕ್ರಸಿ’ಯಲ್ಲಿ ಪ್ರಕಟವಾಗಿರುವ ಅವರ ವರದಿಯ ಸಂಗ್ರಹಾನುವಾದವನ್ನು ‘ಜನಶಕ್ತಿ’ಗಾಗಿ ನಾಗರಾಜ ನಂಜುಂಡಯ್ಯ ಇಲ್ಲಿ ಪ್ರಸ್ತುತ ಪಡಿಸಿದ್ದಾರೆ.



‘ರೋಸಾ ಲಕ್ಸೆಂಬರ್ಗ್ ಸ್ಟಿಫ್ಟುಂಗ್’ ಆಯೋಜಿಸಿದ್ದ "ಫೆಮಿನಿಸ್ಟ್ ಫ್ಯೂಚರ್ಸ್ ಫೆಸ್ಟಿವಲ್" ಕಳೆದ ತಿಂಗಳು "ಜರ್ಮನಿಯ ಎಸ್ಸೆನ್" ನಲ್ಲಿ ಯಶಸ್ವಿಯಾಗಿ ನಡೆಯಿತು. ಎಡ ಮತ್ತು ಪ್ರಗತಿಪರ ಪಕ್ಷಗಳು ಮತ್ತು ಮಹಿಳಾ ಚಳುವಳಿಯ ಕಾರ್ಯಕರ್ತರು ಆಯಾ ದೇಶಗಳಲ್ಲಿನ ಬಲಪಂಥೀಯ ಶಕ್ತಿಗಳನ್ನು ಎದುರಿಸುವಾಗ ತಾವು ನಡೆಸಿರುವ ಹೋರಾಟಗಳ ಕುರಿತಂತೆ, ತಮ್ಮ ತಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಂಡು, ಹೊಸ ಹೊಸ ಕಾರ್ಯ ತಂತ್ರಗಳನ್ನು ಅಳವಡಿಸಿ ಕೊಂಡು, ಅಂತರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಚಳುವಳಿಯನ್ನು ಬಲವರ್ಧಿತ ಗೊಳಿಸುವುದು ಹೇಗೆ ಎಂದು ಚರ್ಚಿಸಿದರು. ಮೊದಲ ಬಾರಿಗೆ ಇಂತಹ ಉತ್ಸವವನ್ನು ಆಯೋಜಿಸಲಾಗಿತ್ತು. ಉತ್ಸವದ ಭಾಗವಾಗಿ ಅನೇಕ ವಿಷಯಗಳ ಮೇಲೆ ಚರ್ಚೆಗಳು ನಡೆದವು. ಏಷ್ಯಾ, ಯುರೋಪ್, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ ಖಂಡಗಳ ಮಹಿಳಾ ಆಂದೋಲನದ ಪ್ರತಿನಿಧಿಗಳು ಉತ್ಸವದಲ್ಲಿ ಭಾಗವಹಿಸಿದ್ದರು.

ಜರ್ಮನಿಯ ಡಿ ಲಿಂಕೆ ಪಾರ್ಟಿಯ ವತಿಯಿಂದ ಈ ಉತ್ಸವದ ಭಾಗವಾಗಿಯೇ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರು ಪ್ರಪಂಚದಾದ್ಯಂತ, ವಿವಿಧ ದೇಶಗಳಲ್ಲಿ "ಲಿಂಗ ಸಮಾನತೆ"ಗಾಗಿ ಹೋರಾಡುವ ಮಹಿಳಾ ನಾಯಕಿಯರು, ಕಾರ್ಯಕರ್ತೆಯರು. ಪರಸ್ಪರ ವಿಷಯಗಳ ವಿನಿಮಯ, ಕಲಿಯುವ ಹಾಗೂ ತಿಳಿದುಕೊಳ್ಳುವ ಆಸಕ್ತಿ ವಿಚಾರ ಸಂಕಿರಣದ ಭಾಗವಾಗಿತ್ತು.

ವಿವಿಧ ಸ್ತ್ರೀವಾದಿ ವಿಷಯಗಳನ್ನು ಮಂಡಿಸಿ ಚರ್ಚಿಸಲಾಯಿತು. ವಿಚಾರ ಸಂಕಿರಣದ ಚರ್ಚೆಯಲ್ಲಿ ಯಾವುದೇ ಔಪಚಾರಿಕ ಅಥವಾ ರಚನಾತ್ಮಕ ವಿಷಯಗಳನ್ನು ಮೊದಲೆ ರೂಪಿಸಿರಲಿಲ್ಲ. ಇದೊಂದು ಮುಕ್ತ ಕಾರ್ಯಾಗಾರದ ಸ್ವರೂಪ ವಾಗಿತ್ತು. ಚರ್ಚೆಯಲ್ಲಿ ಭಾಗವಹಿಸಿದ್ದ ಬಹುತೇಕರು, ತಮ್ಮ ದೇಶದ ಎಡ ಪಕ್ಷಗಳ ಹೋರಾಟಗಳು ಮತ್ತು ಆ ಮೂಲಕ ಮಹಿಳಾ ಆಂದೋಲನದ ಮೇಲೆ ಅದರ ಪ್ರಭಾವ ಬೀರಿರುವ ಬಗೆ ಮತ್ತು ರಾಜಕೀಯ ಕಾರ್ಯಸೂಚಿಗಳನ್ನುಹೇಗೆ ನಿಗದಿಪಡಿಸುವುದು ಮತ್ತು ಮಹಿಳೆಯರ ಹಕ್ಕುಗಳನ್ನು ಹೇಗೆ ಬಲಪಡಿಸುವುದು ಎಂಬುದರ ಕುರಿತು ತಮ್ಮ ಅನುಭವಗಳು ಮತ್ತು ಒಳನೋಟಗಳನ್ನು ಪರಸ್ಪರ ಹಂಚಿ ಕೊಂಡರು. ಪ್ರಮುಖವಾಗಿ, ಎಡ ಪಕ್ಷಗಳು ಮತ್ತು ಅವುಗಳ ಚಳುವಳಿಯಲ್ಲಿ ಭಾಗವಹಿಸಿದ್ದವರು ಮಹಿಳೆಯರ ಮುಂದಿರುವ ಸ್ತ್ರೀ ಸಮಾನತೆಯ ಸವಾಲುಗಳನ್ನು ಸುದೀರ್ಘವಾಗಿ ಚರ್ಚಿಸಿದರು. ಹಾಗೆಯೇ, ಎಡ ಪಕ್ಷಗಳು ರೂಪಿಸುವ ಮಹಿಳಾ ಹಕ್ಕುಗಳ ಚಳುವಳಿಯಲ್ಲಿ, ಸಾಮಾನ್ಯವಾಗಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯವನ್ನು ಹೆಚ್ಚಿಸುವ ಮತ್ತು ಉಳಿಸಿ ಕೊಳ್ಳುವ ಹೊಸ ವಿಧಾನಗಳನ್ನು ಪರಿಶೋಧಿಸುವ ನಿಟ್ಟಿನಲ್ಲಿ ಚರ್ಚೆಗಳು, ವಿನಿಮಯಗಳು ಉತ್ತಮ ಮಟ್ಟದಲ್ಲಿ ನಡೆದವು.

ಪ್ರಪಂಚದಾದ್ಯಂತ, ಅನೇಕ ದೇಶಗಳಲ್ಲಿ, ಸರ್ವಾಧಿಕಾರಿ ಮತ್ತು ಬಲಪಂಥೀಯ ರಾಜಕೀಯ ಶಕ್ತಿಗಳು ನೆಲೆಯೂರುತ್ತಿವೆ ಮಾತ್ರವಲ್ಲದೆ, ಚುನಾವಣೆಗಳಲ್ಲಿಯೂ, ಜಯಗಳಿಸಿ ಸರ್ಕಾರಗಳನ್ನು ರಚಿಸುತ್ತಿವೆ. ಅವರ ಆಡಳಿತದಲ್ಲಿ, ಪ್ರಜಾಪ್ರಭುತ್ವ ವಿರೋಧಿ, ಮಹಿಳಾವಿರೋಧಿ ಕ್ರಮಗಳನ್ನು ಮತ್ತು ಜನಾಂಗೀಯವಾದಿ ಕಥನಗಳು ಮುನ್ನೆಲೆಗೆ ಬರುತ್ತಿವೆ. ಜೊತೆಗೆ, ಎಡ, ಅಲ್ಪಸಂಖ್ಯಾತರು ಮತ್ತು ಎಲ್.ಜಿ.ಬಿ.ಟಿ.ಕ್ಯೂ.ಐ. ಗುಂಪುಗಳ ವಿರುದ್ಧ ದ್ವೇಷವನ್ನು ಪ್ರಚೋದಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು ಪ್ರಶ್ನಿಸುವ ಮತ್ತು ಕಿತ್ತುಹಾಕುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ಅನೇಕ ದೇಶಗಳು ತಮ್ಮ ಸಂವಿಧಾನದಲ್ಲಿ ಅಥವಾ ರಾಜ್ಯನೀತಿಗಳಲ್ಲಿ ಮಹಿಳೆಯರಿಗೆ ಲಿಂಗ ಸಮಾನತೆಯ ಹಕ್ಕುಗಳನ್ನು ಪುನರುಚ್ಚರಿಸಿವೆ. ಆದಾಗ್ಯೂ, ವಾಸ್ತವವೇ ಬೇರೆ. ಮಹಿಳಾ ತಾರತಮ್ಯ ಮತ್ತು ಅಸಮಾನತೆಯು ವ್ಯಾಪಕವಾಗಿದೆ. ಜಗತ್ತಿನಾದ್ಯಂತ, ಜಗತ್ತಿನಾದ್ಯಂತ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗಿರುವುದು ವಿಚಾರ ಸಂಕಿರಣದ ಇನ್ನೊಂದು ಪ್ರಮುಖ ಕಾಳಜಿಯಾಗಿತ್ತು.

ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಪ್ರೋತ್ಸಾಹ ನೀಡಬೇಕು, ರಾಜಕೀಯಕ್ಕೆ ಮಹಿಳೆಯರ ಪ್ರವೇಶಕ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಿಂದ, ಹೆಚ್ಚಿನ ಪ್ರೋತ್ಸಾಹ ಅಗತ್ಯವಿದೆ ಎಂಬ ಒಮ್ಮತ ಮೂಡಿ ಬಂದಿತು. ಪಕ್ಷಗಳ ಸಂಘಟನೆಯಲ್ಲಿ ಕಡಿಮೆ ಪ್ರಾತಿನಿಧ್ಯವಿರುವುದು ಕಂಡು ಬಂದಿದೆ. ಇದನ್ನು ಸರಿಪಡಿಸಿಕೊಳ್ಳುವತ್ತ ಗಮನ ಹರಿಸಬೇಕು ಎಂಬುದನ್ನು ಗುರುತಿಸಲಾಯಿತು.

ಕ್ಯೂಬಾದ ಐವೆಟ್ ಲೋಪೆಜ್ ರವರು ಮಾತನಾಡುತ್ತಾ ಕ್ಯೂಬನ್ ಸರ್ಕಾರವು ನೀತಿಗಳಿಂದಾಗಿ ಅಲ್ಲಿ ಮಹಿಳೆಯರು ಸ್ವತಂತ್ರ ಮಾನವರಾಗಿ ಹೊರಹೊಮ್ಮಲು ಸಹಕಾರಿಯಾಗಿದೆ ಎಂದರು. ಸರ್ಕಾರಿ ಸಂಸ್ಥೆಗಳಲ್ಲಿ ಶೇ.50 ರಷ್ಟು ಉದ್ಯೋಗಿಗಳು ಮಹಿಳೆಯರು. ರಾಜಕೀಯ ಪಕ್ಷಗಳಲ್ಲಿ ಶೇ.45 ರಷ್ಟು ಸದಸ್ಯರು ಮಹಿಳೆಯರು ಇದ್ದಾರೆ. ಶಿಕ್ಷಕರು, ವೈದ್ಯರು, ಇಂಜಿನಿಯರುಗಳಲ್ಲಿ ಹಾಗೂ ಇತರೆ ವೃತ್ತಿಪರ ಹುದ್ದೆಗಳಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಆದಾಗ್ಯೂ, ಕ್ಯೂಬಾದಲ್ಲಿ ಸಮಾಜವಾದಿ ತತ್ವಗಳನ್ನು ಅನುಸರಿಸುತ್ತಿದ್ದರೂ ಸಹಾ, ಪಿತೃ ಪ್ರಭುತ್ವದ ಪ್ರಧಾನ ರಚನೆಗಳು ಇನ್ನೂ ಜೀವಂತಿಕೆಯಾಗಿ ಅಸ್ತಿತ್ವದಲ್ಲಿವೆ. ಚಲನಚಿತ್ರಗಳು ಮತ್ತು ಸಂಗೀತ ವೀಡಿಯೋಗಳಲ್ಲಿ ಇವುಗಳು ಪ್ರತಿಬಿಂಬಿಸುತ್ತವೆ ಎಂದು ಅವರು ವಿಷಾದ ವ್ಯಕ್ತ ಪಡಿಸಿದರು.

ವಿಯೆಟ್ನಾಂ ನ ಸಮಾಜವಾದಿ ರಾಷ್ಟ್ರವು ಮಹಿಳೆಯರನ್ನು ರಕ್ಷಿಸುವ ನೀತಿಗಳನ್ನು ಹೊಂದಿದೆ ಎಂದು ವಿಯಟ್ನಾಂ ಕಮ್ಯೂನಿಸ್ಟ್ ಪಕದ ವ್ಯಾನ್ ಹೇಳಿದರು. ಲಿಂಗ ಸಮಾನತೆಯನ್ನು ಉತ್ತೇಜಿಸಲು ಪಕ್ಷವು ಅನೇಕ ನಿರ್ಣಯಗಳನ್ನು ಕೈಗೊಂಡಿದೆ. ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಹೆಚ್ಚುತ್ತಿದೆ. ಅದಾಗ್ಯೂ, ಕುಟುಂಬ ಜವಾಬ್ದಾರಿಗಳು ಹಾಕುವ ಮಿತಿಗಳನ್ನು ನಿವಾರಿಸುವುದು ಕಷ್ಟವಾಗಿದೆ ಎಂದರು.

ಜರ್ಮನಿಯ ಪ್ರತಿನಿಧಿಗಳು, ಎಲ್ಲಾ ಚುನಾಯಿತ ಸ್ಥಾನಗಳಲ್ಲಿ ಶೇ.50 ರಷ್ಟು ಮಹಿಳೆಯರಿಗೆ ಪ್ರಾತಿನಿಧ್ಯ ಕಾಯ್ದಿರಿಸಲಾಗಿದೆಯಾದರೂ, ಮಹಿಳೆಯರನ್ನು ಪಕ್ಷದ ಕೆಲಸ ಕಾರ್ಯಗಳಿಗೆ ಹೇಗೆ ಆಕರ್ಷಿಸುವುದು ಎಂಬುದು ನಮ್ಮ ಮುಂದಿರುವ ದೊಡ್ಡ ಸವಾಲಾಗಿದೆ ಎಂದರು. ಮಹಿಳೆಯರು ಪಕ್ಷದೊಳಗಿನ ನೀತಿ ನಿರೂಪಣೆಯ ಭಾಗವಾಗಬೇಕು. ಮಹಿಳೆಯರನ್ನು ಪಕ್ಷದಲ್ಲಿ ಸಾಮಾನ್ಯವಾಗಿ ಸಹಾಯಕರನ್ನಾಗಿ ಪರಿಗಣಿಸಲಾಗುತ್ತದೆಯೇ ಹೊರತು, ನಾಯಕರನ್ನಾಗಿ ಅಲ್ಲ. ಸಾಮಾನ್ಯವಾಗಿ ಅವರಿಗೆ, ಸರ್ಕಾರದಲ್ಲಿ ಶಿಕ್ಷಣ ಮತ್ತು ಆರೋಗ್ಯ ಖಾತೆಗಳನ್ನು ನೀಡಲಾಗುತ್ತದೆ ಆದರೆ, ಪುರುಷರಿಗೆ ರಕ್ಷಣಾ ಮತ್ತು ಹಣಕಾಸು ಖಾತೆಗಳನ್ನು ನೀಡಲಾಗುತ್ತದೆ. ಯುವತಿಯರು ಪಿತೃಪ್ರಧಾನ ಪ್ರಭುತ್ವದ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ ಹಾಗೆಯೇ, ಪುರುಷರು ಮತ್ತು ಮಹಿಳೆಯರ ವೇತನದಲ್ಲಿನ ತಾರತಮ್ಯ ಅಥವಾ ಅಂತರದ ವಿರುದ್ಧ ಹೋರಾಡುತ್ತಿದ್ದಾರೆ. ಆರೈಕೆ ಕ್ಷೇತ್ರದ ಕಾರ್ಮಿಕರಲ್ಲಿ ಮಹಿಳೆಯರೇ ಹೆಚ್ಚು. ಆದ್ದರಿಂದ, ಕಾರ್ಮಿಕ ಸಂಘಗಳು ಈ ಅಂಶವನ್ನು ಗಂಭೀರವಾಗಿ ಗಮನಿಸಬೇಕಾಗುತ್ತದೆ ಎಂದರು.

ಬೆಲಾರಸ್‌ನ ಪ್ರತಿನಿಧಿ ಯಾನಿನಾ ಪಕ್ಷದ ಸದಸ್ಯತ್ವದಲ್ಲಿ ಮಹಿಳೆಯರು ಶೇ.30 ರಷ್ಟು ಇದ್ದಾರೆ ಎಂದರು. ಆದರೆ, ಮನೆವಾರ್ತೆ ಅವರನ್ನು ರಾಜಕೀಯದಲ್ಲಿ ಭಾಗವಹಿಸುವುದನ್ನು ತಡೆಯುತ್ತವೆ. ಬೆಲಾರಸ್‌ನ ಮಹಿಳೆಯರು ಸಮಾಜವಾದಿ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡಿದ್ದಾರೆ. ಸೋವಿಯತ್ ಒಕ್ಕೂಟದ ಯುಗದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳಿದ್ದವು. ಆಗ ಮಹಿಳೆಯರಿಗೆ ರಕ್ಷಣೆ ಉತ್ತಮವಾಗಿತ್ತು ಹಾಗೂ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಭಾಗವಹಿಸುವುದನ್ನು ಸರಕಾರ ಪ್ರೋತ್ಸಾಹಿಸಿತ್ತು. ಆದರೆ ಈಗ ಇವೆಲ್ಲವನ್ನೂ ಕಿತ್ತು ಹಾಕಲಾಗಿದೆ ಎಂದು ಯಾನಿನಾ ವಿಷಾದಿಸಿದರು. ಈಗ ಮಹಿಳೆಯರು 7 ಗಂಟೆಗಳ ಕೆಲಸದ ದಿನಕ್ಕಾಗಿ ಹೋರಾಡುತ್ತಿದ್ದಾರೆ.

ಪಕ್ಷದ ಮಹಿಳಾ ಸದಸ್ಯರ ಕುಟುಂಬದ ಜವಾಬ್ದಾರಿಗಳನ್ನು ಪಕ್ಷ ಗಣನೆಗೆ ತೆಗೆದುಕೊಳ್ಳಬೇಕು ಮತ್ತು ಪಿತೃಪ್ರಾಧಾನ್ಯದ ರೀತಿಯಲ್ಲಿ ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸಬೇಕು ಎಂದು ಗ್ರೀಸ್ ನ ಪ್ರೊಫೆಸರ್ ಮಾರಿಯಾ ಬಲವಾಗಿ ಪ್ರತಿಪಾದಿಸಿದರು.

ನಮೀಬಿಯಾದಲ್ಲಿ ಶೇ.46 ರಷ್ಟು ಮಹಿಳೆಯರು ಸಂಸತ್ತಿಗೆ ಆಯ್ಕೆಯಾಗಿದ್ದಾರೆ. ಆದರೂ ಸಮಾಜದ ಅಭಿವೃದ್ಧಿಯವರ ಕೊಡುಗೆಗಳನ್ನು ಗುರುತಿಸಲಾಗುತ್ತಿಲ್ಲ.

ಇಸ್ರೇಲಿನಲ್ಲಿ ವಾಸಿಸುವ ಪ್ಯಾಲೇಸ್ಟಿನಿಯನ್ ಮಹಿಳೆ ಫಿದಾ ತಮ್ಮ ಹಕ್ಕುಗಳಿಗಾಗಿ ಪ್ಯಾಲೇಸ್ಟಿನಿಯನ್‌ರು ನಡೆಸಬೇಕಾಗಿರುವ ತೀವ್ರವಾದ ಹೋರಾಟಗಳನ್ನು ವಿವರಿಸಿದರು. ನೇತನ್ಯಾಹು ಆಡಳಿತದ ದಮನಚಕ್ರದ ಮನೋವೇದಕ ಉದಾಹರಣೆಗಳನ್ನು ಮುಂದಿಟ್ಟರು. ಇದಕ್ಕೆ ಜನಗಳ ಪ್ರತಿರೋಧದ ಬಗ್ಗೆಯೂ ವಿವರಿಸಿದರು.

ಟಾಂಜಾನಿಯಾದಲ್ಲಿ ಪಕ್ಷದ ರಚನೆಗಳ ಮೂಲಕ, ಮಹಿಳೆಯರು ಸಂಚರಿಸುವುದು ಸುಲಭವಾಗಿಲ್ಲ ಎಂದು ಅಲ್ಲಿನ ಪ್ರತಿನಿಧಿ ಡೊರೊಥಿ ವರದಿ ಮಾಡಿದರು. ಮಹಿಳೆಯರು ಸಮಾನ ಪಾಲುದಾರರು ಮತ್ತು ಜವಾಬ್ದಾರಿಗಳನ್ನು ವಹಿಸುವ ಸಾಮರ್ಥ್ಯವಿರುವವರು ಎಂದು ಅರ್ಥಮಾಡಿಸುವುದು ಒಂದು ಸವಾಲಾಗಿದೆ ಎಂದರು.

ಫಿನ್ಲ್ಯಾಂಡ್ ಒಂಟಿ ತಾಯಂದಿರ ಸಮಸ್ಯೆಗಳನ್ನು ಎದುರಿಸುತ್ತಿದೆ. ಕುಟುಂಬ ಪೋಷಣೆಯ ಕೆಲಸ ಪಕ್ಷದ ಚಟುವಟಿಕೆಗಳಲ್ಲಿ, ಅವರ ಭಾಗವಹಿಸುವಿಕೆಯನ್ನು ನಿರ್ಬಂಧಿಸುತ್ತಿದೆ. ಇದರ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ ಎಂದರು.

ಮೆಕ್ಸಿಕೊ, ಸ್ಪೇನ್', ಅರ್ಜೆಂಟೀನಾ, ಪಶ್ಚಿಮ ಸಹಾರಾ, ಟರ್ಕಿಯ ಪ್ರತಿನಿಧಿಗಳು ತಂತಮ್ಮ ದೇಶಗಳಲ್ಲಿನ ಸವಾಲುಗಳ ಬಗ್ಗೆ ವಿವರಿಸಿದರು.

ಹಲವು ಸ್ತ್ರೀವಾದಿ ಚಳುವಳಿಗಳು ಶೋಷಕ ಆರ್ಥಿಕ ವ್ಯವಸ್ಥೆಯನ್ನು ಪ್ರಶ್ನಿಸುವುದಿಲ್ಲ. ಆದ್ದರಿಂದ ಸ್ತ್ರೀವಾದಿ ಚಳುವಳಿಗಳಿಗೆ ಎಡಪಂಥೀಯ ತಿರುವು ನೀಡುವ ಕಾರ್ಯತಂತ್ರಗಳನ್ನು ರೂಪಿಸಬೇಕಾಗಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾದವು.

ಭಾರತವನ್ನು ಪ್ರತಿನಿಧಿಸಿದ್ದ ಮರಿಯಮ್ ಧವಳೆ ಭಾರತದಲ್ಲಿನ ಬಲಪಂಥೀಯ ಪಲ್ಲಟ ಮತ್ತು ಅವುಗಳ ಪರಿಣಾಮಗಳ ಬಗ್ಗೆ ಮಾತಾಡಿದರು. ಆಹಾರ ಭದ್ರತೆ, ಉದ್ಯೋಗ, ಭೂ ಹಕ್ಕುಗಳು, ಮಹಿಳೆಯರ ಶಿಕ್ಷಣ, ಆರೋಗ್ಯ ಮತ್ತು ಹಿಂಸಾಚಾರದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಎ.ಐ.ಡಿ.ಡಬ್ಲ್ಯೂ.ಎ. ನಡೆಸಿದ ಹೋರಾಟಗಳನ್ನು ಮತ್ತು ಬಲಪಂಥೀಯ ಪಡೆಗಳ ವಿರುದ್ಧ ಪ್ರತಿರೋಧ ಒಡ್ಡುವಲ್ಲಿ ಸಿಪಿಐ(ಎಂ) ವಹಿಸಿರುವ ಪಾತ್ರವನ್ನು ಕೂಡಾ ಮರಿಯಮ್ ಧವಳೆಯವರು ವಿವರಿಸಿದರು.

ಸ್ತ್ರೀ ವಾದಿ ಉತ್ಸವದಲ್ಲಿ “ದ್ವೇಷದ ಧೋರಣೆಯ ವಿರುದ್ಧ ಎಡ ಪಂಥೀಯ ಮತ್ತು ಸ್ತ್ರೀವಾದಿ ಕಾರ್ಯತಂತ್ರಗಳು" ಮತ್ತು “ಮಹಿಳಾ ಚಳುವಳಿಯ ಸಮಸ್ಯೆಗಳು ಮತ್ತು ಹೋರಾಟಗಳು" ಕುರಿತಂತೆ ಎರಡು ಚರ್ಚೆಗಳನ್ನು ಡಿ ಲಿಂಕೆ ಪಾರ್ಟಿ ಏರ್ಪಡಿಸಿತ್ತು. ಭಾರತದ ಮರಿಯಮ್ ಧವಳೆ ಮೊದಲಿನ ಚರ್ಚೆಯಲ್ಲಿ ಭಾಗವಹಿಸಿದರು.

ವಿವಿಧ ದೇಶಗಳಲ್ಲಿ ಮಹಿಳಾ ಅಸಮಾನತೆ ಕುರಿತಂತೆ ವಿಭಿನ್ನ ಪರಿಸ್ಥಿತಿಗಳಿವೆ. ಇವುಗಳಲ್ಲಿ ಲಿಂಗ ಸಮಾನತೆಯ ಹೋರಾಟ ಒಂದು ಸರ್ವ ಸಾಮಾನ್ಯ ಎಳೆ. ಎಲ್ಲ ಅಸಮಾನತೆಯ ಸಮಾಜಗಳಲ್ಲಿ ಮಹಿಳೆಯರು ಅತ್ಯಾಚಾರ ಮತ್ತು ಹಿಂಸಾಚಾರಗಳಿಗೆ, ತಾರತಮ್ಯಗಳಿಗೆ ತುತ್ತಾಗಿದ್ದಾರೆ. ಆದ್ದರಿಂದ ಆದ್ದರಿಂದ, ಅಂತರಾಷ್ಟ್ರೀಯ ಮಹಿಳಾ ಆಂದೋಲನದ ಜಾಲವ್ಯವಸ್ಥೆಗಳನ್ನು ನಿರ್ಮಿಸಿಕೊಳ್ಳುವುದು, ಪರಸ್ಪರ ಕಲಿತುಕೊಳ್ಳುವುದು ಅಗತ್ಯವಾಗಿದೆ ಎಂಬುದು ಕಾರ್ಯಾಗಾರದಲ್ಲಿ ಮೂಡಿಬಂದ ಒಮ್ಮತ. ವಿಶ್ವಾದ್ಯಂತ ಬಲಪಂಥೀಯ ಶಕ್ತಿಗಳ ವಿರುದ್ಧದ ಹೋರಾಟಗಳನ್ನೂ ಮಹಿಳೆಯರು ಸೇರಬೇಕು ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಈ ಉತ್ಸವಕ್ಕೆ ಜರ್ಮನಿಯ ಡಿ ಲಿಂಕೆ ಯಿಂದ ಸುಮಾರು 40ಕ್ಕೂ ಹೆಚ್ಚಿನ ರಾಷ್ಟ್ರಗಳಿಂದ, 1500 ಕ್ಕೂ ಹೆಚ್ಚು ಮಹಿಳಾ ಹೋರಾಟಗಾರರು, ಚಿಂತಕರನ್ನು ಆಹ್ವಾನಿಸಲಾಗಿತ್ತು. ಸುಮಾರು 60 ಕ್ಕೂ ಹೆಚ್ಚು ಕಾರ್ಯಾಗಾರಗಳು, ನೂರಾರು ಚಲನಚಿತ್ರ / ಸಾಕ್ಷ್ಯ ಚಿತ್ರ ಪ್ರದರ್ಶನಗಳು, ಚರ್ಚೆಗಳನ್ನು ಆಯೋಜಿಸಲಾಗಿತ್ತು.

ಫೆಮಿನಿಸ್ಟ್ ಫ್ಯೂಚರ್ಸ್ ಫೆಸ್ಟಿವಲ್, ಜರ್ಮನಿಯಲ್ಲಿ ದಶಕಗಳಿಂದ ನಡೆದ, ಅತಿ ದೊಡ್ಡದಾದ ಕೂಟವಾಗಿತ್ತು. ಇದು "ಝೆಕೆ" ಎಂಬ ಹಿಂದೆ ಕಲ್ಲಿದ್ದಲು ಗಣಿಯಾಗಿದ್ದ ಜಾಗದಲ್ಲಿ ನಡೆಯಿತು. ದಂತಕಥೆಯಾಗಿರುವ ಸ್ಪ್ಯಾನಿಷ್ ಕಮ್ಯೂನಿಸ್ಟ್ ಮಹಿಳಾ ನಾಯಕಿ 'ಡೊಲೊರೆಸ್ ಇಬ್ರುರಿ– ಲಾ ಪ್ಯಾಶನೇರಿಯಾ–ನೀಡಿದ ಸ್ಪಷ್ಟ ಘೋಷಣೆಯ ಮೂಲಕ ಕೊನೆಗೊಂಡಿತು. ವಿಶ್ವಾದ್ಯಂತ ಸರ್ವಾಧಿಕಾರಶಾಹಿ, ಬಲಪಂಥೀಯ ಮತ್ತು ನವ ಫ್ಯಾಸಿಸ್ಟ್ ಪಕ್ಷಗಳ ದ್ವೇಷ ಪೂರ್ಣ ಧೋರಣೆಗಳ ವಿರುದ್ಧ ಹೋರಾಡಲು ಹಾಗೂ ಸಮಾನತೆ, ಶೋಷಣಾ–ಮುಕ್ತ ಮತ್ತು ಲಿಂಗ–ನ್ಯಾಯಯುತ ಜಗತ್ತನ್ನು ನಿರ್ಮಿಸುವ ಕನಸನ್ನು ಪುನರುಚ್ಚರಿಸಲಾಯಿತು. ●

JANASHAKTHI KANNADA VARA PATRIKE NOVEMBER 4-10 , 2019 Price: Rs. 10/- Date of Publication: 01 NOVEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಗೌಡಗೆರೆ ಮಾಯುಶ್ರೀ
ನಾಗರಾಜ ನಂಜುಂಡಯ್ಯ

ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ ಮೀಸಲಾತಿ ಅಗತ್ಯತೆ ಕುರಿತಂತೆ ಚಳುವಳಿ ಬಲಗೊಳ್ಳಬೇಕು

ಡಿಎಚ್‌ಎಸ್ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ, ಸಾಂಸ್ಕೃತಿಕ ಚಿಂತಕ ಡಾ: ಅರವಿಂದ ಮಾಲಗತ್ತಿ



ದಲಿತ ಹಕ್ಕುಗಳ ಸಮಿತಿ, ರಾಮನಗರದ ಡಾ: ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ "ಸಂವಿಧಾನದ ಮೂಲ ಆಶಯಗಳು ಮತ್ತು ಮೀಸಲಾತಿ ಮುಂದಿರುವ ಸವಾಲುಗಳು" ವಿಷಯ ಕುರಿತಂತೆ, ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣ'ವನ್ನು ಉದ್ಘಾಟಿಸುತ್ತಾ, ಮಾತನಾಡಿದ ಖ್ಯಾತ ಸಾಹಿತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ : ಅರವಿಂದ ಮಾಲಗತ್ತಿಯವರು, ಸಂವಿಧಾನದ ಮೂಲ ಆಶಯಗಳು ಜನರ ಅಂತರಂಗದ ಭಾಗವಾಗಬೇಕೆಂದರೆ, ಮಾಧ್ಯಮಿಕ ಶಾಲಾ ಹಂತದಲ್ಲೇ, ಸಂವಿಧಾನದ ಪ್ರತಿಗಳನ್ನು ಜನಸಾಮಾನ್ಯರಿಗೆ ಅವರ ಮಾತೃಭಾಷೆಗಳಲಲಿ ಉಚಿತವಾಗಿ ತಲುಪಿಸಬೇಕು, ಶಾಲಾ ಪಠ್ಯಗಳಲ್ಲಿ ಮಕ್ಕಳಿಗೆ ಕಲಿಕೆಯಾಗಬೇಕು ಎಂಬ ಅಭಿಪ್ರಾಯವನ್ನು ಬಲವಾಗಿ ಪ್ರತಿಪಾದಿಸಿದರು.

ಮೀಸಲಾತಿಯ ಮುಂದಿರುವ ಸವಾಲುಗಳು ಬಗ್ಗೆ ಮಾತನಾಡುತ್ತಾ, ಪ್ರಸ್ತುತ ನಮ್ಮ ಮುಂದಿರುವ ನಿಜವಾದ ಸವಾಲುಗಳೆಂದರೆ, ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿಯ ಅಗತ್ಯತೆ, ಇದನ್ನು ಕುರಿತಂತೆ ದೊಡ್ಡ ಚಳುವಳಿಯನ್ನು ರೂಪಿಸಬೇಕು ಎಂದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಸರ್ಕಾರಿ ಉದ್ಯೋಗಗಳಿಗೆ ಮಾತ್ರ ಸಂವಿಧಾನ ಬದ್ಧವಾದ ಮೀಸಲಾತಿ ಇದೆ. ಆದರೆ, ಇಂದು ಸರ್ಕಾರಿ ಉದ್ಯೋಗಗಳು ನಾಶವಾಗುತ್ತಿವೆ. ಖಾಸಗಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಯುಗವಾಗಿದೆ ಎಂದು ಮಾರ್ಮಿಕವಾಗಿ ಸರ್ಕಾರದ ನೀತಿಗಳನ್ನು ಟೀಕಿಸಿದರು. ಈ ಹಿನ್ನೆಲೆಯಲ್ಲಿ ಖಾಸಗೀ ಕ್ಷೇತ್ರಗಳಲ್ಲಿ ಮೀಸಲಾತಿ ಪ್ರಮುಖವಾಗಿ, ದಲಿತರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ಎಲ್ಲಾ ಬಡವರಿಗೆ ಮೀಸಲಾತಿಯನ್ನು ನೀಡುವಂತೆ, ಚಳುವಳಿಗಳು ಆಗ್ರಹಿಸಬೇಕು ಎಂದರು.

ಮೀಸಲಾತಿಯನ್ನು ಈಗಾಗಲೇ, ನಾವು ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನದ ಮೂಲಕ ದಕ್ಕಿಸಿ ಕೊಂಡಿದ್ದೇವೆ. ಅದನ್ನು ಮುಂದುವರಿಸಿಕೊಂಡು ಅದರ ಉಪಯೋಗವನ್ನು ಸಂಬಂಧಪಟ್ಟವರೆಲ್ಲರೂ ಅನುಭವಿಸುವಂತಾಗ ಬೇಕೆಂದರು. ವರ್ಣವ್ಯವಸ್ಥೆ,ಯ ಒಳಮರ್ಮವೇ ಈ ಅಸ್ಪೃಶ್ಯತೆ, ಇದು ಮನುಷ್ಯರನ್ನು ಹಿಂಡಿ ಹಿಪ್ಪೆ ಮಾಡಿರುವ ಹೊತ್ತಲ್ಲಿ, ಲಿಂಗ ಸಮಾನತೆ, ಜಾತ್ಯಾತೀತತೆ ಹಾಗೂ ಸಮಾನತೆಯ ಪರಿಕಲ್ಪನೆಯ ನಮ್ಮ ಸಂವಿಧಾನವನ್ನು ಸಂರಕ್ಷಿಸ ಬೇಕಾಗಿರುವುದು ನಮ್ಮೆಲ್ಲರ ಹೊಣೆಯಾಗಿದೆ. ಸರ್ವೋದಯ ಮತ್ತು ಕಲ್ಯಾಣ ರಾಜ್ಯದ ಮೂಲಕ ವಿಶ್ವ ಭೂಪಟದ ಮೇಲೆ ಭಾರತ ದೇಶದ ಅಭಿವೃದ್ಧಿಯನ್ನು ಪ್ರತಿಷ್ಠಾಪನೆ ಮಾಡಬೇಕೆ ವಿನಃ, ಕೇವಲ ಮಾತಿನ ಮೂಲಕ ಶಕ್ತಿಶಾಲಿ ದೇಶವಾದರೆ ಏನು ಪ್ರಯೋಜನವಿಲ್ಲವೆಂದು, ಪ್ರಸ್ತುತ ಆಡಳಿತಗಾರರ ಕಾರ್ಯವೈಖರಿಯ ನೀತಿಗಳನ್ನು ಹೆಸರಿಸಿದೆ ತಮ್ಮದೆ ಸಾಹಿತ್ಯಿಕ ಭಾಷೆಯಲ್ಲಿ ವ್ಯಾಖ್ಯಾನಿಸಿದರು. ಮತೀಯ-ಜಾತೀಯ ಹಾಗೂ ಕೋಮುವಾದಿ ರಾಷ್ಟ್ರವೆಂಬ ಅಪವಾದದಿಂದ ಮುಕ್ತಿ ಹೊಂದಲು "ಸಂವಿಧಾನ ರಕ್ಷತಿ, ರಕ್ಷಿತಃ" ಎಂಬ ವಾಕ್ಯ ಎಲ್ಲರ ನಾಲಿಗೆಯ ಮೇಲೆ ಹರಿದಾಡುವಂತಾಗ ಬೇಕೆಂದರು. ಇಂದು ಸಂವಿಧಾನವನ್ನು ಸುಡುತ್ತೇವೆ ಮತ್ತು ಇದನ್ನು ಬದಲಾವಣೆ ಮಾಡುತ್ತೇವೆ ಎನ್ನುವ ಅತಿರೇಕ ಸರಿಯಲ್ಲ. ಸಂವಿಧಾನದ ಆಶಯಗಳು ಶ್ರೇಷ್ಠವಾಗಿವೆ. ಯಾವ ಸಂವಿಧಾನ ಜೀವಂತವಾಗಿರುತ್ತದೊ, ಅದು ಟೀಕೆಗೆ ಒಳಪಡುತ್ತದೆ. ಆದರೆ, ಇದು ಸುಟ್ಟು ಹಾಕಿಸಿಕೊಳ್ಳುವಂತದಲ್ಲ. ಈ ನಿಟ್ಟಿನಲ್ಲಿ ಜವಾಬ್ದಾರಿಯಿಂದ ನಡೆದು ಕೊಳ್ಳಬೇಕಾಗಿದೆ.

ಪ್ರಜಾಪ್ರಭುತ್ವವ್ಯವಸ್ಥೆ ಗಟ್ಟಿಯಾಗಲು ಪ್ರಜಾಸತ್ತಾತ್ಮಕ ಸಂಘಟನೆಗಳಾಗಲಿ, ದಲಿತ ಸಂಘಟನೆಗಳಾಗಲಿ, ರಾಜಕೀಯ ವ್ಯವಸ್ಥೆಯಾಗಲಿ ಕಾಲಕಾಲಕ್ಕೆ ಚಲನಶೀಲತೆಯನ್ನು ಹೊಂದುವಂತಾಗಬೇಕು. ನಮ್ಮ ಅಲೋಚನೆಗಳು, ವ್ಯಾಖ್ಯಾನಗಳು ನಿಂತ ನೀರಾಗದೆ, ಹಿಗ್ಗುವ-ಕುಗ್ಗುವ ಅನಿವಾರ್ಯತೆಗಳ ಜೊತೆಗೆ ಯಾವಾಗಲೂ ಸಾಗುತ್ತಲೇ ಹೊಸ ಸನ್ನಿವೇಶಗಳಲ್ಲಿ ಎದುರಾಗುವ ಸವಾಲುಗಳನ್ನು ಮೆಟ್ಟಿ ನಿಲ್ಲುವಂತಾಗಬೇಕು. ಯಾವುದೇ ವಿಶ್ವವಿದ್ಯಾಲಯಗಳು ಮಾಡಲಾಗದಷ್ಟು ಸಾಮಾಜಿಕ ಅರಿವಿನ ಕಾರ್ಯವನ್ನು ಈ ನಾಡಿನ ನಿಮ್ಮಂತ ದಲಿತ ಸಂಘಟನೆಗಳು ಮಾಡಿರುವುದು ಹೆಮ್ಮೆಯ ಸಂಗತಿಯೆಂದು ಈ ವಿಚಾರ ಸಂಕಿರಣದ ಆಯೋಜಕರಿಗೆ ಮೆಚ್ಚಿಗೆ ವ್ಯಕ್ತ ಪಡಿಸುತ್ತಾ, ಮಾರ್ಕ್ಸ್‌ವಾದದಿಂದ ಮಾತ್ರ ಎಲ್ಲರಿಗೂ ಆರ್ಥಿಕ ಸಮಾನತೆ ದಕ್ಕಲು ಸಾಧ್ಯವೆಂದರು. ನಾನು ಕಾಲೇಜು ವಿದ್ಯಾರ್ಥಿದೆಸೆಯಿಂದಲೆ ಮಾರ್ಕ್ಸ್ ಮತ್ತು ಅಂಬೇಡ್ಕರ್ ರವರ ಚಿಂತನೆಗಳಿಗೆ ಜೋತು ಬಿದ್ದವನು ಎಂದು ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು.

ದಲಿತ ಹಕ್ಕುಗಳ ಸಮಿತಿಯ ಜಾಗೃತಿ ಮೂಡಿಸುವ ಇಂತಹ, ಚಿಂತನೆ ಮತ್ತು ಶಿಬಿರಗಳು ಎಪ್ಪತ್ತರ ದಶಕದ ದಲಿತ ಚಳುವಳಿಯ ಸಂಭ್ರಮ ಮತ್ತೆ ಧಾರಣೆಯಾಗಿ ಮುಂದವರಿಯುವಂತೆ ಗೋಚರಿಸುತ್ತಿದೆ. ಅಸ್ಪೃಶ್ಯತೆ ಅಳಿಸಿ ಹಾಕುವ ನಿಮ್ಮ ಚಳುವಳಿ ಯಶಸ್ಸು ಕಾಣಲಿ ಎಂದು ಮಾಲಗತ್ತಿಯವರು ಹಾರೈಸಿದರು. ಓದಿನ ಪ್ರಕ್ರಿಯೆ ಗೌಣವಾಗುತ್ತಿರುವ ಈ ಸಂದರ್ಭದಲ್ಲಿ, ಗ್ರಂಥಾಲಯಗಳೇ ಭೀತಿಗೊಳಗಾಗುವಂತೆ, ದಲಿತರು ಓದು-ಚಿಂತನೆ-ವಿಮರ್ಶೆಗಳ ಮೂಲಕ ಹೊಸ ರೀತಿಯ ರಕ್ತ ಸಂಚಲನೆಗೆ ಮುಂದಾಗಬೇಕು. ಬಾಬಾ ಸಾಹೇಬರ ವೈಚಾರಿಕ ನದಿಯುಲ್ಲಿ ಮಿಂದೆದ್ದ ಹೆಣಗಳು ಸಹಾ, ಜೀವಂತವಾಗಿ ಬಿಡುತ್ತವೆ. ಅಷ್ಟರ ಮಟ್ಟಿಗೆ ಅವರ, ಚಿಂತನೆ- ಅಲೋಚನಾ ಕ್ರಮಗಳಿಗೆ ಶಕ್ತಿ ಇದೆ ಎಂದು ಹೇಳುತ್ತಾ, ಮೂರು ದಿನಗಳ ಕಾಲ ನಡೆಯುವ ನಿಮ್ಮ ಜಾಗೃತಿ ಮೂಡಿಸುವ ಅಧ್ಯಯನ ಶಿಬಿರವು ಯಶಸ್ವಿಯಾಗಲಿ ಎಂದು ಶುಭಕೋರುತ್ತಾ, ತಮ್ಮ ಉದ್ಘಾಟನಾ ಭಾಷಣವನ್ನು ಮುಗಿಸಿದರು.

ಇದೇ ಸಂದರ್ಭದಲ್ಲಿ, ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ, ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡುತ್ತಾ, ಜಾತಿ ವಿನಾಶವು ಕೇವಲ ಭಾಷಣ ಮತ್ತು ಬರಹಗಳಿಂದ ಸಾಧ್ಯವಿಲ್ಲ. ಅದು ಮಾನಸಿಕ ಪರಿವರ್ತನೆಯಿಂದ ಮಾತ್ರ ಸಾಧ್ಯವೆಂದರು. ದಲಿತ ಚಳುವಳಿಗಳು ಇಂದು ಹೋರಾಟದ ಹಾದಿಯನ್ನು ಬಿಟ್ಟು, ಬಾಟಲಿಗಳಲ್ಲಿ ಬಿದ್ದ ಬೀಜಗಳಂತಾಗಿವೆ. ಆ ಬೀಜಗಳು ಬಾಟಲಿಗೆ ಬದಲು ಭೂಮಿಗೆ ಬಿತ್ತುವಂತಾಗಬೇಕು. ಇಲ್ಲದಿದ್ದರೆ, ಹೋರಾಟಗಳು ಮಾರಾಟವಾಗುತ್ತವೆ. ಮಾರಾಟವಾಗುವ ಸಮುದಾಯ ಎಂದಿಗೂ ಆಳುವ ಸಮುದಾಯವಾಗಲು ಸಾಧ್ಯವಿಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಕೆಲವು ವಾದಗಳು ಸರಿಯಿದ್ದರೂ, ವಾದಿಗಳ ತಪ್ಪು ವ್ಯಾಖ್ಯಾನದಿಂದ, ವಾದಗಳು ವ್ಯಾಧಿಗಳಾಗುತ್ತವೆ. ಬುದ್ಧಿ ಜೀವಿಗಳು ಸುದ್ದಿ ಜೀವಿಗಳಾಗುತ್ತಾರೆ ಎಂದು ಮೈಷಾಸುರ ಹೋರಾಟದ ಟೀಕಾಕಾರರ ಬಗ್ಗೆ ಸೂಚ್ಯವಾಗಿ ಟೀಕಿಸಿದರು.

ದಲಿತರ ಬಗ್ಗೆ ಮಾತಿನ ಮೂಲಕ, ನಾವು ದಲಿತರಾಗಿ ಹುಟ್ಟಬೇಕು ಎನ್ನುತ್ತಾರೆ. ಆದರೆ, ದಲಿತರು ಸಿದ್ದಪಡಿಸಿದ ಆಹಾರ ಪದಾರ್ಥಗಳನ್ನು ಮೇಲ್ವರ್ಗದವರು ಇಂದಿಗೂ ಬಳಸುವುದಿಲ್ಲ. ದಲಿತರ ಬಗ್ಗೆ ಮಾತನಾಡುವುದು, ಅವರ ಮನೆಗೆ ಬೇಟಿ ಕೊಡುವ ನಾಟಕ ಚಟವಾಗಿ ಬಿಟ್ಟಿದೆ. ಏಕೆಂದರೆ, ದಲಿತರು ಬಿಟ್ಟಿ ಬಿದ್ದಿದ್ದಾರೆ ಎಂದು ತಿಳಿದಿದ್ದಾರೆ.



ಆದ್ದರಿಂದ, ಬಾಬಾ ಸಾಹೇಬರು ಪ್ರತಿಪಾದಿಸಿದಂತೆ, ಹೋರಾಟಗಳ ಜೊತೆಗೆ, ದಲಿತರು, ರಾಜಕೀಯ ಅಧಿಕಾರವನ್ನು ಹಿಡಿಯಬೇಕು. ಸಂಸತ್ತನ್ನು ಪ್ರವೇಶಿಸಬೇಕು. ಅಲ್ಲಿ ಕಾನೂನುಗಳನ್ನು ನೀತಿ ನಿಯಮಗಳನ್ನು ರೂಪಿಸಿ ಒಂದು ಬಲಿಷ್ಟವಾದ ರಾಜಕೀಯ ಶಕ್ತಿಯಾಗಿ ಬೆಳೆಯಬೇಕು. ಆಳುವ ಸರ್ಕಾರಗಳಿಗೆ ಯಾವುದೇ ಸಂಘಟನೆಗಳು, ಸಂಘಟಕರು ಮಾರಾಟವಾದರೆ, ವಾದಗಳು ವ್ಯಾಧಿಗಳಾಗಿ, ಬುದ್ಧಿ ಜೀವಿಗಳು ಕೇವಲ ಸುದ್ದಿ ಜೀವಿಗಳಾಗುವ ಅಪಾಯವಿದೆ ಎಂದು ಎಚ್ಚರಿಸಿದ ಸ್ವಾಮೀಜಿಯವರು, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೂಲ ಆಶಯಗಳು ಉಳಿಯಬೇಕಾದರೆ, ಕ್ಷಣಿಕ ಆಮಿಷಗಳಿಗೆ ಬಲಿಯಾಗದೆ ಅರ್ಥಪೂರ್ಣ ಪ್ರಜೆಗಳಾಗಬೇಕು, ಆ ನಿಟ್ಟಿನಲ್ಲಿ ನಿಮ್ಮ ದಲಿತ ಹಕ್ಕುಗಳ ಸಮಿತಿ ಕೈಗೊಡಿರುವ ಇಂತಹ, ಕಾರ್ಯಕ್ರಮಗಳು ಶ್ಲಾಘನೀಯವೆಂದರು.

ಈ ವಿಚಾರ ಸಂಕಿರಣವನ್ನು ಉದ್ದೇಶಿಸಿ, ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ಮಾರುತಿ ಮಾನ್ಪಡೆ, ಛಲವಾದಿ ಮಠದ ಬಸವವಾದಿ ಶರಣರು, ಡಿ.ಎಸ್.ಎಂ.ಎಂ.ನ ರಾಷ್ಟ್ರೀಯ ಸಮಿತಿಯ ಸದಸ್ಯರಾದ ನಾಗರಾಜ ನಂಜುಂಡಯ್ಯ,, ಕರ್ನಾಟಕ ದೇವದಾಸಿ ಮಹಿಳೆ ಮತ್ತು ಮಕ್ಕಳ ವಿಮೋಚನಾ ಸಂಘದ ಅಧ್ಯಕ್ಷೆ ಮಾಳಮ್ಮ, ಪ್ರಾಂತ ರೈತ ಸಂಘದ ಯು.ಬಸವರಾಜು, ಡಿಎಚ್‌ಎಸ್ ನ ರಾಜ್ಯ ಸಹ ಸಂಚಾಲಕರಾದ ಎನ್. ರಾಜಣ್ಣ, ಏಸ್.ಜಿ.ವನಜಾ ಮಾತನಾಡಿದರು. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಡಿಎಚ್‌ಎಸ್ ನ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿಯವರು ವಹಿಸಿದ್ದರು. ಆರಂಭದಲ್ಲಿ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಎಸ್. ಮಹಾದೇವ್ ಸ್ವಾಗತ ಭಾಷಣ ಮಾಡಿದರು. ವಿಚಾರ ಸಂಕಿರಣದ ಮೂಲ ಉದ್ದೇಶಗಳನ್ನು ಕುರಿತಂತೆ, ಬಿ.ರಾಜಶೇಖರ ಮೂರ್ತಿ ಪ್ರಸ್ತಾವಿಕವಾಗಿ ಭಾಷಣ ಮಾಡಿದರು. ಪ್ರಗತಿಪರ ಚಿಂತಕಿ ವಿಜಯ ಕುಮಾರಿ, ಕಾರ್ಯಕ್ರಮದ ನಿರೂಪಣೆಯನ್ನು ಅರ್ಥಪೂರ್ಣವಾಗಿ ನೆರವೇರಿಸಿ ಕೊಟ್ಟರು. ಕೊನೆಯಲ್ಲಿ ಡಿಎಚ್‌ಎಸ್ ನ ರಾಜ್ಯ ನಾಯಕರಾದ, ಹೆಚ್.ಜಿ.ನಾಗಣ್ಣನವರ ವಂದನಾರ್ಪಣೆ ಯೊಂದಿಗೆ ವಿಚಾರ ಸಂಕಿರಣ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಕರ್ನಾಟಕದ ಅನೇಕ ಜಿಲ್ಲೆಗಳಿಂದ, ಸುಮಾರು 500 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಪ್ರಮುಖವಾಗಿ ಬೆಂಗಳೂರು ಸುತ್ತಲಿನ ಗ್ರಾಮಗಳಿಂದ, ರಾಮನಗರದ ಸುತ್ತಲಿನ ಹಳ್ಳಿಗಳಿಂದ, ನಗರ ಪ್ರದೇಶದಿಂದ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದ ವಿಚಾರ ಸಂಕಿರಣ, ಮೂರು ದಿನಗಳ ಕಾಲ ನಡೆಯುವ "ಅಸ್ಪೃಶ್ಯತಾ ಆಚರಣೆ ಮತ್ತು ಜಾತಿ ತಾರತಮ್ಯ ನಿರ್ಮೂಲನೆ" ಕುರಿತಂತೆ, ದಲಿತ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಅಭಿಯಾನದ ಭಾಗವಾಗಿ, ನಡೆಯುವ ರಾಜ್ಯ ಮಟ್ಟದ ಅಧ್ಯಯನ ಶಿಬಿರಕ್ಕೆ ಅರ್ಥಪೂರ್ಣವಾದ ಆರಂಭ ಒದಗಿಸಿಕೊಟ್ಟಿತು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**